
ಲಂಕೇಶ್

ಮೊರಾರ್ಜಿ ಶಾಲೆ ಶಿಕ್ಷಕರಿಗೆ ವಂಚನೆ

ಜೂನ್ 13, 2012 ಪುಟ 20 ರೂ. 14/-



ುರುವಂದನೆಯೋ ಬಿಜೆಪಿ ಮೇಳವೋ

ುಂಚಟಿಗರ ಂಡಾಯ

ಮಂಗಳೂರು


ಡಿಸಿಯೇ SEZ ದಲ್ಲಾಳಿ

ಕಾವೇರಿ ನಾಶಕ್ಕೆ ಶಾಸಕ ರಮೇಶ್‌ಬಾಬು ಕುಮ್ಮಕ್ಕು

ಚಳ್ಳಕೆರೆ

ರಘುಮೂರ್ತಿಗೆ ಕಾಂಗ್ರೆ ಟಿಕೆಟ್






ಣಿ ಣಿಕೆ

ಪೇಜಾವರರಿಗೆ ಪೂರ್ತಿ ಮರಳು

ಒಂದು ಪತ್ರ

ಅರವತ್ತಕ್ಕೆ ಅರಳು-ಮರಳು ಎಂಬತ್ತಕ್ಕೆ ಪೂರ್ತಿ ಮರಳು ಎಂಬ ಗಾದೆಯಂತೆ 80 ವರ್ಷದ ಪೇಜಾವರರಿಗೆ ಮಾನಸಿಕ ಸಮಸ್ಯೆ ಉಲ್ಬಣಗೊಳ್ಳುತ್ತಿರುವುದು ನಿಜ. ಅವರನ್ನು ಕರೆಯದೇ ಇದ್ದರೂ ಎಲ್ಲೆಡೆ ಮಧ್ಯಸ್ಥಿಕೆ ವಹಿಸಲು ತಾನೇ ಓಡುವುದು, ಕೇಳದೇ ಇದ್ದರೂ ಎಲ್ಲಾ ವಿಷಯದ ಬಗ್ಗೆ ಸಾರ್ವಜನಿಕವಾಗಿ ಅಭಿಪ್ರಾಯ ವ್ಯಕ್ತಪಡಿಸುವುದು ಅವರಿಗೆ ಅಭ್ಯಾಸವಾಗಿಬಿಟ್ಟಿದೆ. ತಾವು ಸರ್ವಸಂಗ ಪರಿತ್ಯಾಗಿ ಎನ್ನುವುದನ್ನೇ ಮರೆತು ಬಿಟ್ಟು ಎಲ್ಲಾ ವಿಷಯದ ಬಗ್ಗೆ (ಏಡ್ಸ್ ಮತ್ತು ಬ್ಲೂ-ಬಾಯ್ಸ್ ಬಗ್ಗೆಯೂ) ಬೃಹಸ್ಪತಿಯಂತೆ ಮಾತನಾಡುತ್ತಾರೆ. ಶುದ್ಧ ಸಸ್ಯಾಹಾರಿ ಭೋಜನಕೂಟದಲ್ಲೂ ಬ್ರಾಹ್ಮಣರು ಮಾಂಸಾಹಾರಿಗಳೊಂದಿಗೆ ಸಹಪಂಕ್ತಿ ಭೋಜನ ಮಾಡಿದರೆ ಅವರ ಋಣಾತ್ಮಕ ಗುಣಗಳು. (ನೆಗೆಟಿವ್ ಎನರ್ಜಿ) ಬ್ರಾಹ್ಮಣರಿಗೂ ಹರಡುತ್ತದಂತೆ. (ಪಾಸಿಟಿವ್-ನೆಗೆಟಿವ್ ಎನರ್ಜಿ ಎಂಬುದು ಚೀನಿಯರ ಫೆಂಗ್‌ಶೈಯ ಕಲ್ಪನೆ ಅಷ್ಟೇ. ಹಾವು, ಜಿರಳೆ, ಕಪ್ಪೆ ತಿನ್ನುವ ಚೀನಿಯರ ಫೆಂಗ್‌ಶೈ ಭಾರತದ ಸಸ್ಯಾಹಾರಿ ಬ್ರಾಹ್ಮಣರಿಗೆ ಹೇಗೆ ಅನ್ವಯ?)

ಹಾಗಾದರೆ ಪಕ್ಕಾ ಭ್ರಷ್ಟರೊಂದಿಗೆ, ದುಷ್ಟ ರಾಜಕಾರಣಿಗಳೊಂದಿಗೆ, ಮಾಜಿ ಡಾನ್, ಶರಾಬು ದೊರೆಗಳೊಂದಿಗೆ ವೇದಿಕೆ ಹಂಚಿಕೊಳ್ಳುವುದು, ಒಡನಾಟ ಇಟ್ಟುಕೊಳ್ಳುವುದು, ಕಿವಿಗೆ ಬಾಯಿಯಿಟ್ಟು ಮಾತನಾಡುವುದರಿಂದ ಈ ಎಲ್ಲಾ ದುಷ್ಟರ ಕುಕರ್ಮಗಳ ನೆಗೆಟಿವ್ ಎನರ್ಜಿ ಪೇಜಾವರರಿಗೆ ಈಗಾಗಲೇ ಮೆತ್ತಿಕೊಂಡಿರಬಹುದಲ್ಲವೇ?



ಅವರೇ ಹೇಳುವ ಪ್ರಕಾರ ಎಲ್ಲಾ ಚರ್ಮದ ವಸ್ತುಗಳಲ್ಲೂ ನೆಗೆಟಿವ್ ಎನರ್ಜಿ ಇರಲೇಬೇಕು ತಾನೆ! ಗೋಹತ್ಯೆ ನಿಷೇಧಕ್ಕೆ ಆಗ್ರಹಿಸುತ್ತಿರುವ ಅಷ್ಟ ಮಠಾಧೀಶರಲ್ಲಿ ಕೆಲವು ತರುಣ ಸ್ವಾಮಿಗಳು ಈಗಲೂ ಕ್ರಿಕೆಟ್ ಆಡುತ್ತಾರೆ. ಟಿವಿಯಲ್ಲಿ IPL ಮ್ಯಾಚ್‌ಗಳನ್ನು, ಅದರೊಂದಿಗೆ ಚಿಯರ್‌ಗರ್ಲ್ಸ್‌ಗಳ ಡ್ಯಾನ್ಸ್‌ಗಳನ್ನು ಮತ್ತು ಕುಡುಕ ಖಾನ್‌ಗಳ ಗೂಂಡಾಗಿರಿಯನ್ನೂ ನೋಡುತ್ತಾರೆ. ಇದರಿಂದ ಅವರ ಬ್ರಹ್ಮಚರ್ಯ ಹಾಳಾಗುವುದಿಲ್ಲವೇ? ಸ್ವಾಮಿಗಳು ಆಡುವ ಕ್ರಿಕೆಟ್ ಬಾಲ್‌ಗಳ ಮೇಲ್ಪದರು ದನದ ಚರ್ಮದ್ದು! ಶಿರೂರು ಶ್ರೀಗಳು ಬಾರಿಸುವ ಡ್ರಮ್, ತಬಲಾಗಳೂ ಚರ್ಮದ್ದು. ಮಠಾಧೀಶರು ಉಪಯೋಗಿಸುವ ಕೈಗಡಿಯಾರದ ಸ್ಟ್ರಾಪ್, ಮೊಬೈಲ್ ಕವರ್, ಬೆಲ್ಟ್, ಬ್ಯಾಗುಗಳೆಲ್ಲಾ ಚರ್ಮದ್ದು. ವಿದೇಶಿ ಭಕ್ತರು ಕೊಟ್ಟಿರುವ ಬ್ಯಾಗು ಪರ್ಸುಗಳು ಹಾವು ಅಥವಾ ಮೊಸಳೆ ಚರ್ಮದ್ದು. ಪ್ರಾಣಿಗಳ ಮಾಂಸ ತಿನ್ನುವುದು ನಿಷಿದ್ಧವಾದರೆ, ಪ್ರಾಣಿಗಳ ಚರ್ಮದ ವಸ್ತುಗಳನ್ನು ಬಳಸುವುದೂ ಮಠಾಧೀಶ ಹಾಗೂ ಪುರೋಹಿತರಿಗೆ ನಿಷಿದ್ಧ ತಾನೇ?

ತ್ರಿಮತಸ್ಥರು ಒಂದಾಗಬೇಕು, ಪರಸ್ಪರ ಮದುವೆಯಾಗಬೇಕು ಎಂದು ಪೇಜಾವರರು ಹೇಳಿದ್ದಾರೆ. ಆದರೆ ಹಿಂದೂಗಳೆಲ್ಲಾ ಒಂದಾಗಬೇಕು, ಪರಸ್ಪರ ಮದುವೆ ಸಂಬಂಧ ಬೆಳೆಸಬೇಕು ಎಂದು ಅವರು ಹೇಳುತ್ತಿಲ್ಲ. ಹವ್ಯಕ ಬ್ರಾಹ್ಮಣರಲ್ಲಿ ಈಗ ಹೆಣ್ಣು ಮಕ್ಕಳ ತೀವ್ರ ಕೊರತೆಯಿದ್ದು ಅರ್ಧಕ್ಕರ್ಧ ಹವ್ಯಕ ಹುಡುಗರು ಈಗ ಬ್ರಾಹ್ಮಣೇತರ ಹುಡುಗಿಯರನ್ನು ಮದುವೆಯಾಗುವುದು ಅನಿವಾರ್ಯವಾಗಿದೆ. ಸದ್ಯದಲ್ಲೇ ಇಂತಹ ಹೆಣ್ಣು ಮಕ್ಕಳ ಕ್ಷಾಮ ಮಾಧ್ವರನ್ನೂ ಕಾಡಲಿದೆ. ಆಗ ಅಂತರ್ಜಾತಿ ವಿವಾಹ ಅನಿವಾರ್ಯ. ಇದುವೇ ಪೇಜಾವರರ ಆತಂಕಕ್ಕೆ ಮೂಲ ಕಾರಣ. ತ್ರಿಮತಸ್ಥರು ಒಂದಾಗಬೇಕು, ಪರಸ್ಪರ ತಾರತಮ್ಯ ಮಾಡಬಾರದು ಎಂದು ಹೇಳುವ ಉಡುಪಿ ಮಠಾಧೀಶರುಗಳು ದೇವರು-ದೇವರುಗಳಲ್ಲೇ ತಾರತಮ್ಯ ಮಾಡುತ್ತಾರೆ. ಶಿವನಿಗಿಂತ ವಿಷ್ಣು ಉನ್ನತ ಎಂದು ಆಡಿಗಡಿಗೆ ಹೇಳುವುದು ಮಾತ್ರವಲ್ಲ, ದೇವಸ್ಥಾನಗಳಲ್ಲಿ ಶಿವ-ದುರ್ಗೆ, ಸುಬ್ರಹ್ಮಣ್ಯನಿಗೆ ಪೂಜೆ ಮಾಡಿ ಕೊನೆಗೆ ಅದರ ಫಲ ಕೃಷ್ಣನಿಗೆ ಅರ್ಪಿಸಿ "ಕೃಷ್ಣಾರ್ಪಣ-ಮಸ್ತು" ಎಂದು ಹೇಳುವುದನ್ನು ಎಂದೂ ಮರೆಯುವುದಿಲ್ಲ.

ಪೇಜಾವರರು ಸರ್ವಜ್ಞನಂತೆ ಎಲ್ಲಾ ವಿಷಯದಲ್ಲೂ ಮಾತನಾಡುವಂತೆ, ಮೂಗು ತೂರಿಸುವಂತೆ ಹುರಿದುಂಬಿಸುತ್ತಿರುವವರು ಸಂಘ ಪರಿವಾರದವರು. ಇದೊಂದು ಮನೋವೈಜ್ಞಾನಿಕ ಪ್ಲಾನ್. ಹೀಗೆ ಎಲ್ಲಾ ವಿಷಯದಲ್ಲೂ ಮೂಗು ತೂರಿಸಿ ಆ ವಿಷಯವನ್ನು ಹೈಜಾಕ್ ಮಾಡಿ ಪೇಜಾವರರು ಜನಸಾಮಾನ್ಯರ ಮಾನಸಿಕತೆಯ ಮೇಲೆ ಹತೋಟಿ ಸಾಧಿಸಿ, ನಂತರ ಅದನ್ನು ಚುನಾವಣೆಯಲ್ಲಿ ನಗದೀಕರಿಸುವುದೇ ಹಿಂದೂತ್ವವಾದಿಗಳ ಹುನ್ನಾರು.

-ಪ್ರವೀಣ್.ಎಸ್.ಶೆಟ್ಟಿ, ಮಂಗಳೂರು

ಲವ್ ಜೆಹಾದ್ ಮತ್ತು ಮತಾಂತರ ರಾಜ್ಯ ಎದುರಿಸುತ್ತಿರುವ ದೊಡ್ಡ ಅಪಾಯಗಳಂತೆ!

ನಗುಮುಖದ ಮುಖ್ಯಮಂತ್ರಿಯ ನೀಚಬುದ್ಧಿಯ ನಾಲಿಗೆ

ಬಿಜೆಪಿ ನಾಯಕರ ನೀಚತನ ಎಷ್ಟು ಹೇಳಿದರೂ ಮುಗಿಯದ ಕತೆ. ಆಡಿದ್ದನ್ನೇ ಆಡುವ ಕಿಸಬಾಯಿದಾಸಯ್ಯನಂತೆ ಅವರ ಪಾಪಕೃತ್ಯಗಳ ಬಗ್ಗೆ ಮತ್ತೆಮತ್ತೆ ಹೇಳಲೇಬೇಕಾದ ಪಾಡಿನಿಂದ ಆ ಪಕ್ಷ ಜಾಗ ಖಾಲಿ ಮಾಡುವವರೆಗೂ ಮುಕ್ತಿ ಇಲ್ಲ. ಬಿಜೆಪಿ ಪಿಶಾಚಿಗಳು ಎಂತೆಂತಹ ಭಯಾನಕ ಯೋಜನೆಗಳನ್ನು ರೂಪಿಸಬಲ್ಲರು ಎಂಬುದಕ್ಕೆ ಇಲ್ಲೊಂದು ಉದಾಹರಣೆ ನೋಡಿ: ಮೊನ್ನೆ ತಾ. 21.5.12 ಮಂಗಳವಾರ, ಮಂಗಳೂರಿನ ನೆಹರೂ ಮೈದಾನದಲ್ಲಿ ರಾಜ್ಯ ಬಿಜೆಪಿ ಯುವ ಮೋರ್ಚಾದ ಒಂದು ಬೃಹತ್ ರ್‍ಯಾಲಿ ನಡೆಯಿತು. ದಕ್ಷಿಣ ಕನ್ನಡ ಜಿಲ್ಲೆಯ ಮೂಲೆಮೂಲೆಗಳಿಂದ ಬಾಡಿಗೆ ಬಸ್‌ಗಳಲ್ಲಿ ಬಾಡಿಗೆ ದೇಶಭಕ್ತರನ್ನು ರ್‍ಯಾಲಿಗೆ ತರಲಾಗಿತ್ತು. ಮುಖ್ಯಮಂತ್ರಿ ಸದಾನಂದ ಗೌಡ, ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ, ಶೆಟ್ಟರ್, ಕಾಗೇರಿ ಮತ್ತು ಇತರ ನಾಯಕರುಗಳು ಇದರಲ್ಲಿ ಹಾಜರಿದ್ದರು. ಸದಾನಂದ ಗೌಡ ಮತ್ತು ಈಶ್ವರಪ್ಪ-ಇಬ್ಬರೂ ತಮ್ಮ ಭಾಷಣದಲ್ಲಿ ಭಯೋತ್ಪಾದನೆ, ನಕ್ಸಲ್ ಚಟುವಟಿಕೆ, ಭ್ರಷ್ಟಾಚಾರ(!) ಮುಂತಾದ ಸಮಸ್ಯೆಗಳ ಜೊತೆ ಲವ್ ಜೆಹಾದ್ ಮತ್ತು ಮತಾಂತರಗಳ ಬಗ್ಗೆ ಕೂಡ ರಾಜ್ಯದ ಜನ ಜಾಗ್ರತೆ ವಹಿಸಬೇಕು ಎಂದು ಹೇಳಿದರು. ಬಿಜೆಪಿ ಮತ್ತು ರಾಜ್ಯದಲ್ಲಿ ಅದರ ಸರ್ಕಾರ ಈಗ ಎದುರಿಸುತ್ತಿರುವ ಬಿಕ್ಕಟ್ಟಿನ ನಡುವೆಯೇ ನಡೆದ ಈ ರ್‍ಯಾಲಿ, ರಾಜ್ಯದ ಮುಸ್ಲಿಮ್ ಮತ್ತು ಕ್ರೈಸ್ತ ಸಮುದಾಯಗಳ ವಿರುದ್ಧ ಇನ್ನಷ್ಟು ದ್ವೇಷ ಕೆರಳಿಸುವ ಉದ್ದೇಶ ಹೊಂದಿದೆ ಎಂಬುದು ಈ ಭಾಷಣಗಳಿಂದಲೇ ಸ್ಪಷ್ಟವಾಗುತ್ತದೆ. ಜೊತೆಗೆ ತಮ್ಮ ಒಳಜಗಳ ಏನಿದ್ದರೂ ತಮ್ಮ ಪಕ್ಷದ ಅಜೆಂಡಾ ಮಾತ್ರ ಸದಾ ಜಾರಿಯಲ್ಲಿರುತ್ತದೆ ಎಂಬ ಸಂದೇಶವೂ ಆ ರ್‍ಯಾಲಿಯಲ್ಲಿತ್ತು.

ಪತ್ರಿಕೆಯ ಓದುಗರಿಗೆ ಲವ್ ಜೆಹಾದ್ ಎಂದರೆ ಏನು ಎಂದು ವಿವರಿಸಬೇಕಾಗಿಲ್ಲ. ಸ್ಥಳೀಯ ಮುಸ್ಲಿಮ್ ಯುವಕರು, ಹಿಂದೂ ಯುವತಿಯರನ್ನು ಪ್ರೇಮಿಸುವ ನಾಟಕ ಆಡಿ, ಮತಾಂತರಗೊಳಿಸುವುದಕ್ಕಾಗಿ ವಿದೇಶದಿಂದ ಹಣ ಬರುತ್ತಿದೆ ಎಂದೂ, ಆ ಹಣದಿಂದ ಮುಸ್ಲಿಮ್ ಯುವಕರು ಬೈಕು, ಗಾಗಲ್ಸ್, ಜೀನ್ಸ್ ಇತ್ಯಾದಿ ಶೋಕಿ ವಸ್ತುಗಳನ್ನು ಖರೀದಿಸಿ, ಹಿಂದೂ ಯುವತಿಯರನ್ನು ಪಾಕೆಟ್ ಮಾಡಿಕೊಂಡು ಮತಾಂತರಿಸುತ್ತಿದ್ದಾರೆ ಎಂದೂ ಸಂಘ ಪರಿವಾರ, ಹಲವು ವರ್ಷಗಳಿಂದ ಪ್ರಚಾರ ಮಾಡುತ್ತಿದೆ. ತಮ್ಮ ಭಗಿನಿಯರ ಬಗ್ಗೆ ಈ ಚೆಡ್ಡಿ ಸೋದರರಿಗೆ ಅದೆಷ್ಟು ಗೌರವ! ಈ ಹಿಂದೂ ಭಗಿನಿಯರು ಚಪ್ಪಲಿ ಹಿಡಿದು ಬೀದಿಬೀದಿಗಳಲ್ಲಿ ನಿಂತು, "ನಮ್ಮನ್ನು ಏನು ಅಂತ ತಿಳಿದುಕೊಂಡಿದ್ದೀರಿ?" ಎಂದು ಈ ವೀರರನ್ನು ವಿಚಾರಿಸಿಕೊಳ್ಳುವವರೆಗೆ ಪ್ರಾಯಶಃ ಈ ಲವ್ ಜೆಹಾದ್‌ನ ಕಟ್ಟುಕತೆ ಚಲಾವಣೆಯಲ್ಲಿ ಇರುತ್ತದೆ.

ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬಂಟವಾಳ, ಪುತ್ತೂರು, ಸುಳ್ಯ ಮುಂತಾದ ಊರುಗಳು, ಈ ತಥಾಕಥಿತ ಲವ್ ಜೆಹಾದ್ ವಿರುದ್ಧ ಚೆಡ್ಡಿ ಪಡೆಗಳ ಕಾರ್ಯಾಚರಣೆಯಿಂದ ಕೆಟ್ಟ ಹೆಸರು ಪಡೆದುಕೊಂಡಿವೆ; ಮಂಗಳೂರಂತೂ ಜಾಗತಿಕ ಕುಖ್ಯಾತಿಯನ್ನೇ ಗಳಿಸಿದೆ. ಜಿಲ್ಲೆಯ ಅನೇಕ ಕಾಲೇಜು ಕಾರಿಡಾರು, ಬಸ್‌ಸ್ಟ್ಯಾಂಡ್, ಹೋಟೆಲು, ಐಸ್‌ಕ್ರೀಮ್ ಪಾರ್ಲರ್, ಸಿನಿಮಾ ಥೇಟರು ಮುಂತಾದ ತೆರೆದ ಸ್ಥಳಗಳಲ್ಲಿ "ನಮ್ಮ" ಹುಡುಗಿಯರ ಜೊತೆ" "ಅವರ ಹುಡುಗರು" ಇದ್ದರು ಅಥವಾ ಬಸ್ಸು, ಕಾರುಗಳಲ್ಲಿ ಒಟ್ಟಿಗೇ ಪ್ರಯಾಣಿಸುತ್ತಿದ್ದರು ಎಂಬ ಕಾರಣಕ್ಕೆ "ಅವರ ಹುಡುಗರ" ಅರ್ಥಾತ್ ಮುಸ್ಲಿಮ್ ಯುವಕರ ಮೇಲೆ ಹಲ್ಲೆಗಳು ನಡೆದಿವೆ. ಕೆಲವು ಸಂದರ್ಭಗಳಲ್ಲಿ ಹೀಗೆ "ಸಿಕ್ಕಿಬಿದ್ದ ಯುವಕ ಯುವತಿಯರನ್ನು" (ಮಂಗಳೂರಿನ ಪತ್ರಿಕೆಗಳು ಬಳಸುವ ಭಾಷೆ ಇದು) ಚೆಡ್ಡಿಗಳು ಸ್ಥಳೀಯ ಪೊಲೀಸು ಠಾಣೆಗೆ ಒಪ್ಪಿಸಿದ್ದೂ ಇದೆ. ಪೊಲೀಸರು ಯುವತಿಯರ ಹೆತ್ತವರನ್ನು ಠಾಣೆಗೆ ಕರೆಸಿ "ಬುದ್ಧಿವಾದ" ಹೇಳಿದ ಕುರಿತು ಸಹ ವರದಿಗಳಿವೆ (ಪೊಲೀಸರು ಏನು ಬುದ್ಧಿವಾದ ಹೇಳಿದರೊ!) ಆದರೆ ಲವ್ ಜೆಹಾದ್ ಹೆಸರಲ್ಲಿ ಸಂಘಪರಿವಾರ ಸೃಷ್ಟಿಸಿದ ಕೋಲಾಹಲ ಏನೇ ಇರಲಿ ರಾಜ್ಯದ ಪೊಲೀಸು ವರಿಷ್ಠಾಧಿಕಾರಿಗಳೇ ರಾಜ್ಯ ಹೈಕೋರ್ಟಿಗೆ ಈ ಕುರಿತು ಸಲ್ಲಿಸಿದ ಅಫಿಡವಿಟ್‌ನಲ್ಲಿ ರಾಜ್ಯದಲ್ಲಿ ಒಂದೇ ಒಂದು ಲವ್ ಜೆಹಾದ್ ಪ್ರಕರಣವೂ ನಡೆದಿಲ್ಲ ಎಂದು ಹೇಳಿದ್ದಾರೆ. ಲವ್ ಜೆಹಾದ್ ಎಂಬುದು ಒಂದು ಹಾಸ್ಯಾಸ್ಪದ ಕಟ್ಟುಕತೆ ಎಂದು ಎಂತಹ ದಡ್ಡನಿಗಾದರೂ ತಕ್ಷಣ ಹೊಳೆದೀತು! ಆದಾಗ್ಯೂ ರಾಜ್ಯ ಮುಖ್ಯಮಂತ್ರಿಗಳೇ ಮಂಗಳೂರಿನ ಸಾರ್ವಜನಿಕ ಸಭೆಯಲ್ಲಿ ಅದನ್ನು ಪ್ರಸ್ತಾಪಿಸುತ್ತಿರುವುದರ ಮರ್ಮವೇನು? ರಾಜ್ಯಕ್ಕೆ ಎದುರಾಗಿರುವ ಈ ಲವ್ ಜೆಹಾದ್‌ನ ಅಪಾಯದ ಕುರಿತು ಜನರನ್ನು ಎಚ್ಚರಿಸಲು ಮುಖ್ಯಮಂತ್ರಿ



ಮಂಗಳೂರು ನಗರವನ್ನೇ ಆಯ್ದುಕೊಂಡರು ಎಂಬುದು ಕೂಡ 'ಅರ್ಥಗರ್ಭಿತ'ವಾಗಿದೆ. ತಾವು ಮಾಡುತ್ತಿರುವ ಆಪಾದನೆ ಸತ್ಯವೆಂದು ಸ್ವತಃ ಅವರಾದರೂ ನಂಬುತ್ತಾರಾ? ರಾಜ್ಯದಲ್ಲಿ ಲವ್ ಜೆಹಾದ್ ನಡೆಯುತ್ತಿರುವುದೇ ಹೌದಾದರೆ ನಮ್ಮ ಪೊಲೀಸು ಇಲಾಖೆ ಏನು ಮಾಡುತ್ತಿದೆ? ರಾಜ್ಯದಲ್ಲಿ ಗೃಹಮಂತ್ರಿ ಇದ್ದಾರಾ? ಸತ್ತಿದಾರಾ? ಹೀಗೆ ಪ್ರಶ್ನಿಸಬೇಕಾದ ಅಗತ್ಯವೇ ಇಲ್ಲ. ರಾಜ್ಯ ಗೃಹಮಂತ್ರಿಗಳು ಜೀವಂತವಾಗಿದ್ದಾರೆ, ಅವರು ನೂರು ವರ್ಷ ಬಾಳಲಿ. ತಾವು ಹೇಳುತ್ತಿರುವುದು ಹಸಿ ಸುಳ್ಳು ಎಂದು ಮುಖ್ಯಮಂತ್ರಿಗಳಿಗೆ ಗೊತ್ತಿದೆ; ಅವರದ್ದು ಉದ್ದೇಶ ಪೂರ್ವಕವಾಗಿ ಹೇಳಿದ ಸುಳ್ಳು; ತಮ್ಮ ಪಕ್ಷದ ಸಿದ್ಧಾಂತವನ್ನು ಅವರು ಅನುಷ್ಠಾನಕ್ಕೆ ತರುತ್ತಿರುವ ರೀ[ತಿ] ಅದು.

ಹಿಂದೂಗಳು, ಮುಸ್ಲಿಮರು ಮತ್ತು ಕ್ರೈಸ್ತರು ಸ್ನೇಹದಲ್ಲೋ ಜಗಳವಾಡುತ್ತಲೋ ಈಗಲೂ ಒಟ್ಟಿಗೆ ಬದುಕುವುದನ್ನು ಬಿಜೆಪಿ ಬಯಸುವುದೂ ಇಲ್ಲ, ಸಹಿಸುವುದೂ ಇಲ್ಲ. ಒಬ್ಬರ ಮುಖ ಇನ್ನೊಬ್ಬರು ನೋಡದಂತೆ ಈ ಸಮುದಾಯಗಳನ್ನು ಶಾಶ್ವತವಾ[ಗಿ] ಬೇರ್ಪಡಿಸುವುದೇ ಆ ಪಕ್ಷದ ಅಂತಿಮ ಗುರಿ. ಅದ[ಕ್ಕಾಗಿ] ಚೆಡ್ಡಿ ಪಟಾಲಂ ಈಗಾಗಲೇ ಮುಸ್ಲಿಮ್ ಮತ್ತು ಕ್ರೈ[ಸ್ತ] ಸಮುದಾಯಗಳ ವಿರುದ್ಧ ಯುದ್ಧ ಶುರು ಮಾಡಿಯಾಗಿ[ದೆ]. ಮುಸ್ಲಿಮರ ವಿರುದ್ಧ ನಿರಂತರ ಹಿಂಸಾಚಾರ ಮತ್ತು ನಿರಂತ[ರ] ಅಪಪ್ರಚಾರಗಳ ಜೊತೆ, ಎರಡು ವರ್ಷಗಳ ಕೆಳಗೆ ಚರ್ಚ್ ದಾಳಿ, ತದನಂತರ ಆ ಸಮುದಾಯದ ವಿರು[ದ್ಧ] ಬಲಾತ್ಕಾರದ ಮತಾಂತರದ ಸುಳ್ಳು ಆರೋ[ಪ] ಹೊರಿಸುವುದರ ಮುಖಾಂತರ ಕರ್ನಾಟಕದಲ್ಲಿ ಈ ಯುದ್ಧ ಬಿರುಸಾಗಿ ನಡೆದಿದೆ; ಮಂಗಳೂರಿನ ಮುಖ್ಯಮಂತ್ರಿ ಮಾಡಿದ ಭಾಷಣ ಮುಸ್ಲಿಮ್ ಮ[ತ್ತು] ಕ್ರೈಸ್ತ ಸಮುದಾಯಗಳ ವಿರುದ್ಧ ಬಿಜೆಪಿಯ ಯುದ್ಧತಂತ್ರ[ದ] ಒಂದು ಭಾಗವಷ್ಟೆ. ಹಾಗಾಗಿ ಅವರಿಗೆ 'ಆಚಾರವಿಲ್ಲದ ನಾಲಿಗೆ, ನಿನ್ನ ನೀಚಬುದ್ಧಿಯ ಬಿಡು ನಾಲಿಗೆ" ಎಂ[ಬ] ಪುರಂದರದಾಸರ ಹಿತವಾದ ಹೇಳಿ ಉಪಯೋಗವಿ[ಲ್ಲ]. ಆದರೆ ಬಿಜೆಪಿಯ ನೀಚ ಹುನ್ನಾರಗಳ ಬಗ್ಗೆ ರಾಜ್ಯದ ಜನ ಇನ್ನಾದರೂ ಜಾಗೃತರಾಗಬೇಕಿದೆ.


• ಜೆ. ರಾಜಶೇಖ[ರ]

ಸ್ವರ್ಗ'ದ ಒಂದು ಭಾಗದಲ್ಲಿ ಮಕ್ಕಳೊಂದಿಗೆ...

ಇಶಾ, ಸಮರ್ ಮತ್ತು ಸಮಯ್‌ನ ಬೇಸಿಗೆ ರಜೆ ಮುಗಿಯುತ್ತಾ ಬರುತ್ತಿತ್ತು. ರಜೆ ಸಮಯದಲ್ಲಿ ಅಮ್ಮ ಮತ್ತು ಈ ಮೂವರು ಮಕ್ಕಳನ್ನು ಒಂದೆರಡು ದಿನಗಳ ಮಟ್ಟಿಗೆ ಎಲ್ಲಿಗಾದರೂ ಟ್ರಿಪ್ ಕರೆದುಕೊಂಡು ಹೋಗಬೇಕೆಂಬ ನನ್ನ ಆಶೆ ಈಡೇರಿರಲಿಲ್ಲ. ಅವರನ್ನೆಲ್ಲ ಎಲ್ಲಿಗೆ ಕರೆದುಕೊಂಡು ಹೋಗುವುದು? ಎಲ್ಲಿಗೆ ಹೋದರೂ



...ರಿಯೋ ಸೇವೆ, ಅವರ ರಜೆ ಬೇರೆ ಮುಗಿಯುತ್ತಿದೆ ...ಎಂದು ನಾನು ಚಿಂತಿಸುತ್ತಿದ್ದಾಗಲೇ ಒಂದು ದಿನ ನಮ್ಮ ಶಿವಸುಂದರ್ ಅವರು ಅನಿಲ್ ಕೊಲಾಸೊ ಎಂಬುವವರ ಬಗ್ಗೆ ಹೇಳಿದರು. ರಾಜ್ಯದ ಇತರ ಕಡೆಯಂತೆ ಮಲೆನಾಡಿನ ಜನರ ಬದುಕಿನ ಸ್ಥಿತಿಗತಿ ಬಗ್ಗೆ ಅವರ ಸ್ನೇಹಿತರ ತಂಡ ...ತಿ ಮಾಡಲು ಹೋಗಿದ್ದಾಗ ಅನಿಲ್ ಕೊಲಾಸೊ ಅವರು ...ವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಆ ತಂಡಕ್ಕೆ ವಿವರಿಸಿದ್ದರು.







ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಹತ್ತಿರ 450 ಎಕರೆ ಕಾಫಿ ತೋಟವನ್ನು ಹೊಂದಿರುವ ಕೊಲಾಸೊ ಕುಟುಂಬ ಇತ್ತೀಚೆಗೆ ಕೂಲಿ ಕಾರ್ಮಿಕರ ಅಭಾವವನ್ನು ಎದುರಿಸುತ್ತಿರುವುದರಿಂದ, ಕಾಫೀಯನ್ನೇ ಅವಲಂಬಿಸದಿರಲು ತಮ್ಮ ತೋಟದಲ್ಲಿ ಹೋಮ್ ಸ್ಟೇಯನ್ನು ಪ್ರಾರಂಭಿಸಿದ್ದಾರೆಂದೂ, ಅದು ಚೆನ್ನಾಗಿ ನಡೆಯುತ್ತಿದೆಯೆಂದೂ ಶಿವಸುಂದರ್ ಹೇಳಿದಾಗ ನಾನು ಮನಸ್ಸಿನಲ್ಲೇ 'ಯುರೇಕಾ' ಎಂದು ...ದ್ದಾರವೆತ್ತಿದೆ. ಚಿಕ್ಕಮಗಳೂರಿನಲ್ಲಿ ಬೇರೆ ಕಡೆಯಷ್ಟು ...ಬೆ ಇರುವುದಿಲ್ಲ ಮತ್ತು ಕಾಫಿ ಎಸ್ಟೇಟಿನಲ್ಲಿರುವ ಹೋಮ್ ... ಚೆನ್ನಾಗಿಯೇ ಇರುತ್ತದೆ, ಅಲ್ಲಿಗೆ ಯಾಕೆ ನಾವು ಹೋಗಬಾರದೆಂದು ನಿರ್ಧರಿಸಿ, ಅನಿಲ್ ಕೊಲಾಸೋ ಅವರ ಫೋನ್ ನಂಬರ್ ಪಡೆದು ಅವರಿಗೆ ಫೋನ್ ಮಾಯಿಸಿದೆ.

ಸುನಿಲ್, ಅನಿಲ್ ಮತ್ತು ಡೆರಿಲ್ ಎಂಬ ಈ ಕೊಲಾಸೊ ಸಹೋದರರ ಬಗ್ಗೆ ಇಲ್ಲಿ ಸ್ವಲ್ಪ ಹೇಳಿದರೆ ಸೂಕ್ತವೆನಿಸುತ್ತದೆ. ಇವರೆಲ್ಲರೂ ಪ್ರಗತಿಪರರಾಗಿದ್ದು ಸಾಮಾಜಿಕ ನ್ಯಾಯಕ್ಕಾಗಿ ಹಲವಾರು ವರ್ಷಗಳ ಕಾಲ ಹೋರಾಟ ಮಾಡುತ್ತಾ ಬಂದಿರುವವರು. ಈ ಹಿಂದೆ ಅನಿಲ್ ಅವರು ವ್ಯವಸ್ಥೆಯ ಭ್ರಷ್ಟಾಚಾರದ ವಿರುದ್ಧ ...ಯಾಗಿ ದನಿ ಎತ್ತಿದ್ದರಿಂದ ಆಡಳಿತಶಾಹಿಗಳ ಕೆಂಗಣ್ಣಿಗೆ ...ತ್ತಾಗಿ ಅನ್ಯಾಯವಾಗಿ 40 ದಿನಗಳ ಕಾಲ ಜೈಲುವಾಸವನ್ನು ಅನುಭವಿಸಿದವರು. ಈಗಲೂ ತಮ್ಮ ಈ ಅಕ್ರಮ ಬಂಧನದ ವಿರುದ್ಧ ನ್ಯಾಯಾಲಯದಲ್ಲಿ ಅನಿಲ್ ಹೋರಾಟವನ್ನು ಮುಂದುವರೆಸಿದ್ದಾರೆ. ಹಾಗೆಯೇ ಸುನಿಲ್ ಕೊಲಾಸೊ ...ಡ ಚರ್ಚ್‌ಗಳ ಮೇಲೆ ಕೋಮುವಾದಿ ಸಂಘಪರಿವಾರ ...ರು ನಡೆಸಿದ ದಾಳಿಗಳ ವಿರುದ್ಧ ಹೋರಾಡಿದವರು. ...ರ್‌ಜಿಪಿ ಕಾನೂನಿನಡಿ ಇವತ್ತಿಗೂ ಹಲವಾರು ...ರಾಟಿಗಳನ್ನು ಸಂಗ್ರಹಿಸಿ ವ್ಯವಸ್ಥೆಯ ಭ್ರಷ್ಟಾಚಾರವನ್ನು ಬಹಿರಂಗಪಡಿಸುತ್ತಿರುವವರು. ಇವರಿಬ್ಬರಿಗೆ ಬೆಂಗಾವಲಾಗಿ ...ನಿಂತಿರುವವರು ಸಹೋದರ ಡೆರಿಲ್.

ನಾನು ಫೋನ್ ಮಾಡಿ "ನನ್ನ ಅಮ್ಮ ಮತ್ತು ಮೂವರು ಮಕ್ಕಳನ್ನು ನಾನು ತಮ್ಮ ಹೋಮ್ ಸ್ಟೇಗೆ ಕರೆದುಕೊಂಡು ಬರಬಹುದಾ?" ಎಂದು ಕೇಳಿದಾಗ ಅನಿಲ್ ಕೊಲಾಸೊ ಅವರು "ಖಂಡಿತವಾಗಿಯೂ ಬನ್ನಿ. ಪಿ.ಲಂಕೇಶರ ಕುಟುಂಬದವರು ನಮ್ಮಲ್ಲಿಗೆ ಬರುತ್ತಾರೆಂದರೆ ಅದು ನಮಗೆ ಸಂತೋಷದ ವಿಷಯ. ನನಗನ್ನಿಸುತ್ತೆ ದೇವರು ತನಗೆಂದೇ ಭೂಮಿಯ ಮೇಲೆ ಒಂದು ಸ್ವರ್ಗವನ್ನು ಸ್ಥಾಪಿಸಿಕೊಂಡಿದ್ದ. ಆದರೆ ಅದನ್ನು ಯಾಕೋ ದೇವರು ತನ್ನೊಂದಿಗೆ ತೆಗೆದುಕೊಂಡು ಹೋಗದೆ ಇಲ್ಲಿಯೇ ಬಿಟ್ಟುಹೋದ. ಅದರ ಒಂದು ಭಾಗ ನಮ್ಮದಾಗಿದೆ. ಸ್ವರ್ಗದ ಈ ಭಾಗಕ್ಕೆ ನಿಮಗೆ ಸ್ವಾಗತ" ಎಂದರು.

ಸರಿ, ಕಳೆದ ಗುರುವಾರ ರಾತ್ರಿಗೆ ನಿಮ್ಮ ಈ 'ಪತ್ರಿಕೆ' ಮತ್ತು ನಮ್ಮ ಸಂಸ್ಥೆಯ ಮಾಸಿಕ 'ಗೈಡ್' ಹಾಗು ಪಾಕ್ಷಿಕ 'ಜಾಬ್ ನ್ಯೂಸ್' ಎಲ್ಲವೂ ಮುದ್ರಣಕ್ಕೆ ಹೋಗಿದ್ದರಿಂದ ನಮ್ಮೆಲ್ಲರಿಗೂ ಅಪರೂಪಕ್ಕೆ ಒಂದೆರಡು ದಿನ ನಿರಾಳವಾಗಿ ಉಸಿರಾಡುವ ಅವಕಾಶ ಸಿಕ್ಕಿತು. ಶುಕ್ರವಾರ ಬೆಳಗ್ಗೆಯೇ ಅಮ್ಮ ಮತ್ತು ಮೂವರು ಮಕ್ಕಳ ಜೊತೆ ಕೊಲಾಸೊ ಅವರ 'ಕ್ಯಾಲ್‌ಗ್ರೀನ್ ವ್ಯಾಲಿ ರೆಸಾರ್ಟ್' ಎಂಬ ಹೋಮ್ ಸ್ಟೇಯತ್ತ ಹೊರಟೆ. ಮಕ್ಕಳ ಆಟ, ಚೀರಾಟ, ಕಿತ್ತಾಟ, ಸುಸ್ಸೂ ಬ್ರೇಕ್, ತಿಂಡಿ, ಸ್ನ್ಯಾಕ್ಸ್ ಎಲ್ಲದರ ನಡುವೆ ನಾವೆಲ್ಲ ಕೊಲಾಸೊ ಅವರ ಹೋಮ್ ಸ್ಟೇ ತಲುಪಿದಾಗ ಸಂಜೆ ನಾಲ್ಕು ಗಂಟೆಯಾಗಿತ್ತು.

ಕೊಲಾಸೊ ಕುಟುಂಬದ ವಿಸ್ತಾರವಾದ ಕಾಫಿ ತೋಟದಲ್ಲಿ ಸುಮಾರು 3,000 ಅಡಿ ಎತ್ತರದಲ್ಲಿರುವ ಒಂದು ಬೆಟ್ಟದ ಮೇಲೆ ಸುಂದರವಾದ ವಿಲ್ಲಾ ಇದೆ. ಆ ವಿಲ್ಲಾದ ಸುತ್ತಲೂ ಬಣ್ಣಬಣ್ಣದ ಹೂಗಿಡಗಳು. ಅಲ್ಲಲ್ಲಿ ಹಾರಾಡುತ್ತಾ ಹೂಗಳಿಗೆ ಮುತ್ತಿಡುತ್ತಿರುವ ಬಣ್ಣಬಣ್ಣದ ಚಿಟ್ಟೆಗಳು. ವಿಲ್ಲಾದ ಬಾಲ್ಕನಿಯಿಂದ ನೋಡಿದರೆ ಎಲ್ಲೆಲ್ಲೂ ದಟ್ಟವಾಗಿ ಹಸಿರು ಗಿಡಮರಗಳನ್ನು ಹೊದ್ದಿರುವ ಪಶ್ಚಿಮ ಘಟ್ಟದ ಬೆಟ್ಟಗಳು. ಆ ಗಿಡಮರಗಳ ನಡುವಿನಿಂದ ಕೂಗುತ್ತಿರುವ ನವಿಲುಗಳು. ಮಳೆಯನ್ನು ತಮ್ಮ ಗರ್ಭದಲ್ಲಿ ಹೊತ್ತು ಯಾವ ಕ್ಷಣದಲ್ಲಾದರೂ ಪ್ರಸವಕ್ಕೆ ಸಿದ್ಧವಾಗಿ ಆಕಾಶದಲ್ಲಿ ತೋಯ್ದಾಡುತಿದ್ದ ದಟ್ಟ ಮೋಡಗಳು. ಒಂದು ದಿಕ್ಕಿನಿಂದ ತಣ್ಣನೆ ಗಾಳಿ ಬೀಸಿದಾಗ ಹತ್ತಿರದಲ್ಲೆಲ್ಲೋ ಮಾಗಿದ ಹಲಸಿನ ಹಣ್ಣಿನ ಸುವಾಸನೆ, ಇನ್ನೊಂದು ದಿಕ್ಕಿನಿಂದ ಗಾಳಿ ಬೀಸಿದಾಗ ದೂರದಲ್ಲೆಲ್ಲೋ ಸುರಿದಿರುವ ಮಳೆಯ ಘಮಘಮ. ಕತ್ತಲು ಆವರಿಸುತ್ತಿದ್ದಂತೆ ನಮ್ಮೆಲ್ಲರಿಗಾಗಿ ಸುಂದರ ನೃತ್ಯ ಶೋಅನ್ನು ನೀಡಿದ ಮಿಂಚಿನ ಹುಳಗಳು.





ಅನಿಲ್ ಕೊಲಾಸೊ ಅವರು ತಮ್ಮ ಈ ಜಾಗೆಯನ್ನು "ಸ್ವರ್ಗದ ಒಂದು ಭಾಗ" ಎಂದು ಬಣ್ಣಿಸಿದ್ದು ಖಂಡಿತವಾಗಿಯೂ ಉತ್ಪ್ರೇಕ್ಷೆ ಅನ್ನಿಸಲಿಲ್ಲ!

ಮಾರನೆ ಬೆಳಗ್ಗೆ ಅಮ್ಮ ಮತ್ತು ಮಕ್ಕಳು ಕಾಫಿ ಎಸ್ಟೇಟಿನಲ್ಲಿ ಟ್ರೆಕ್‌ಗೆಂದು ಹೋದರು. ಅಪರೂಪಕ್ಕೆ ಸಿಗುವ ಅವಕಾಶಗಳಲ್ಲಿ ಸೋಂಬೇರಿಯಾಗುವ ನಾನು ನಿದ್ರಾಲೋಕದಲ್ಲೇ ವಿಹರಿಸುತ್ತಿದ್ದೆ. ಟ್ರೆಕ್‌ನಿಂದ ಹಿಂದಿರುಗಿದ ಮಕ್ಕಳು ತಾವು ಕಂಡ ವಿವಿಧ ಬಣ್ಣಗಳ ಹೂ, ಕಿಂಗ್ ಫಿಷರ್ ಹಕ್ಕಿ, ಧೈತ್ಯಾಕಾರದ ಬಿದಿರುಗಳ ಬಗ್ಗೆ ಉತ್ಸಾಹದಿಂದ ಬಣ್ಣಿಸಿದರು. ಅಷ್ಟೇ ಅಲ್ಲ, ಕ್ಯಾಲ್ ಗ್ರೀನ್ ವ್ಯಾಲಿಯಲ್ಲಿರುವ ಒಂದು ನವಿಲು ಮಕ್ಕಳ ಮುಂದೆ ನೃತ್ಯವನ್ನಾಡಿ ಅವರನ್ನೆಲ್ಲ ರಂಜಿಸಿತ್ತು.

ಮಧ್ಯಾಹ್ನ ನಾವೆಲ್ಲರೂ ಕೊಲಾಸೊ ಅವರ ತೋಟದ ನಡುವೆ ಇರುವ ಕೆರೆಯತ್ತ ಹೋದೆವು. ಅದು ಐದು ಎಕರೆಯಷ್ಟು ವಿಸ್ತಾರವಾದ ಕೆರೆ. ಅಲ್ಲಿ ವಿಹಾರಕ್ಕೆಂದು ಹಲವು ಫೈಬರ್ ಬೋಟ್‌ಗಳಿವೆ. ಮಕ್ಕಳೆಲ್ಲರೂ ಅಂತಹ ಒಂದು ಬೋಟ್‌ನಲ್ಲಿ ಕೆರೆಯ ಸುತ್ತ ಒಂದೆರಡು ರೌಂಡ್ ಹಾಕಿದರು. ಅಷ್ಟು ಹೊತ್ತಿಗೆ ಅಲ್ಲಿಗೆ ಬಂದ ಅನಿಲ್ ಕೊಲಾಸೊ ಅವರು "ಇನ್ನೇನು ಮಳೆಗಾಲ ಶುರುವಾಗುತ್ತದೆ. ಅದಕ್ಕೆ ನಮ್ಮ ಒಂದು ಹೊಂಡದಲ್ಲಿರುವ ನೀರನ್ನು ಖಾಲಿ ಮಾಡುತ್ತಿದ್ದೇವೆ. ಆ ಹೊಂಡದಲ್ಲಿರುವ ಮೀನನ್ನು ಹಿಡಿಯಲು ನನ್ನ ಮಕ್ಕಳು ಹೋಗಿದ್ದಾರೆ. ನೀವೂ ಬರುತ್ತೀರಾ?" ಎಂದರು. ಅದನ್ನು ಕೇಳಿದ್ದೇ ತಡ ಇಶಾ ಮತ್ತು ಸಮರ್ ಮೀನುಗಾರರಾಗಲು ರೆಡಿಯಾದರು. ಅಷ್ಟೇ ಅಲ್ಲ, ನನ್ನ ಮಗಳು ಇಶಾ ತಾನು ಹಿಡಿವ ಮೀನನ್ನು ಹಾಗೇ ನೀರಿಗೆ ಬಿಡುತ್ತೇನೆಂದರೆ, ಅಳಿಯ ಸಮರ್ ತಾನು ಹಿಡಿವ ಮೀನನ್ನು ರಾತ್ರಿಯ ಊಟದಲ್ಲಿ ತಿನ್ನುತ್ತೇನೆಂದ. ಆದರೆ ಅವತ್ತಿನ ಮಟ್ಟಿಗೆ ಮೀನುಗಳ ಅದೃಷ್ಟ ಚೆನ್ನಾಗಿತ್ತು. ಆ ಹೊಂಡದ ಆಳ ಹೆಚ್ಚಿದ್ದರಿಂದ ಅದರಲ್ಲಿದ್ದ ನೀರನ್ನು ಖಾಲಿ ಮಾಡಲು ಇಡೀ ದಿನ ಹಿಡಿಯುವುದಿತ್ತು. ಆ ಕಾರಣಕ್ಕೆ ಅಲ್ಲಿದ್ದ ಯಾರಿಗೂ ಮೀನುಗಳು ಸಿಗಲಿಲ್ಲ. ಆದರೂ ನಾವೆಲ್ಲ ಆ ಹೊಂಡಕ್ಕೆ ಇಳಿದು ಮಜಾ ಮಾಡಿದೆವು...

ಸೂರ್ಯಾಸ್ತಕ್ಕೆ ಒಂದೆರಡು ಗಂಟೆಗಳು ಉಳಿದಿದ್ದವು. ನಾವೆಲ್ಲ ವಿಲ್ಲಾಗೆ ವಾಪಸ್ ಹೋಗಿ ಸ್ನಾನಮಾಡಿ ಮತ್ತೆ ಜೀಪ್ ಏರಿದೆವು. ಜೀಪಿನ ಡ್ರೈವರ್ ನಮ್ಮನ್ನೆಲ್ಲ ಹತ್ತಿರದಲ್ಲೇ ಇರುವ ಒಂದು ಬೆಟ್ಟಕ್ಕೆ ಕರೆದುಕೊಂಡು ಹೋದರು. ಆ ಬೆಟ್ಟದ ತುದಿಯಲ್ಲಿ ಕಲ್ಲುಬಂಡೆಗಳಿದ್ದವು. ಆ ಬಂಡೆಗಳನ್ನು ಏರಿದರೆ ಕೆಳಗೆ ಕಾಣಿಸುವುದು ನಮಗಿಂತಲೂ ಕೆಳಸ್ತರದಲ್ಲಿರುವ ಬೆಟ್ಟಗಳು ಮತ್ತು ಆಕಾಶದಲ್ಲಿರುವ ಸೂರ್ಯ ಹಾಗು ಮೋಡಗಳು. ಅವತ್ತು ನಮ್ಮ ಮುಂದೆ ಪಶ್ಚಿಮ ದಿಕ್ಕಿನಲ್ಲಿ ಸೂರ್ಯ ಕೆಂಪು ಬಿಂದುವಾಗಿ ಕಂಗೊಳಿಸುತ್ತಿದ್ದರೆ ನಮ್ಮ ನೆತ್ತಿಯ ಮೇಲೆ ಚಂದ್ರ ಆಗಲೇ ಮಿಂಚಲಾರಂಭಿಸಿದ್ದ. ನಮ್ಮ ಸುತ್ತಲೂ ಬೀಸುತ್ತಿದ್ದ ತಂಗಾಳಿ. ಎದುರು ಅಂದಿನ ದಿನಕ್ಕೆ ಗುಡ್‌ಬೈ ಹೇಳುತ್ತಿದ್ದ ಸೂರ್ಯ, ರಾತ್ರಿಗೆ ಹಾಯ್ ಹೇಳಲಾರಂಭಿಸಿದ್ದ ಚಂದಿರ. ಆ ಬೆಳಕಿನಲ್ಲಿ ಸುಂದರವಾಗಿ ಕಂಗೊಳಿಸುತ್ತಿದ್ದ ನನ್ನ ಮಕ್ಕಳು..... ಇಂತಹ ಜಾಗೆಯಲ್ಲಿ ನನಗೂ ಒಂದು ತುಂಡು ಸಿಕ್ಕರೆ, ಇಲ್ಲಿಯ ಶಾಂತಿ ಮತ್ತು ಸೌಂದರ್ಯದಲ್ಲಿ ಸಮಯ ಕಳೆಯುವ ಅವಕಾಶ ಸಿಕ್ಕರೆ... ಎಂದೆಲ್ಲ ಯೋಚಿಸುತ್ತಿದ್ದಾಗ... ಒಂದನೇ ತಾರೀಖು ಬರುತ್ತಿದೆ, ನಿನ್ನ ಸಂಸ್ಥೆಯ ಎಲ್ಲರಿಗೂ ಈ ತಿಂಗಳ ಸಂಬಳವನ್ನು ಹೇಗೆ ಜೋಡಿಸುತ್ತೀಯಾ ಎಂಬುದರ ಬಗ್ಗೆ ಯೋಚಿಸು ಎಂದು ವಾಸ್ತವ ಎಂಬ ಶನಿ ನನ್ನನ್ನು ಇಲ್ಲಿನ ಲೋಕಕ್ಕೆ ತಂದು ಬಿಟ್ಟಿತು!

ಅವತ್ತು ರಾತ್ರಿ ಅಮ್ಮ ಮತ್ತು ಮಕ್ಕಳು ವಿಲ್ಲಾಗೆ ಹೋದ ನಂತರ ಕೊಲಾಸೊ ಸಹೋದರರು ಮತ್ತು ನಾನು ರಾಜಕೀಯ ಮತ್ತು ಇತರೆ ಸಮಕಾಲೀನ ವಿಷಯಗಳ ಬಗ್ಗೆ ಚರ್ಚಿಸಲಾರಂಭಿಸಿದೆವು. ಅವಕಾಶ ಇದ್ದಿದ್ದರೆ ನಮ್ಮ ಚರ್ಚೆ ಹಲವಾರು ಗಂಟೆಗಳ ಕಾಲ

ಕಂಡಹಾಗೆ



• ಗೌರಿ ಲಂಕೇಶ್

ನಡೆಯುತ್ತಿತ್ತು. ಆದರೆ ಮಾರನೆ ದಿನ ನಾವೆಲ್ಲ ಹೊರಡುವುದಿತ್ತು. "ಇನ್ನೊಂದು ದಿನ ಇಲ್ಲೇ ಉಳಿದುಕೊಳ್ಳಿ" ಎಂದು ಕೊಲಾಸೊ ಸಹೋದರರು ಹೇಳಿದರಾದರೂ ನನಗೆ ಬೆಂಗಳೂರಿನಲ್ಲಿ ಕೆಲಸಗಳಿದ್ದಿದ್ದರಿಂದ ನಾನು ಹೊರಡಬೇಕಿತ್ತು. ಬೆಳಗ್ಗೆ ಹತ್ತಿರದಲ್ಲೇ ಇದ್ದ ಟೀ ಎಸ್ಟೇಟ್ ಒಂದಕ್ಕೆ ಭೇಟಿ ನೀಡಿದ ನಂತರ ಬೆಂಗಳೂರಿನತ್ತ ನಮ್ಮ ಕಾರ್ ಸಂಚರಿಸಲಾರಂಭಿಸಿತು.

ಹಿಂದಿನ ರಾತ್ರಿ ಕೊಲಾಸೊ ಅವರ ಮನೆಯಿಂದ ನಾವು ಉಳಿದುಕೊಂಡಿದ್ದ ವಿಲ್ಲಾಗೆ ಹೋಗುತ್ತಿದ್ದಾಗ ಎಸ್ಟೇಟ್ ಮಧ್ಯೆ ನಾನು ಕಂಡ ದೃಶ್ಯವನ್ನು ಮಕ್ಕಳಿಗೆ ವಿವರಿಸಲಾರಂಭಿಸಿದೆ. "ರಾತ್ರಿ ಏನಾಯಿತು ಗೊತ್ತಾ, ನಾವಿದ್ದ ಜೀಪಿನ ಮುಂದೆ ಇದ್ದಕ್ಕಿದ್ದಂತೆ ಒಂದು ದೊಡ್ಡ ಮುಳ್ಳುಹಂದಿ ಪ್ರತ್ಯಕ್ಷವಾಯಿತು. ತನ್ನ ಮೈಮೇಲಿನ ಮುಳ್ಳುಗಳನ್ನೆಲ್ಲ ಝಳಪಿಸುತ್ತಾ ಅದು ಜೀಪಿನ ಮುಂದೆ ಓಡಲಾರಂಭಿಸಿತು. ಒಂದು ಸಾರಿ ಹಿಂದಿರುಗಿ ತನ್ನ ಹಿಂದೆ ಬರುತ್ತಿರುವ ವೈರಿಯನ್ನು ಅಟ್ಯಾಕ್ ಮಾಡಲು ನೋಡಿತು. ಆದರೆ ಜೀಪಿನ ಹೆಡ್ ಲೈಟ್‌ಗಳು ಅದರ ಕಣ್ಣುಗಳನ್ನು ಕುಕ್ಕಿದ್ದರಿಂದ ಅದು ಮತ್ತೆ ಮುಂದಕ್ಕೆ ತಿರುಗಿ ಓಡಲಾರಂಭಿಸಿತು. ಪಾಪ, ಸ್ವಲ್ಪ ಹೊತ್ತಿನ ನಂತರ ಆ ಮುಳ್ಳುಹಂದಿಗೆ ಸುಸ್ತಾಯಿತು. ಆಗ ನಾವು ಜೀಪನ್ನು ನಿಲ್ಲಿಸಿದೆವು. ಒಂದೆರಡು ನಿಮಿಷ ಅಲ್ಲೇ ಚೇತರಿಸಿಕೊಂಡ ಮುಳ್ಳುಹಂದಿ ಗಿಡಗಳ ಸಂದಿಯಲ್ಲಿ ನುಗ್ಗಿ ಮಾಯವಾಯಿತು..."

ಆಗ ಮಕ್ಕಳೆಲ್ಲರೂ "ನೀನು ನಮ್ಮನ್ನು ಯಾಕೆ ಎದ್ದೇಳಿಸಲಿಲ್ಲ? ನಾವೂ ಅದನ್ನ ನೋಡಬೇಕಿತ್ತು. ಈಗ ನಮ್ಮನ್ನು ಅಲ್ಲಿಗೆ ವಾಪಸ್ ಕರೆದುಕೊಂಡು ಹೋಗು" ಎಂದರು....!

ಸ್ವರ್ಗದಂತಿರುವ ಕೊಲಾಸೊ ಕುಟುಂಬದ ಎಸ್ಟೇಟಿನಲ್ಲಿ ಕಂಡದ್ದು, ಆನಂದಿಸಿದ್ದು ಮತ್ತು ಸುಮ್ಮನೆ ಅನುಭವಿಸಿದ್ದನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ.


* * * * * * *

ಕೊಲಾಸೊ ಅವರ 'ಕ್ಯಾಲ್‌ಗ್ರೀನ್ ವ್ಯಾಲಿ ರೆಸಾರ್ಟ್'ನ ಫೋನ್ ನಂಬರ್: 9448530446 ಮತ್ತು ವೆಬ್ ಸೈಟ್ www.kalgreenvalleyresort.com

ಇದೆಂತಹ ವಿಪರ್ಯಾಸ ನೋಡಿ. ಕರ್ನಾಟಕದಲ್ಲಿನ ಅಕ್ರಮ ಗಣಿಗಾರಿಕೆಯ ಧೂಳು ದಿನೇದಿನೇ ಹಬ್ಬುತ್ತಲೇ ಹೋಗುತ್ತಿದೆ.
ಹಾಲಿ ಮಂತ್ರಿ-ಶಾಸಕರ ಜೊತೆಗೆ ಕೆಲ ಮಾಜಿಗಳ ಕೈವಾಡಗಳ ಬಗ್ಗೆಯೂ ಈಗ ದೂರುಗಳು ದಾಖಲಾಗುತ್ತಿವೆ. ಕೋರ್ಟ್
ಗಳಲ್ಲೂ ಇವಕ್ಕೆ ಪುರಸ್ಕಾರ ಸಿಗುತ್ತಿದೆ. ತನಿಖಾ ಸಂಸ್ಥೆಗಳೂ ಈಗ ಅಕ್ರಮ ಗಣಿಗಾರಿಕೆಯ ಆಳ, ಅಗಲಗಳನ್ನೆಲ್ಲಾ ಶೋಧಿಸಬೇಕಾಗಿ
ಬರುತ್ತಿದೆ. ಈಗ ಕೃಷ್ಣ ಸಿ.ಎಂ. ಆಗಿದ್ದಾಗ ಏನೇನು ಅಕ್ರಮಗಳಾಗಿದ್ದವೆಂಬ ವಿಚಾರ ಮತ್ತೆ ಜೀವ ಪಡೆದುಕೊಳ್ಳುತ್ತಿದೆ.

• ಪಾರ್ವತೀಶ

ಭ್ರಷ್ಟಾಚಾರ ಭೂಕಬಳಿಕೆ ಅಳಿಯನ ದಂಧೆ ಎಸ್.ಎಂ. ಕೃಷ್ಣಗೆ ಗಣಿ ಕುಣಿಕೆ



ಯಡ್ಡಿ ಸರದಿ ಆಯಿತು.

ಜನಾರ್ದನ ರೆಡ್ಡಿದೂ ಒಂದು ಹಂತಕ್ಕೆ ಬಂತು.

ಆಂಧ್ರದಲ್ಲಿ ಜಗನ್‌ಗೆ ಈಗ ತಾನೆ ಶುರುವಾಗಿದೆ.

ಅಷ್ಟರಲ್ಲಿ ಇನ್ನೊಂದು ಹೊಸ ಅಧ್ಯಾಯ ಶುರುವಾಗುವಂತೆ ಕಾಣುತ್ತಿದೆ.

ಅದು ಎಸ್.ಎಂ. ಕೃಷ್ಣರದ್ದು!

ಭ್ರಷ್ಟಾಚಾರ, ಅಧಿಕಾರ ದುರ್ಬಳಕೆಯ ಸರಣಿ ಇದು. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಲಿ ಭಾರತ ದೇಶದ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ವಿರುದ್ಧ ಅಣ್ಣಾ ಹಜಾರೆಯ ಟೀಂ ಈಗ ನೇರ ಯುದ್ಧ ಘೋಷಿಸಿದೆ. ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆಯ ದಂಧೆಯನ್ನು ಉದ್ಘಾಟಿಸಿ ಚಾಲೂ ನೀಡಿದ್ದೇ ಎಸ್.ಎಂ.ಕೃಷ್ಣ ಎಂದು ಹಜಾರೆ ಬಳಗದ ಅರವಿಂದ ಕೇಜ್ರಿವಾಲ್ ಹಾಗೂ ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್ ನೇರವಾಗಿ ಆರೋಪಿಸಿ ಕೆಲ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ.

ಇದೊಂದರಿಂದಲೇ ಹೆದರಿರುವಂತೆ ಕಾಣುತ್ತಿರುವ ಕೃಷ್ಣಾ ಹಜಾರೆ ಟೀಂ ವಿರುದ್ಧ ಮಾನನಷ್ಟದ ಕೇಸ್ ಹಾಕುವುದಾಗಿ ಬೆದರಿಸಿದ್ದಾರೆ. ಆದರೆ ಅದೇ ವೇಳೆಯಲ್ಲಿ ತಮ್ಮ ವಿರುದ್ಧ ಕರ್ನಾಟಕ ಲೋಕಾಯುಕ್ತರು ದಾಖಲಿಸಿಕೊಂಡಿರುವ ಗಣಿ ಹಗರಣದ ಎಫ್.ಐ.ಆರ್ ರದ್ದುಪಡಿಸಿ ತನಿಖೆ ನಿಲ್ಲಿಸಲು ಆದೇಶಿಸುವಂತೆ ಕೋರಿ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಹಾಕಿಕೊಂಡಿದ್ದಾರೆ. ಜೊತೆಗೆ ತಾನೊಬ್ಬ ಪ್ರಾಮಾಣಿಕ ವ್ಯಕ್ತಿಯೆಂತಲೂ ಯಾವುದೇ ಭ್ರಷ್ಟಾಚಾರ ನಡೆಸಿಲ್ಲವೆಂತಲೂ ಹೇಳುತ್ತಿದ್ದಾರೆ. ಆದರೂ ತನ್ನ ವಿರುದ್ಧ ತನಿಖೆ ಆಗಬಾರದೆಂಬ ಇರಾದೆಯೂ ಕೃಷ್ಣಾಗಿದೆ.

ಇದೆಂತಹ ವಿಪರ್ಯಾಸ ನೋಡಿ. ಕರ್ನಾಟಕದಲ್ಲಿನ ಅಕ್ರಮ ಗಣಿಗಾರಿಕೆಯ ಧೂಳು ದಿನೇದಿನೇ ಹಬ್ಬುತ್ತಲೇ ಹೋಗುತ್ತಿದೆ. ಹಾಲಿ ಮಂತ್ರಿ-ಶಾಸಕರ ಜೊತೆಗೆ ಕೆಲ ಮಾಜಿಗಳ ಕೈವಾಡಗಳ ಬಗ್ಗೆಯೂ ಈಗ ದೂರುಗಳು ದಾಖಲಾಗುತ್ತಿವೆ. ಕೋರ್ಟ್‌ಗಳಲ್ಲೂ ಇವಕ್ಕೆ ಪುರಸ್ಕಾರ ಸಿಗುತ್ತಿದೆ. ತನಿಖಾ ಸಂಸ್ಥೆಗಳೂ ಈಗ ಅಕ್ರಮ ಗಣಿಗಾರಿಕೆಯ ಆಳ, ಅಗಲಗಳನ್ನೆಲ್ಲಾ ಶೋಧಿಸಬೇಕಾಗಿ ಬರುತ್ತಿದೆ.

ಈಗ ಕೃಷ್ಣ ಸಿ.ಎಂ. ಆಗಿದ್ದಾಗ ಏನೇನು ಅಕ್ರಮಗಳಾಗಿದ್ದವೆಂಬ ವಿಚಾರ ಮತ್ತೆ ಜೀವ ಪಡೆದುಕೊಳ್ಳುತ್ತಿದೆ. ಅವುಗಳ ಪೈಕಿ 11,620 ಚದರ ಕಿಲೋಮೀಟರ್ ವಿಸ್ತೀರ್ಣದ ಅರಣ್ಯ ಪ್ರದೇಶವನ್ನು ಮೀಸಲು ಅರಣ್ಯ ವ್ಯಾಪ್ತಿಯಿಂದ ವಿನಾಯಿತಿ ನೀಡಿದ ಆರೋಪವೀಗ ಕೃಷ್ಣ ವಿರುದ್ಧ ಕೇಳಿ ಬಂದಿದೆ.

ಅಕ್ರಮ ಗಣಿಗಾರಿಕೆಗೆ ಗ್ರೀನ್ ಸಿಗ್ನಲ್

ಭಾರತ ಸರ್ಕಾರವು 1992 ರಲ್ಲಿ ಹೊಸ ಖನಿಜ ನೀತಿಯೊಂದನ್ನು ಪ್ರಕಟಿಸಿ ಖಾಸಗಿ ಗಣಿಗಾರಿಕೆಗೆ ಅನುಮತಿ ನೀಡಿತ್ತು, ಗಣಿಗಾರಿಕೆ ನಡೆಸುವಾಗ ಅರಣ್ಯ ಪ್ರದೇಶದಲ್ಲಿ ಅದಿರು ತೆಗೆಯಬೇಕೆಂದರೆ ಸಂಬಂಧಿಸಿದ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯ ಪರಿಶೀಲನೆ ಹಾಗೂ ಶಿಫಾರಸ್ಸುಗಳನ್ನು ಕೇಂದ್ರ ಪರಿಸರ ಇಲಾಖೆಗೆ ಕಳುಹಿಸಿ ಆ ನಂತರ ಸೂಕ್ತ ಕಂಡಲ್ಲಿ ಮಾತ್ರ ಅಂತಹ ನಿರ್ದಿಷ್ಟ ಪ್ರದೇಶವನ್ನು ಡಿರಿಸರ್ವ್ ಮಾಡಿ ಗಣಿಗಾರಿಕೆಗೆ ಅನುಮತಿ ನೀಡಲು ಅವಕಾಶವಿತ್ತು. ಆದರೆ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ದಿನಾಂಕ 15-3-2003 ರಲ್ಲಿ ಏಕಾಏಕಿ ಒಮ್ಮೆಗೆ 11,62[0] ಚ.ಕಿ.ಮೀನಷ್ಟು ಅರಣ್ಯ ಪ್ರದೇಶವನ್ನು ಡಿರಿಸರ್ವ್ ಮಾಡಲಾಗಿದೆ. ಇದರ ಪೈಕಿ ಅಂದಾಜು 68,32[...] ಹೆಕ್ಟೇರ್‌ನಷ್ಟು ಪ್ರದೇಶವನ್ನು ಗಣಿಗಾರಿಕೆ ನಡೆಸಲು ಖಾಸ[ಗಿ] ಕಂಪೆನಿಗಳಿಗೆ ನೀಡಲಾಗಿತ್ತು.

ವಿಪರ್ಯಾಸ ಏನೆಂದ[ರೆ] ಈ ಡಿರಿಸರ್ವ್ ಪ್ರಸ್ತಾಪನೆ[ಗೆ] ಮಂಜೂರಾತಿ ನೀಡುವಾಗ ಆಗಿನ ಕರ್ನಾಟಕ ಅರಣ್ಯ ಇಲಾಖೆಯ ಅಧಿಕಾರಿಗಳು ಕಾನೂನಿನ ರೀತಿ ರಿವಾಜುಗಳನ್ನು ಪಾಲನೆ ಮಾಡಿರಲಿಲ್ಲ.

ಜೊತೆಗೆ ಕೃಷ್ಣ ಸರ್ಕಾರವೂ ನಿಯಮಗಳ ಪಾಲನೆಯನ್ನು ನೇರವಾಗಿ ನಿರ್ಲಕ್ಷಿಸಿತ್ತು.

ಬಳ್ಳಾರಿ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಅಕ್ರಮ ಗಣಿಗಾರಿಕೆಗೆ ಪ್ರಚೋದನೆ ಸಿಕ್ಕಿದ್ದೆ ಈ ರೀತಿಯಲ್ಲಿ ಎಂದರೆ ನಿಮ[ಗೆ] ಆಶ್ಚರ್ಯವಾಗಬಹುದು.

ಕರ್ನಾಟಕದಲ್ಲಿನ ಅಕ್ರಮ ಗಣಿಗಾರಿಕೆ ಬಗ್ಗೆ ತನಿ[ಖೆ] ನಡೆಸಿದ ಲೋಕಾಯುಕ್ತ ಸಂತೋಷ್ ಹೆಗ್ಡೆ 18-12-200[...] ರಲ್ಲಿ ನೀಡಿದ ಮೊದಲ ಸಂಪುಟದ ತನಿಖಾ ವರದಿಯ[ಲ್ಲಿ] ಇದರ ಬಗ್ಗೆ ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ.

'ಅರಣ್ಯ ಪ್ರದೇಶವನ್ನು ಡಿರಿಸರ್ವ್ ಮಾಡುವಾಗ ಅರ[ಣ್ಯ] ಇಲಾಖೆಯ ಅಭಿಪ್ರಾಯ ಕೇಳದೆ ಕ್ಯಾಬಿನೆಟ್ (ಕೃಷ್ಣ ಸರ್ಕಾ[ರ]) ಸಭೆಯ ಒಪ್ಪಿಗೆ ನೀಡಿದೆ. ಕಬ್ಬಿಣ, ಮ್ಯಾಂಗನೀಸ್, ಕ್ರೋಮ[...] ಮುಂತಾದ ಅದಿರನ್ನು ಅರಣ್ಯ ಪ್ರದೇಶದಲ್ಲಿ ತೆಗೆಯ[...] ಖಾಸಗಿ ಗಣಿ ಕಂಪೆನಿಗಳಿಗೆ 16-12-2003 ರಲ್ಲಿ ನಡೆ[ದ] ಕ್ಯಾಬಿನೆಟ್ ಸಭೆಯು ಒಪ್ಪಿಗೆ ನೀಡಿದೆ.'

–ಇದು ಲೋಕಾಯುಕ್ತ ವರದಿಯ ಆರೋಪ.


ಕೃಷ್ಣ ಸರ್ಕಾರದ ಈ ದುಡುಕಿನ ಹಾಗೂ ಖಾಸ[ಗಿ] ಗಣಿ ಲಾಬಿಗೆ ಶರಣಾದ ನಿರ್ಧಾರವು ಅತಿ ಬೇಗನೆ ಕೆ[...] ಪರಿಣಾಮ ಬೀರಿತು. 2004ರ ವರ್ಷವೊಂದರಲ್ಲೇ ಕೃ[ಷ್ಣ] ಸರ್ಕಾರ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಖಾಸ[ಗಿ]

ಖದೀಮ ರಾಘವೇಂದ್ರ ಶಾಸ್ತ್ರಿಯೇ ಸಲಹೆಗಾರ!

ಭಾರತದಂತ ದೊಡ್ಡ ದೇಶದ ವಿದೇಶಾಂಗ ಖಾತೆ ಸಚಿವನಾಗುವ ಅರ್ಹತೆ ಎಸ್.ಎಂ. ಕೃಷ್ಣಗಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ. ಆದರೆ ಅಷ್ಟು ಸಾಲದೆಂಬಂತೆ ರಾಘವೇಂದ್ರ ಶಾಸ್ತ್ರೀ ಎಂಬಾತನನ್ನು ಕೃಷ್ಣ ತಮ್ಮ ಸಲಹೆಗಾರನಾಗಿ ನೇಮಿಸಿಕೊಂಡಿದ್ದಾರೆ.

ಇದೊಂತರಾ ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ ಎನ್ನುವಂತಿದೆ. ಬೆಂಗಳೂರಿನಲ್ಲಿ ಗೆಟಿಟ್ ಯಲ್ಲೋ ಪೇಜಸ್ ಎನ್ನುವ ಟೆಲಿಫೋನ್ ಜಾಹಿರಾತು ಡೈರೆಕ್ಟರಿ ದಂಧೆ ಮಾಡುತ್ತಿದ್ದ ರಾ.ಶಾಸ್ತ್ರಿಗೆ ಮೊದಲಿನಿಂದಲೂ ಕೃಷ್ಣ ಮತ್ತವರ ಅಳಿಯ ಸಿದ್ಧಾರ್ಥನೊಂದಿಗೆ ದೋಸ್ತಿ ಇತ್ತು, ಕೃಷ್ಣ 2009 ರಲ್ಲಿ ಯಾವಾಗ ವಿದೇಶಾಂಗ ಸಚಿವರಾದರೋ ತಕ್ಷಣ ತಮ್ಮ ಸ್ವದೇಶಾಂಗದಂತಿದ್ದ ರಾಘವೇಂದ್ರ ಶಾಸ್ತ್ರಿಯನ್ನೇ Adviser ಹೆಸರಲ್ಲಿ ಜೊತೆಗಿಟ್ಟುಕೊಂಡರು. ಇಲಾಖೆಯ ನಿಯಮದ ಪ್ರಕಾರ ಆ ರೀತಿಯ ನೇಮಕಕ್ಕೆ ಅವಕಾಶವಿದೆಯಾದರೂ, ವಿದೇಶಾಂಗ ವಿಷಯಗಳಲ್ಲಿ ಅನುಭವ ಹೊಂದಿರುವವರನ್ನೇ ಸಲಹೆಗಾರರನ್ನಾಗಿ ನೇಮಿಸಿಕೊಳ್ಳುವುದು ವಾಡಿಕೆ. ಆದರೆ ಶಾಸ್ತ್ರಿಗೆ ಇಂಡಿಯಾದ ಫಾರಿನ್ ಪಾಲಿಸಿಗಳ ತಲೆಬುಡ ತಿಳಿದಿರದಿದ್ದರೂ ಆ ಹುದ್ದೆ ಗಿಟ್ಟಿಸಿಕೊಂಡು ಬಿಟ್ಟ. ಇಲಾಖೆಯ ಅಡಿಷನಲ್ ಸೆಕ್ರೆಟರಿ ಸ್ಥಾನಮಾನದ ಆ ಹುದ್ದೆಗೆ ಬಂದು ಕೂತ ತಕ್ಷಣ ಶಾಸ್ತ್ರಿ ಚುರುಕಾದ. ತನಗೆ ಸಂಬಂಧಪಡದ ವಿಚಾರಗಳಲ್ಲೆಲ್ಲಾ ತಲೆ ಹಾಕುವುದು, ತನ್ನಿಷ್ಟಕ್ಕೆ ಅರ್ಥಾತ್ ಕೃಷ್ಣರ ಅಳಿಯ ಸಿದ್ಧಾರ್ಥನ ಹಿತಾಸಕ್ತಿಗಳಿಗೆ ಅಡ್ಡಿ ಬರುವ ವಿದೇಶಾಂಗ ಇಲಾಖೆಯ ಹಿರಿ-ಕಿರಿ ಅಧಿಕಾರಿಗಳನ್ನು ನಿಯಂತ್ರಿಸಿ ಲಾಬಿ ಮಾಡುವುದನ್ನೆಲ್ಲಾ ಶುರು ಮಾಡಿದ. ಪ್ರತಿ ಫಾರಿನ್ ಟೂರಿನಲ್ಲೂ ಕೃಷ್ಣಾರ ಜೊತೆಗೆ ಹೋಗಿ ಹೊರ ದೇಶಗಳ ರಾಜಕಾರಣಿ-ಉದ್ದಿಮೆದಾರರು-ಅಧಿಕಾರಿಗಳ ಸಂಪರ್ಕ ಕುದುರಿಸಿಕೊಂಡು ಸಿದ್ಧಾರ್ಥನ ಬ್ಯುಸಿನೆಸ್ ವಿಸ್ತರಿಸಲು ನೆರವಾಗತೊಡಗಿದ.

ಈಗ ದೆಹಲಿಯ ಸೌತ್‌ಬ್ಲಾಕ್‌ನಲ್ಲಿರುವ ವಿದೇಶಾಂಗ ಇಲಾಖೆಯ ಬಹುತೇಕ ಅಧಿಕಾರಿಗಳಿಗೆ ಈ ಶಾಸ್ತ್ರಿ ತಲೆ ಕಂಡರಾಗುವುದಿಲ್ಲ, ಅನನುಭವ, ಸ್ವಾರ್ಥ, ಅವಿವೇಕ ಹಾಗೂ ಉದ್ಧಟತನಗಳ ಮಿಶ್ರಣದಂತಿರುವ ಶಾಸ್ತ್ರಿ ಈಗಾಗಲೇ ಅಸಂಖ್ಯ ಹಗರಣಗಳನ್ನು ಸೃಷ್ಟಿಸಿದ್ದಾನೆ.



ಲಂಕಾ ತಮಿಳು ನಿರಾಶ್ರಿತರ ಮನೆ ನಿರ್ಮಾಣ ಡೀಲ್

ಈಗ್ಗೆ ಮೂರು ವರ್ಷಗಳ ಹಿಂದೆ ಶ್ರೀಲಂಕಾದಲ್ಲಿ ತಮಿಳು ಟೈಗರ್‌ಗಳ ವಿರುದ್ಧದ ಅಂತರ್ಯುದ್ಧ ಕೊನೆಗೊಂಡಾಗ ಲಕ್ಷಾಂತರ ತಮಿಳರು ಮನೆಮಠ ಕಳೆದುಕೊಂಡು ನಿರಾಶ್ರಿತರಾದರು. ಆಗ ಭಾರತ ಸರ್ಕಾರ ಈ ನಿರಾಶ್ರಿತರಿಗಾಗಿ ಒಂದು ಸಾವಿರ ಮನೆ ಕಟ್ಟಿಸಿಕೊಡುವ ವಾಗ್ದಾನ ಮಾಡಿತ್ತು, ಈ ಕೆಲಸ ಭಾರತದ ವಿದೇಶಾಂಗ ಇಲಾಖೆಯ ಮೂಲಕ ಆಗಬೇಕಿತ್ತಾದ್ದರಿಂದ ಮನೆಗಳ ವಿನ್ಯಾಸ, ವೆಚ್ಚ ಇತ್ಯಾದಿಗಳನ್ನು ನಿರ್ಧರಿಸಲು ಕೊಟೇಷನ್ ಕರೆಯಲಾಗಿತ್ತು, ಮೂರು ಸಾರ್ವಜನಿಕ ಸಂಸ್ಥೆಗಳು ಕೊಟೇಶನ್‌ಗಳನ್ನು ಕೊಟ್ಟವು. ಅದೇ ಸಮಯಕ್ಕೆ ಲಂಕಾದ ನರಭಕ್ಷಕ ಅಧ್ಯಕ್ಷ ರಾಜಪಕ್ಸೆ ಇಂಡಿಯಾಗೆ ಭೇಟಿ ಕೊಟ್ಟ. ಆಗ ನಡೆದ ಮಾತುಕತೆಯ ಪ್ರಕಾರ ಲಂಕಾ ನಿರಾಶ್ರಿತರಿಗೆ 50 ಸಾವಿರ ಮನೆಗಳನ್ನು ಕಟ್ಟಿಸಿಕೊಡಲು ಭಾರತ ಸರ್ಕಾರ ತೀರ್ಮಾನಿಸಿತು. ಆಗ ಶುರುವಾಯಿತು ನೋಡಿ ಕಾಂಟ್ರಾಕ್ಟ್ ಗಿಟ್ಟಿಸುವ ಲಾಬಿ. ಕೊಟೇಶನ್ ನೀಡಿದ ಸಂಸ್ಥೆಗಳ ಪೈಕಿ ಅತಿ ಹೆಚ್ಚಿನ ರೇಟ್ ಕೇಳಿದ್ದವರ ಪರವಾಗಿ ಶಾಸ್ತ್ರಿ ಲಾಬಿ ನಡೆಸಲು ಹೊರಟ. ಆಗ ಅದೆ ಇಲಾಖೆಯ ಬಿಎಸ್‌ಎಂ ವಿಭಾಗದಲ್ಲಿ ತಿರುಮೂರ್ತಿ ಎಂಬ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ಇದ್ದರು. ಈ ಬಿಎಸ್‌ಎಂನ ಕೆಲಸ ಏನೆಂದರೆ ಬೇರೆ ದೇಶಗಳಲ್ಲಿ ಇಂಡಿಯಾದವರು ಕೈಗೊಳ್ಳುವ ಪ್ರಾಜೆಕ್ಟ್‌ಗಳಲ್ಲಿ ಭಾರತದ ಬಂಡವಾಳ ಶೇ 85 ರಷ್ಟಿದ್ದರೆ. ಅದರ ಪೂರ್ಣ ಉಸ್ತುವಾರಿ ನೋಡಿಕೊಳ್ಳುವುದಾಗಿದೆ. ಅದೇ ರೀತಿ ಶ್ರೀಲಂಕಾದಲ್ಲಿ 50 ಸಾವಿರ ಮನೆಗಳ ನಿರ್ಮಾಣದ ಖರ್ಚನ್ನು ಭಾರತ ಸರ್ಕಾರವೇ ಭರಿಸುತ್ತಿದ್ದರಿಂದ ಬಿಎಸ್‌ಎಂ ಅಧಿಕಾರಿ ತಿರುಮೂರ್ತಿ ಕೊಟೇಶನ್‌ಗಳನ್ನು ಪರಿಶೀಲಿಸಿ ಜಾಸ್ತಿ ರೇಟ್ ಹಾಕಿದ್ದ ಸಂಸ್ಥೆಗೆ ಕಾಂಟ್ರಾಕ್ಟ್ ನೀಡಲು ಒಪ್ಪಲಿಲ್ಲ.


ಶಾಸ್ತ್ರಿಗೆ ಇದರಿಂದ ಸಿಟ್ಟು ಬಂತು. ಸಚಿವ ಕೃಷ್ಣಗೆ ಚಾಡಿ ಹೇಳಿ ತಿರುಮೂರ್ತಿಯನ್ನೇ ಕುವೈತ್‌ಗೆ ವರ್ಗಾ ಮಾಡಿಸಿಬಿಟ್ಟ.

ಸಭ್ಯ ಪ್ರಾಮಾಣಿಕ ಅಧಿಕಾರಿ ತಿರುಮೂರ್ತಿಗೆ ಶಾಸ್ತ್ರಿ ವರ್ಗಾ ಶಿಕ್ಷೆ ಕೊಡಿಸಿದ್ದು ನೋಡಿ ಇಲಾಖೆಯ ಅನೇಕರಿಗೆ ಸಿಟ್ಟು ಬಂದಿದೆ. ಈ ಶಾಸ್ತ್ರಿಗೆ ಯುರೋಪ್, ಏಷ್ಯಾ ಆಫ್ರಿಕಾ ಹಾಗೂ ದಕ್ಷಿಣ ಅಮೆರಿಕಾ ದೇಶಗಳಲ್ಲಿ ಇಂಡಿಯಾಗಿರುವ ವ್ಯಾಪಾರಿ ಸಂಬಂಧಗಳ ಬಗ್ಗೆ ಸ್ಟಡಿ ಮಾಡಿ ಎಲ್ಲೆಲ್ಲಿ ಬಂಡವಾಳ ಹೂಡಿಕೆಗೆ ಅವಕಾಶಗಳಿವೆ ಎಂದು ಪತ್ತೆ ಹಚ್ಚುವುದೇ ಕೆಲಸ. ಕೃಷ್ಣಾರ ಅಳಿಯ ಸಿದ್ಧಾರ್ಥ ಕೆಲ ತಿಂಗಳ ಹಿಂದೆ ಜೆಕೋಸ್ಲಾವಾಕಿಯ ದೇಶದ ಕೆಫೆ ಎಂಪೊರಿಯೋ ಎನ್ನುವ ಕಾಫಿ ಶಾಪ್ ಚೈನ ಅನ್ನೆ ಖರೀದಿಸಿದ್ದು ಕೂಡ ಶಾಸ್ತ್ರಿಯ ಕೃಪೆಯಿಂದ ಎನ್ನಲಾಗಿದೆ. ಈ ಶಾಸ್ತ್ರಿ ಪಾಸ್‌ಪೋರ್ಟ್ ವಿತರಣೆ, ವಿದೇಶಿ ಟೂರ್‌ಗಳು, ಹಜ್ ಯಾತ್ರಿಗಳ ಲಿಸ್ಟ್ ತಯಾರಿಕೆಗಳಲ್ಲೂ ತಲೆ ಹಾಕುತ್ತಾನೆ.

ಇದೆಲ್ಲಕ್ಕಿಂತ ಆತಂಕದ ವಿಚಾರ ಏನೆಂದರೆ ಅನ್ಯ ದೇಶಗಳಲ್ಲಿ ಭಾರತದ ರಾಯಭಾರಿಗಳನ್ನು ನೇಮಿಸುವಾಗ ತನಗೆ ಬೇಕಾದವರನ್ನೇ ಶಾಸ್ತ್ರಿ ಪ್ರಮೋಟ್ ಮಾಡುತ್ತಾನೆ ಎನ್ನಲಾಗಿದೆ. ಕಳೆದ ತಿಂಗಳು ಉತ್ತರ ಕೊರಿಯಾ ದೇಶಕ್ಕೆ ಭಾರತದ ರಾಯಭಾರಿಯಾಗಿ ಅಜಯ್ ಶರ್ಮಾ ಎಂಬಾತನನ್ನು ಆರಿಸಿ ನೇಮಿಸಲಾಗಿದೆ. ಈತ ಸ್ಟೆನೊ ಆಗಿ ಕೆಲಸ ಪ್ರಾರಂಭಿಸಿ ನಂತರ ಫಿಜಿ ದೇಶದಲ್ಲಿ ಕೊಂಚ ಮೇಲಿನ ಹುದ್ದೆಯಲ್ಲಿದ್ದಾನೆ.

ಆದರೆ ರಾಯಭಾರಿ ಹುದ್ದೆಗೆ ಅದೆಲ್ಲಾ ಅರ್ಹತೆಯಾಗದಿದ್ದರೂ ಶಾಸ್ತ್ರಿ ಕೃಪೆಯಿಂದಾಗಿ ಶರ್ಮಾ ಈಗ ಕೊರಿಯಾ ರಾಯಭಾರಿಯಾಗುತ್ತಿದ್ದಾನೆ. ರಾಘವೇಂದ್ರ ಶಾಸ್ತ್ರಿಗೆ ವಿದೇಶಾಂಗ ವ್ಯವಹಾರಗಳಲ್ಲಿ ಕನಿಷ್ಠ ಜ್ಞಾನ ಮಾತ್ರವಿದ್ದರೂ ಗರಿಷ್ಠ ಪಾತ್ರ ವಹಿಸುತ್ತಿದ್ದಾನೆ. ಕೆಲ ಪತ್ರಕರ್ತರನ್ನು 'ಅಬ್ಬಾ ಅಬ್ಬಾ' ಮಾಡಿಟ್ಟುಕೊಂಡು ತನ್ನ ಪರವಾಗಿ ಆವಾಗಿವಾಗ ಹೊಗಳಿಕೆಯ ಲೇಖನ ಬರೆಸಿಕೊಂಡು ಬೀಗುತ್ತಿರುತ್ತಾನೆ.

ಈ ಕಂಕನರಿಯಿಂದಾಗಿ ಈಗ ಕೃಷ್ಣ ಮಾನ ಮಾತ್ರವಲ್ಲದೆ ದೇಶದ ಮಾನ ಮರ್ಯಾದೆಗಳೂ ಹರಾಜಾಗುತ್ತಿವೆ.




ಸಿದ್ಧಾರ್ಥನ ಉದ್ಯಮ ಸಾಮ್ರಾಜ್ಯ

ಂಪೆನಿಗಳಿಗೆ ಸುಮಾರು 82 ಪರ್ಮಿಟ್‌ಗಳನ್ನು ನೀಡಿತು. ದೇ ದಾರಿಯಲ್ಲಿ ನಡೆದ ನಂತರದ ಸರ್ಕಾರವೂ 2006 ಲ್ಲಿ 59 ಪರ್ಮಿಟ್‌ಗಳನ್ನು ನೀಡಿತು. ಹಾಗೆ ಅನುಮತಿ ಟ್ಟಿಸಿದ ಖಾಸಗಿ ಗಣಿ ಕಂಪೆನಿಗಳ ಪೈಕಿ ಹೆಚ್ಚಿನವರು ಳ್ಳಾರಿ ಜಿಲ್ಲೆಗೆ ದಾಳಿಯಿಟ್ಟರು. ಗಣಿಗಾರಿಕೆಯಿಂದ ಅಧಿಕೃತ ರಣ್ಯ ನಾಶ ಶುರುವಾಗಿದ್ದು ಆಗಲೆ! ವಸ್ತು ಸ್ಥಿತಿ ಹೀಗಿರುವಾಗ ಕೃಷ್ಣ ವಿರುದ್ಧವೂ ತನಿಖೆಯಾಗಬೇಕೆಂದು ಟೀಂ ಅಣ್ಣಾ ಒತ್ತಾಯಿಸಿದರೆ ಅದರಲ್ಲಿ ತಪ್ಪೇನು ಬಂತು?

ಕೃಷ್ಣರ ಸರಣಿ ಭ್ರಷ್ಟಾಚಾರ

1999 ರಿಂದ 2004 ರವರೆಗೆ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಕೃಷ್ಣ ಮೇಲ್ನೋಟಕ್ಕೆ ದಕ್ಷ ಆಡಳಿತಗಾರನಂತೆ ಕಾಣುತ್ತಿದ್ದರೂ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತದಲ್ಲಿ ಕಡಿಮೆಯೇನೂ ಇರಲಿಲ್ಲ.



ಸಣ್ಣ ಸೈಜಿನ ಕಾಫಿ ಪ್ಲಾಂಟರ್ ಆಗಿದ್ದ ಕೃಷ್ಣರ ಅಳಿಯ ಸಿದ್ಧಾರ್ಥ ಕೃಷ್ಣ ಸಿ.ಎಂ. ಆಗಿದ್ದಾಗಲೇ ಮೂರು ಸಾವಿರ ಕೋಟಿ ರೂಪಾಯಿಯ ಉದ್ಯಮ ಸಾಮ್ರಾಜ್ಯ ಕಟ್ಟಿಕೊಂಡ. ಕಾಫಿ, ರಿಯಲ್ ಎಸ್ಟೇಟ್, ಶೇರ್ ವ್ಯವಹಾರ, ಐಟಿ ಕಂಪೆನಿಗಳು, ಬಂಡವಾಳ ಹೂಡಿಕೆ ಕಂಪೆನಿಗಳೆಲ್ಲಾ ಈತನ ಸಾಮ್ರಾಜ್ಯದಲ್ಲಿವೆ.

ಕೃಷ್ಣ ಸಿಎಂ ಆಗಿದ್ದಾಗಲೇ ಬೆಂಗಳೂರಿನಲ್ಲಿ ಖಾಸಗಿ ಟೆಲಿಕಾಂ ಕಂಪೆನಿಗಳ ಆಪ್ಟಿಕ್ ಕೇಬಲ್ ಹಾಕುವ ಸಾವಿರಾರು ಕೋಟಿ ರೂಪಾಯಿಗಳ ಅಕ್ರಮ ಡೀಲ್ ನಡೆಯಿತು. ಬೆಂಗಳೂರು ಮಹಾನಗರ ಪಾಲಿಕೆಗೆ ತೆರಿಗೆಯ ರೂಪದಲ್ಲಿ ಬರಬೇಕಿದ್ದ ನೂರಾರು ಕೋಟಿ ರೂಪಾಯಿಗೆ ಅವತ್ತು ವಂಚನೆಯಾಗಿತ್ತು. ಕೃಷ್ಣ ಅವತ್ತು ಖಾಸಗಿ ಟೆಲಿಕಾಂ ಕಂಪೆನಿಗಳಿಗೆ ಕಾನೂನುಬಾಹಿರವಾಗಿ ಕೊಟ್ಟ ಬೆಂಬಲವು ಇವತ್ತಿಗೂ ಬಿಬಿಎಂಪಿಗೆ ತಲೆನೋವಾಗಿದೆ.

ಡಿನೋಟಿಫಿಕೇಷನ್ ಡೀಲ್

ಕೃಷ್ಣರ ಅಳಿಯ ಸಿದ್ಧಾರ್ಥನ ಬೇನಾಮಿ ಮಾಲೀಕತ್ವದ ಕ್ಷೇಮಾ ಟೆಕ್ನಾಲಜೀಸ್‌ಗೆ ಸಂಬಂಧಿಸಿದ ಡಿನೋಟಿಫಿಕೇಶನ್ ಡೀಲ್ ಒಂದರ ಬಗ್ಗೆಯೂ ಅಣ್ಣಾ ಹಜಾರೆ ಟೀಂ ಗಮನ ಹರಿಸಬೇಕಿದೆ. ಬೆಂಗಳೂರು ದಕ್ಷಿಣ ತಾಲೂಕಿನ ಪಟ್ಟಣಗೆರೆ ವ್ಯಾಪ್ತಿಯಲ್ಲಿ ಬಿಡಿಎ 1994 ರಲ್ಲೇ ನೂರಾರು ಎಕರೆ ಜಮೀನನ್ನು ನೋಟಿಫೈ ಮಾಡಿತ್ತು. ಆದರೆ ಕೃಷ್ಣ ಸಿ.ಎಂ. ಆಗಿದ್ದಾಗ ಸದರಿ ಜಮೀನುಗಳ ಪೈಕಿ 68 ಎಕರೆಯಷ್ಟನ್ನು ಡಿನೋಟಿಫೈ ಮಾಡಿ ಕ್ಷೇಮಾ ಟೆಕ್ನಾಲಜೀಸ್‌ಗೆ ಮಂಜೂರು ಮಾಡಿದ್ದಾರೆ. ಸದರಿ ಭೂಮಿಯ ಮಾಲೀಕರಾಗಿದ್ದ ...ವರೇಗೌಡ, ಹೇಮೇಗೌಡ ಹಾಗೂ ಚೌಡಪ್ಪ ಎಂಬುವವರ ಮೂಲಕ ಈ ಡಿನೋಟಿಫಿಕೇಷನ್ ಡೀಲ್ ಕುದುರಿಸಿ ...ರಭಾರೆಗೆ ಅವಕಾಶ ಮಾಡಿಕೊಡಲಾಗಿದೆ.

ಅಂದ ಹಾಗೆ ಕ್ಷೇಮಾ ಟೆಕ್ನಾಲಜೀಸ್‌ನಲ್ಲಿ ...ದ್ಧಾರ್ಥನ ಮುಖ ...ರವಾಗಿ ಕಾಣ ...ಗುವುದಿಲ್ಲ, ಇದರಲ್ಲಿ ...ಎಸೀಶ್, ಗೋಪಿನಾಥ್ ...ಎಂ.ಡಿ.ಯಾಗಿದ್ದಾರೆ. ...ಧೀರ್ ಕಾಮತ್ ಹಾಗೂ ಪೂರ್ಣಿಮಾ ...ರಾಜ್ (ಐ.ಎ.ಎಸ್ ಅಧಿಕಾರಿ ಕೆ.ಜೈರಾಜ್‌ರ ...) ಮುಂತಾದವರು ...ರ್ದೇಶಕರಾಗಿದ್ದಾರೆ.

ನಿರ್ದಿಷ್ಟವಾಗಿ ...ಕ್ರಮ ಗಣಿಗಾರಿಕೆಗೆ ...ಬಂಧಿಸಿದಂತೆ ...ಳಬೇಕೆಂದರೆ ಆಗಿನ ...ಸ್ಕ, ಸರ್ಕಾರದ ನೇರ ಫಲಾನುಭವಿಗಳಾಗಿ ಖಾಸಗಿ ಕಂಪೆನಿಗಳಿಂದ ವಿಕ್ಟರಿ ಎಕ್ಸ್‌ಪೋರ್ಟ್ಸ್, ಇಂಡಿಯನ್ ರಾಕ್ಸ್ ಎಕ್ಸ್‌ಪೋರ್ಟ್ಸ್, ಫೆಸಿಫಿಕ್ ಎಂಟರ್‌ಪ್ರೈಸಸ್, ಪಿಕೆಪಿ ಗ್ರೂಪ್ ಆಫ್ ಕಂಪೆನಿಗಳೆಲ್ಲಾ ಇವೆ.

ಸಿ.ಬಿ.ಐ ನವರೇ ತನಿಖೆ ಮಾಡಬೇಕಾದ ತೀವ್ರ ಮಟ್ಟದ ಅವ್ಯವಹಾರಗಳಿವು.

ಜೋಕರ್ ಕೃಷ್ಣ

ಈ ಕೃಷ್ಣರ ಸ್ಪೆಷಾಲಿಟಿ ಏನೆಂದರೆ ಅವ್ಯವಹಾರಗಳ ಜೊತೆಗೆ ಅಸಂಬದ್ಧತೆಯೂ ಸೇರಿಕೊಂಡಿರುವುದು. ವಿದೇಶಾಂಗ ಮಂತ್ರಿಯಾದ ಹೊಸತರಲ್ಲಿ ಸಚಿವ ನಿವಾಸ ರೆಡಿಯಾಗಿರಲಿಲ್ಲವೆಂದು ತಿಂಗಳಾನುಗಟ್ಟಲೆ ದೆಹಲಿಯ ಪಂಚತಾರಾ ಹೋಟೆಲ್‌ನಲ್ಲಿ ವಾಸವಿದ್ದರು ಕೃಷ್ಣ. ಕೊನೆಗೆ ಸೋನಿಯಾ ಗಾಂಧಿಯೇ ಬಂದು ಕೃಷ್ಣರನ್ನು ಹೋಟೆಲ್‌ನಿಂದ ಹೊರಗೆ ಓಡಿಸಬೇಕಾಯಿತು.


ಇನ್ನೊಮ್ಮೆ ವಿಶ್ವಸಂಸ್ಥೆಯಲ್ಲಿ ತನ್ನ ಪಕ್ಕ ಕೂತಿದ್ದ ಪೋರ್ಚುಗಲ್ ಸಚಿವನ ಭಾಷಣವನ್ನು ಓದಿ ನಗೆಪಾಟಲಿಗೀಡಾಗಿದ್ದ ಪ್ರತಿಭಾವಂತನೀತ. ಆ ನಂತರ **'absent minded'** ಎಂದು ಟೈಮ್ಸ್ ಆಫ್ ಇಂಡಿಯಾ ಗೇಲಿ ಮಾಡಿದಾಗ ಮಾನನಷ್ಟ ಕೇಸ್ ಹಾಕುವುದಾಗಿ ಬೆದರಿಸಲು ಹೊರಟಿದ್ದರು.

ಈ ಕೃಷ್ಣ ಅದೆಂತಾ ಮೂರ್ಖನೆಂದರೆ ಮಂಡ್ಯ ಬಸ್‌ಸ್ಟಾಂಡ್ ನಲ್ಲೊಮ್ಮೆ ತಾನು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಮತ್ತು ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಜೊತೆ ನಿಂತಿರುವ ಫೋಟೋವನ್ನು ಕಟೌಟ್ ಮಾಡಿಸಿ ನಿಲ್ಲಿಸಿಕೊಂಡಿದ್ದರು. ಈಗ 80 ವಯಸ್ಸಿನ ಕೃಷ್ಣಗೆ ಕಿವಿ ಸರಿಯಾಗಿ ಕೇಳಿಸುವುದೇ ಇಲ್ಲ. ಈತ ಎಂತಾ ಜೋಕರ್ ಅಂದರೆ ಒಮ್ಮೆ ಮಲೇಶಿಯಾಗೆ ಹೋಗಿದ್ದಾಗ ಅಲ್ಲಿನ ಪ್ರಧಾನಿ ಹಾಗೂ ಅಧ್ಯಕ್ಷರಿಗೆ ಒಂದೊಂದು ಬೆಳ್ಳಿಯ ಪಾತ್ರೆಗಳನ್ನು ಗಿಫ್ಟ್ ಎಂದು ಕೊಟ್ಟು ಬಂದಿದ್ದರು. ಆಮೇಲೆ ಅಲ್ಲಿನ ಅಧಿಕಾರಿಗಳು ತೆಗೆದು ನೋಡಿದಾಗ ಪಾತ್ರೆಯ ತಳಭಾಗ ಬೆಳ್ಳಿಯದಾಗಿರದೆ ತಾಮ್ರ ಲೇಪಿತವಾಗಿತ್ತಂತೆ. 10 ಸಾವಿರ ರೂ. ಬೆಲೆಯ ಈ ಪಾತ್ರೆಗೆ ಕೃಷ್ಣರ ಇಲಾಖಾ ಅಧಿಕಾರಿಗಳು ನಲವತ್ತು ಸಾವಿರ ಬಿಲ್ ಜಡಿದು ಹಣ ನುಂಗಿದ್ದರು. ಆದರೆ ಕೃಷ್ಣರ ಆಪ್ತ ಅಧಿಕಾರಿ ರಾಘವೇಂದ್ರ ಶಾಸ್ತ್ರೀ ಆ ಭ್ರಷ್ಟರ ತಲೆ ಕಾಯ್ದನಂತೆ.

ಕೃಷ್ಣ ಎಲ್ಲಿಗೆ ಹೋದರೂ ಭಾರತದ ಮಾನಮರ್ಯಾದೆ ಹರಾಜಾಗುವುದು ನಿಜ. ಈತ ಓರ್ವ ಹಿರಿಯ ರಾಜಕಾರಣಿ ಅನಿಸಿಕೊಂಡಿದ್ದರೂ ಪಕ್ವತೆ ಗಳಿಸಲಿಲ್ಲ. ಈಗ ನೋಡಿದರೆ ರಾಜಕೀಯ ಜೀವನದ ಕೊನೆಗಾಲದಲ್ಲಿ ಭ್ರಷ್ಟಾಚಾರದ ಆರೋಪಗಳಿಗೆ ತುತ್ತಾಗಿದ್ದಾರೆ.


ಈ ಕೃಷ್ಣ ಸಾಚಾ ಅಲ್ಲ ಎನ್ನುವ ವಿಚಾರ ಕರ್ನಾಟಕದ ಜನರಿಗೆ ಯಾವತ್ತೋ ಅರ್ಥವಾಗಿದೆ. ಈಗಿನ ಅಕ್ರಮ ಗಣಿಗಾರಿಕೆಯ ಆರೋಪಗಳ ಬಗ್ಗೆ ಆದಷ್ಟು ಬೇಗನೆ ತನಿಖೆಯಾದರೆ ಒಳ್ಳೆಯದು. ಜೊತೆಗೆ ಆಪ್ಟಿಕ್ ಫೈಬರ್ ಕೇಬಲ್ ಹಗರಣ, ಡಿನೋಟಿಫಿಕೇಷನ್ ದಂಧೆಗಳು, ಅಳಿಯ ಸಿದ್ಧಾರ್ಥನ ವ್ಯವಹಾರಗಳ ಬಗ್ಗೆಯೂ ತನಿಖೆಯಾಗಬೇಕಾಗಿರುವುದು ಖಂಡಿತಾ ಅಗತ್ಯವಿದೆ.

❖



ಸಿದ್ಧಾರ್ಥನ ದಂಧೆಗಳ ಪಕ್ಷಿನೋಟ


ಅಳಿಯ ಸಿದ್ಧಾರ್ಥನ ದಂಧೆಯೂ ತನಿಖೆಯಾಗಲಿ





ಯಡಿಯೂರಪ್ಪನ ಅಕ್ರಮಗಳ ಬಗ್ಗೆ ತನಿಖೆಯಾಗುತ್ತಿರುವಾಗ ಅವರ ಮಕ್ಕಳಾದ ರಾಘವೇಂದ್ರ-ವಿಜಯೇಂದ್ರ ಹಾಗೂ ಅಳಿಯ ಸೋಹನ್ ಕುಮಾರರ ದಂಧೆಗಳ ಬಗ್ಗೆಯೂ ಈಗ ಸಿಬಿಐ ತನಿಖೆಯಾಗುತ್ತಿದೆ. ಅದೇ ರೀತಿ ಗಣಿಕಳ್ಳ ಜನಾರ್ದನ ರೆಡ್ಡಿಯ ಜೊತೆಗೆ ಪತ್ನಿ ಲಕ್ಷ್ಮೀ ಅರುಣಾ, ಜೊತೆಗಾರರಾದ ಮೆಹಬೂಬ್ ಅಲಿಖಾನ್, ಅಧಿಕಾರಿಗಳಾದ ಡಿಸಿಎಫ್ ಮುತ್ತಯ್ಯ, ಆಂಧ್ರದ ಶ್ರೀಲಕ್ಷ್ಮಿಯೂ ತನಿಖೆಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ಆಂಧ್ರದ ಸಂಸದ ಜಗನ್ ಜೊತೆಗೆ ಸಿಬಿಐನವರು ಜಗನ್ ಸಹಚರರ ವಿರುದ್ಧವೂ ತನಿಖೆ ನಡೆಸುತ್ತಿದ್ದಾರೆ.

ಹೀಗಿರುವಾಗ ಕೃಷ್ಣ ವಿರುದ್ಧದ ಆರೋಪಗಳ ತನಿಖೆಯಾಗುವುದೇ ಆದಲ್ಲಿ ಅವರ ಅಳಿಯ ಸಿದ್ಧಾರ್ಥನ ಬ್ಯುಸಿನೆಸ್ ಸಾಮ್ರಾಜ್ಯದ ಆಳ ಅಗಲಗಳ ಬಗ್ಗೆಯೂ ತನಿಖೆಯಾದರೆ ಒಳಿತು. ಕೃಷ್ಣ ವಿರುದ್ಧ ಅಕ್ರಮ ಗಣಿಗಾರಿಕೆಯ ಜೊತೆಗೆ ಡಿನೋಟಿಫಿಕೇಷನ್ ಅವ್ಯವಹಾರಗಳು, ಅಕ್ರಮ ಸಂಪತ್ತಿನ ಕ್ರೂಢೀಕರಣಗಳ ಪ್ರಕರಣಗಳೂ ನಾಳೆ ಹೊರಗೆ ಬಂದಲ್ಲಿ ಅಳಿಯ ಸಿದ್ಧಾರ್ಥನೂ ತನಿಖಾ ವ್ಯಾಪ್ತಿಗೆ ಬರಲೇಬೇಕಾಗುತ್ತದೆ.

ಚಿಕ್ಕಮಗಳೂರಿನ ಸಣ್ಣಸೈಜಿನ ಕಾಫಿ ಪ್ಲಾಂಟರ್ ಗಂಗಯ್ಯ ಹೆಗ್ಡೆಯ ಮಗ ಸಿದ್ಧಾರ್ಥ 1984 ರಲ್ಲಿ ಕೈಯಲ್ಲಿ ಕೇವಲ 30 ಸಾವಿರ ರೂಪಾಯಿ ಹಿಡಿದು ಬ್ಯುಸಿನೆಸ್ ಶುರು ಮಾಡಿದ್ದಾತ. ಅಂತವನು 1992 ರ ಸುಮಾರಿನಲ್ಲಿ ಕಾಫಿ ವ್ಯವಹಾರಕ್ಕೆ ಕೈಯಿಟ್ಟ. 1993 ರಲ್ಲಿ ಭಾರತ ಸರ್ಕಾರವೂ ಕಾಫಿ ಖರೀದಿಯ ಮೇಲೆ ಕಾಫಿ ಬೋರ್ಡ್‌ಗಿದ್ದ ಏಕಸ್ವಾಮ್ಯವನ್ನು ಸಡಿಲಗೊಳಿಸಿ ಬೆಳೆಗಾರರು ಹಾಗೂ ವ್ಯಾಪಾರಿಗಳಿಗೆ ಮಾರಾಟದ ಅವಕಾಶ ನೀಡಿತು. ಈ ಬದಲಾವಣೆ ಮಾಡಿಸಿದ್ದೇ ಸಿದ್ಧಾರ್ಥ. ಆಗ ಕೃಷ್ಣ ರಾಜ್ಯಸಭಾ ಮೆಂಬರ್ ಆಗಿದ್ದರು. ತಮ್ಮ ಅಳಿಯನ ಬ್ಯುಸಿನೆಸ್ ಬೆಳೆಯಲು ತಮ್ಮ ಪ್ರಭಾವ ಬಳಸಿ ಕಾಫಿ ಮಾರಾಟದ ಕಾಯ್ದೆಗೆ ತಿದ್ದುಪಡಿ ತರಲು ಕಾರಣರಾಗಿದ್ದರು. ಜೊತೆಗೆ ಖಾಸಗೀಕರಣದ ಯುಗ ಅದಾಗಿದ್ದರಿಂದಾಗಿ ಬದಲಾದ ಕಾಯ್ದೆ ಸಿದ್ಧಾರ್ಥನಿಗೆ ಹಣ ಮಾಡಲು ಹೊಸ ದಾರಿ ತೋರಿಸಿತ್ತು. ಆ ಅವಕಾಶ ಬಳಸಿಕೊಂಡ ಸಿದ್ಧಾರ್ಥ ಸ್ಟಾಕ್ ಮಾರ್ಕೆಟ್‌ನಲ್ಲಿ ದುಡಿದಿದ್ದ ಹಣವನ್ನು ಹೊಸ ಕಾಫಿ ಎಸ್ಟೇಟ್‌ಗಳ ಖರೀದಿಗೆ ಹೂಡಿದ. ನೋಡನೋಡುತ್ತಿದ್ದಂತೆ ಹತ್ತು ಸಾವಿರ ಎಕರೆ ಕಾಫಿ ಎಸ್ಟೇಟ್ ಅವನದಾಯಿತು.







ಈ ಪೈಕಿ ತರೀಕೆರೆ ತಾಲ್ಲೂಕಿನ 2500 ಎಕರೆ ವಿಸ್ತಾರದ ಕತ್ತಲೆಕಾನು ಎಸ್ಟೇಟ್ ಖರೀದಿ ವ್ಯವಹಾರವು ಅನುಮಾನಾಸ್ಪದವಾಗಿದೆ. ಚೆನ್ನೈ ಸೂಪರ್ ಕಿಂಗ್ಸ್ ಕ್ರಿಕೆಟ್ ಟೀಂನ ಮಾಲೀಕ ಎ.ಸಿ. ಮುತ್ತಯ್ಯನ ಎಸ್ಟೇಟ್ ಅದಾಗಿತ್ತು. ಅವನು ಸರ್ಕಾರಿ ಸ್ವಾಮ್ಯದ Spic (ಸದರನ್ ಪೆಟ್ರೋ ಕೆಮಿಕಲ್ಸ್ ಇಂಡಸ್ಟ್ರಿಯಲ್ ಕಾರ್ಪೊರೇಷನ್) ಸಂಸ್ಥೆಯನ್ನು ಯಾರ್‍ಯಾರಿಗೋ ಲಂಚ ಕೊಟ್ಟು ಜುಜುಬಿ 12 ಕೋಟಿಗೆ ಖರೀದಿಸಿದ್ದ. ಆ ಡೀಲ್ ಬಗ್ಗೆ ಕೋರ್ಟ್‌ನಲ್ಲಿ ವಿಚಾರಣೆಯಾಗಿ ಮುತ್ತಯ್ಯನಿಗೆ 28 ಕೋಟಿ ರೂ. ದಂಡ ವಿಧಿಸಲಾಗಿತ್ತು. ಆಗ ಹಣವಿರದಿದ್ದ ಮುತ್ತಯ್ಯ ಕತ್ತಲೆಕಾನು ಎಸ್ಟೇಟನ್ನು ಸಿದ್ಧಾರ್ಥನಿಗೆ ಕೊಟ್ಟ.

1999 ರ ಅಸೆಂಬ್ಲಿ ಎಲೆಕ್ಷನ್ ನಡೆದಾಗ ಇದೇ ಸಿದ್ಧಾರ್ಥ ಜೆಮ್ ಗ್ರಾನೈಟ್ಸ್‌ನ ವೀರಮಣಿ, ಹರಿ ಖೋಡೆ, ಮಲ್ಯ ಮುಂತಾದವರಿಂದ ನೂರು ಕೋಟಿ ರೂಪಾಯಿ ಕಲೆಕ್ಟ್ ಮಾಡಿ ಕೃಷ್ಣರ ನಿಷ್ಠಾವಂತ ಕಾಂಗ್ರೆಸ್ ಕ್ಯಾಂಡಿಡೇಟ್‌ಗಳಿಗೆ ಹಂಚಿದ್ದ. ಎಲೆಕ್ಷನ್ ಗೆದ್ದನಂತರ ಅವರೆಲ್ಲಾ ಕೃಷ್ಣರನ್ನೇ ಸಿಎಂ ಆಗಿಸಲು ಬೆಂಬಲಿಸಲಿ ಎನ್ನುವ ಲೆಕ್ಕಾಚಾರ ಅದರಲ್ಲಿತ್ತು. ಹೀಗೆ ಕೃಷ್ಣ ಸಿಎಂ ಆದ ನಂತರ ಸಿದ್ಧಾರ್ಥ ಒಂದರ ಹಿಂದೆ ಇನ್ನೊಂದರಂತೆ ಹೊಸ ಹೊಸ ಕಂಪನಿಗಳನ್ನು ಹುಟ್ಟುಹಾಕುತ್ತಾ ಹೋದ.



ಜೈರಾಜ್ ಮತ್ತು ಪತ್ನಿ ಪೂರ್ಣಿಮಾ

ಶಿವನ್ ಸೆಕ್ಯುರಿಟೀಸ್, ಆರ್ಜು ಡಾಟ್‌ಕಾಂ, ಮೈಂಡ್ ಟ್ರೀ, ಲಿಕ್ವಿಡ್ ಕ್ರಿಸ್ಟಲ್ಸ್, ಕ್ಷೇಮಾ ಟೆಕ್ನಾಲಜೀಸ್, ಗ್ಲೋಬಲ್ ಟೆಕ್ನಾಲಜೀಸ್ ವೆಂಚರ್ಸ್..... ಹೀಗೆ ಡಜನ್‌ಗಟ್ಟಲೆ ಕಂಪನಿಗಳಿಗೆ ಈ ಸಿದ್ಧಾರ್ಥನೆ ಒಂದೋ ಮಾಲೀಕ ಇಲ್ಲವೆ ಪಾರ್ಟ್‌ನರ್ ಆಗಿದ್ದಾನೆ.

ಸಿದ್ಧಾರ್ಥನ ಶಿವನ್ ಟೆಕ್ನಾಲಜೀಸ್ ಕಂಪನಿಯಲ್ಲಿ ಬ್ಯಾಂಕ್ ಆಫ್ ಅಮೆರಿಕಾದ 20% ಪಾಲುದಾರಿಕೆ ಇದೆ. ಬೇರೆಬೇರೆ ಉದ್ಯಮಗಳಲ್ಲಿ ಬಂಡವಾಳ ಹೂಡುವುದೇ ಶಿವನ್ ಕೆಲಸ.

ಬಿ.ಎ. ಜಗದೀಶ್ ಎಂಬುವನ ಎಕ್ಸೋಡೆಸ್ ಕಂಪನಿಯಲ್ಲೂ ಸಿದ್ಧಾರ್ಥನ ಪಾಲುದಾರಿಕೆ ಇದೆ. ಹಾಟ್‌ಮೇಲ್‌ನ ಖ್ಯಾತಿಯ ಸಬೀರ್ ಭಾಟಿಯಾ ಶುರು ಮಾಡಿದ್ದ ಆರ್ಜು ಡಾಟ್ ಕಾಮ್‌ಗೂ ಬಂಡವಾಳ ಹೂಡಿದ್ದು ಸಿದ್ಧಾರ್ಥನೇ ಎನ್ನಲಾಗಿದೆ.

ವಿಪ್ರೋದಲ್ಲಿದ್ದ ಅಶೋಕ್ ಸೂಟ ಅಲ್ಲಿಂದ ಹೊರಬಂದಾಗ **Mind Tree** ಸಾಫ್ಟ್‌ವೇರ್ ಕಂಪನಿ ಸ್ಥಾಪಿಸುವಾಗಲೂ ಸಿದ್ಧಾರ್ಥನ ಹಣ ಹರಿದುಬಂದಿದೆ. ಅಂಧ್ರದ ಸಿನಿಮಾ ಸಂಗೀತಗಾರ ರಮಣ ಗೋಗುಲ ಎಂಬಾತನ **Liquid Crystals** ಎಂಬ ಕಂಪನಿಗೆ ಸಿದ್ಧಾರ್ಥನೂ ಪಾಲುದಾರನಾಗಿದ್ದಾನೆ. ಬೆಂಗಳೂರಿನಲ್ಲಿ 100 ಎಕರೆಯಷ್ಟು ಐಟಿ ಪಾರ್ಕ್ ಹೊಂದಿರುವ ಕ್ಷೇಮಾ ಟೆಕ್ನಾಲಜೀಸ್‌ನ ಮುಂಚೂಣಿಯಲ್ಲಿ ಸಿದ್ಧಾರ್ಥ ಕಾಣಿಸದಿದ್ದರೂ ಅದರ ರಿಮೋಟ್ ಇರುವುದೇ ಸಿದ್ಧಾರ್ಥ ಕೈಲಿ.

ಇದೆಲ್ಲದರ ಜೊತೆಗೆ ಸಿದ್ಧಾರ್ಥ ಅಮಾಲ್ಗಮೆಟೆಡ್ ಬೀನ್ ಕಾಫಿ ಟ್ರೇಡಿಂಗ್ ಕಂಪೆನಿಯ ವ್ಯವಹಾರವಿದೆ. ಕೆಫೆ ಕಾಫಿ ಡೇ ಈ ದಿನ ದೇಶಾದ್ಯಂತ 1270 ಔಟ್‌ಲೆಟ್‌ಗಳನ್ನು ಹೊಂದಿದೆ. ಇದೊಂದರ ಆಸ್ತಿ ಮೌಲ್ಯವೇ ಎರಡು ಸಾವಿರ ಕೋಟಿಯಷ್ಟಿದೆ.

ಇದಲ್ಲದೆ ಇವತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾವಿರಾರು ಎಕರೆಗಳಷ್ಟು ಕಾಫಿ ಎಸ್ಟೇಟ್‌ಗಳ ಒಡೆಯನಾಗಿದ್ದಾನೆ ಸಿದ್ಧಾರ್ಥ.

ಎಸ್.ಎಂ. ಕೃಷ್ಣರ ಸಹಕಾರ ಹಾಗೂ ಕಾನೂನು ಬಾಹಿರ ಬೆಂಬಲ ಸಿಗದೆ ಹೋಗಿದಿದ್ದರೆ ಸಿದ್ಧಾರ್ಥ ಇವತ್ತು ಇಂಡಿಯಾದ ಕಾಫಿಕಿಂಗ್ ಎನಿಸಿಕೊಳ್ಳಲು ಸಾಧ್ಯವಿರಲಿಲ್ಲ.

ನಿರ್ದಿಷ್ಟವಾಗಿ ಕೃಷ್ಣ ಸಿಎಂ ಆಗಿದ್ದಾಗ ನಡೆದಿರುವ ಡಿನೋಟಿಫಿಕೇಷನ್‌ಗಳು, ಅದರಿಂದ ಸಿದ್ಧಾರ್ಥನ ಕಂಪನಿಗಳಿಗೆ ಮಂಜೂರಾದ ಭೂಮಿ, ಸಿದ್ಧಾರ್ಥನ ಹತ್ತಾರು ವ್ಯವಹಾರಗಳ ಬಗ್ಗೆಯೂ ಸರಿಯಾದ ತನಿಖೆಯಾದರೆ ಕೃಷ್ಣನ ಮುಖವಾಡ ಕಳಚಿ ಬೀಳುತ್ತದೆ. ❖

soham
Empowering India

ಸೋಹಮ್ ಎಂಬ ಸೋಗಲಾಡಿ ಕಂಪನಿ

ಈ ಸೋಹಮ್ ಕಂಪನಿಯ ಪೂರ್ವಾಪರಗಳನ್ನು ಕೆದಕಿದರೆ ಕೆಲವು ಕುತೂಹಲಕರ ಮಾಹಿತಿಗಳು ಸಿಗುತ್ತವೆ. ಈ ಕಂಪನಿ ಹಿಂದೆ 'ಬೊಬ್ಬ ಏವಿಯೇಷನ್' ಎಂಬ ಹೆಸರಿನಲ್ಲಿ ಏರ್‌ಪೋರ್ಟ್‌ಗಳಲ್ಲಿ ಹಲವಾರು ಸೇವೆಯ ಗುತ್ತಿಗೆಯನ್ನು ನಿರ್ವಹಿಸುತ್ತಿತ್ತು. ಇದು ಶೆಟ್ಟಿ ಕುಟುಂಬದ ಹಿಡಿತಕ್ಕೆ ಬಂದ ಮೇಲೆ ಇದಕ್ಕೆ 'ಸೋಹಮ್ ಎನರ್ಜಿ ಕಂಪನಿ'ಯೆಂದು ಮರುನಾಮಕರಣ ಮಾಡಲಾಯಿತು. ಜೊತೆಗೆ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದು ಕಂಪನಿಯ ಆದ್ಯತೆಯೆಂಬ ತಿದ್ದುಪಡಿ ಮಾಡಲಾಯಿತು. ಕೆಲ ವರ್ಷಗಳ ಹಿಂದೆ ಇದೇ ಕಂಪನಿ ಗುರುಪುರ ಹೊಳೆಯ ದಂಡೆಯಲ್ಲಿ ಮೂಡಬಿದ್ರಿ ಸಮೀಪ 15 ಮೆ.ವಾ. ಸಾಮರ್ಥ್ಯದ ಮನ್ನಪಿತ್ಲು ಕಿರುವಿದ್ಯುತ್ ಯೋಜನೆಯನ್ನು ನಿರ್ಮಿಸಿತ್ತು. ದುರಂತವೆಂದರೆ ಆ ಯೋಜನೆಯ ಕಟ್ಟಡ ಅಲ್ಪಾವಧಿಯಲ್ಲೇ ಕುಸಿದು ಬಿದ್ದಿತ್ತು. ಅದೃಷ್ಟವಶಾತ್ ಆಗ ಯಾರೂ ಇಲ್ಲದಿದ್ದ ಕಾರಣ ಸಾವುನೋವು ಸಂಭವಿಸಲಿಲ್ಲ. ಆಗ ಕಂಪನಿಯ ಎಂಡಿ ಸಂಜಿತ್ ಶೆಟ್ಟಿ ಹೇಳಿದ್ದೇನು ಗೊತ್ತೆ? 'ಕಟ್ಟಡ ಕುಸಿದು ಬಿದ್ದಿದ್ದರೂ ಯಾವುದೇ ಪ್ರಾಣಾಪಾಯವಾಗದಿರುವುದೇ ನಮ್ಮ ಸಾಮರ್ಥ್ಯ, ಅದೇ ನಮ್ಮ ಆಶಾಕಿರಣ' ಎಂದು.

ಇದೇ ಕಂಪನಿಯವರು ಮಹದೇವಪುರದಲ್ಲಿ ಮಾತ್ರವಲ್ಲದೆ ಹಲವಾರು ಕಡೆಗಳಲ್ಲಿ ಇಂಥದೇ ಕಾಮಗಾರಿ ಕೈಗೊಂಡಿದ್ದಾರೆ. ಮೂಡಬಿದಿರಿ, ಉಪ್ಪಿನಂಗಡಿ, ಭಟ್ಕಳ, ಜೋಗದ ಬಳಿ ಹೊಸಂಗಡಿ, ಸುಬ್ರಮಣ್ಯದ ಬಳಿಯ ಸಂಪ್ಲಾಡಿ ಮುಂತಾದ ಕಡೆಗಳಲ್ಲಿ ಕಾಮಗಾರಿ ಶುರುವಿಟ್ಟುಕೊಂಡಿದ್ದಾರೆ. ಜೋಗದ ಬಳಿ ಅಂಬುತೀರ್ಥ ಕಂಪನಿ ಎಂಬ ಹೆಸರಿನಲ್ಲಿ ಯೋಜನೆಯೊಂದನ್ನು ಪೂರ್ಣಗೊಳಿಸಿದ್ದಾರೆ.

ಎಲ್ಲಾ ಸರಿ, ಈ ಯೋಜನೆಗೆ ಬೇಕಾದ ಬಂಡವಾಳವನ್ನು ಎಲ್ಲಿಂದ ತರುತ್ತಾರೆ? ರಾಷ್ಟ್ರೀಕೃತ ಬ್ಯಾಂಕೊಂದರ ಎಂಡಿಯಾಗಿದ್ದ ಸದಾನಂದ ಶೆಟ್ಟಿಗೆ ಅದು ಅಂಥಾ ದೊಡ್ಡ ಸಮಸ್ಯೆಯೇ ಅಲ್ಲ. ಸರ್ಕಾರಿ ಸಂಸ್ಥೆಗಳಾದ ಹುಡ್ಕೋ, ಕೇಂದ್ರ ಸರ್ಕಾರದ 'ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್', ಸಿಂಡಿಕೇಟ್ ಬ್ಯಾಂಕ್ ಮುಂತಾದ ಸಂಸ್ಥೆಗಳಿಂದಲೇ ಬಂಡವಾಳ ಪಡೆದಿದ್ದಾರೆ. ತೀರಾ ಇತ್ತೀಚೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರಮುಖ ಪಾಲುದಾರನಾಗಿರುವ ಸಂಸ್ಥೆಯೊಂದರಿಂದ ಸುಮಾರು 125 ಕೋಟಿಗಳಷ್ಟು ಬೃಹತ್ ಮೊತ್ತದ ಸಾಲ ಎತ್ತಿದ್ದಾರೆ. ಬಂಡವಾಳ ಮಾತ್ರ ಸರ್ಕಾರಿ ಸಂಸ್ಥೆಗಳದ್ದೇ, ಆದರೆ ಕೋಟಿ ಕೋಟಿ ಲಾಭ ಮಾತ್ರ ಖಾಸಗಿಯವರ ಪಾಲಿಗೆ. ಅಭಿವೃದ್ಧಿ ಯೋಜನೆಗಳಿಗೆ ತಮ್ಮ ಬಳಿ ಹಣ ವಿಲ್ಲವೆಂಬ ನೆಪವೊಡ್ಡಿ ಕಮಿಷನ್ ಆಸೆಯಿಂದ ಖಾಸಗಿ ಕಂಪನಿಗಳ ಬೊಜ್ಜು ಬೆಳೆಸುವ ಸರ್ಕಾರದ ನೀತಿಗೆ ಏನೆನ್ನಬೇಕು?

ಇಂಥ ನೀತಿಗೆಟ್ಟ ಸರ್ಕಾರಗಳ ನೀತಿಗಳನ್ನು ಶ್ರೀಮಂತ ಬಂಡವಾಳಿಗರು ದುರುಪಯೋಗಪಡಿಸಿಕೊಳ್ಳುತ್ತಿರುವುದು ಎಲ್ಲೆಡೆ ವ್ಯಾಪಕವಾಗಿದೆ. ಅಂದಹಾಗೆ ಸೋಹಮ್ ಎಂಡಿ ತಮ್ಮ ಫೇಸ್‌ಬುಕ್‌ನಲ್ಲಿ ಹಾಕಿರುವ ಟ್ಯಾಗ್‌ಲೈನ್ ಏನು ಗೊತ್ತೆ?

"Dare To Break the Rules" ಅಂದರೆ ಕಾನೂನುಗಳನ್ನು ಮುರಿಯುವ ಧೈರ್ಯ ಮಾಡಿ ಎಂದರ್ಥ! ಇದಕ್ಕಿಂತ ವಿವರಣೆ ಬೇರೇನು ಬೇಕು ಹೇಳಿ?


ಕಾವೇರಿ ನಾಶಕ್ಕೆ ಶಾಸಕನ ಕುಮ್ಮಕ್ಕು

ಶ್ರೀರಂಗಪಟ್ಟಣವು ನಾಡಿನ ಚರಿತ್ರೆಯಲ್ಲಿ ಮಹತ್ವದ ಪಾತ್ರವನ್ನು ಹೊಂದಿದೆ. ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಮೈಸೂರು ಹುಲಿ ಟಿಪ್ಪು ಸುಲ್ತಾನನಿಗೆ ಇದು ರಾಜಧಾನಿಯಾಗಿತ್ತು. ಇಂಥಾ ಕ್ಷೇತ್ರಕ್ಕೆ ರಮೇಶ್‌ಬಾಬು ಬಂಡಿಸಿದ್ದೇಗೌಡ ಎಂಬ ನಾಲಾಯಕ್ ಮನುಷ್ಯ ಶಾಸಕನಾಗಿದ್ದು ಮಾತ್ರ ಈ ನಾಡಿನ ದುರಂತಗಳಲ್ಲೊಂದು.



• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಕನ್ನಡನಾಡಿನ ಪ್ರಮುಖ ಜೀವನದಿಯಾಗಿರುವ ಕಾವೇರಿಗೆ ಒಂದಿಲ್ಲೊಂದು ಗಂಡಾಂತರ ಎದುರಾಗುತ್ತಿದೆ. ಈಗ ಈ ಗಂಡಾಂತರ ಶ್ರೀರಂಗಪಟ್ಟಣದ ಬಳಿಯ ಕಿರುವಿದ್ಯುತ್ ಯೋಜನೆಯ ಮೂಲಕ ಬಂದೊದಗಿದೆ! ಸ್ಥಳೀಯ ಶಾಸಕ ರಮೇಶ್‌ಬಾಬು ಈ ಅಕ್ರಮಕ್ಕೆ ಬೆಂಗಾವಲಾಗಿ ಟೊಂಕಕಟ್ಟಿ ನಿಂತುಬಿಟ್ಟಿದ್ದಾನೆ. ಅಷ್ಟು ಮಾತ್ರವಲ್ಲ, ಸರ್ಕಾರದ ಉನ್ನತ ವಲಯಗಳು ನೇರವಾಗಿ ಈ ಪಾಪಕೃತ್ಯದಲ್ಲಿ ಭಾಗಿಯಾಗಿವೆ!



ಈ ಅಕ್ರಮ ಯೋಜನೆಯ ಸಂಕ್ಷಿಪ್ತ ಹಿನ್ನೆಲೆ ಹೀಗಿದೆ:

ವಿದ್ಯುತ್‌ಶಕ್ತಿಯನ್ನು ಉತ್ಪಾದಿಸಲು ದೇಶಾದ್ಯಂತ ಅಣು ವಿದ್ಯುತ್, ಥರ್ಮಲ್ ಪವರ್ ಹಾಗೂ ಭಾರೀ ಜಲವಿದ್ಯುತ್ ಮುಂತಾದ ನೂರಾರು ಯೋಜನೆಗಳು ತಲೆಯೆತ್ತಿವೆ. ಆದರೆ ಇಂಥಾ ಯೋಜನೆಗಳಿಂದ ಪರಿಸರದ ಮೇಲೆ ತೀವ್ರ ದುಷ್ಪರಿಣಾಮಗಳು ಉಂಟಾಗಿರುವ ಹಿನ್ನೆಲೆಯಲ್ಲಿ ಜಗತ್ತಿನಾದ್ಯಂತ ಪರ್ಯಾಯ ಮೂಲಗಳಿಗಾಗಿ ಹುಡುಕುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಾಯುಶಕ್ತಿ, ಸೌರಶಕ್ತಿ ಹಾಗೂ ಜಲವಿದ್ಯುತ್ ಯೋಜನೆಗಳಂಥ ನವೀಕರಿಸಬಹುದಾದ ಶಕ್ತಿಮೂಲಗಳಿಗೆ ಹೆಚ್ಚಿನ ಆದ್ಯತೆ ಬಂದಿದೆ. ಭಾರೀ ಜಲವಿದ್ಯುತ್ ಯೋಜನೆಗಳಿಂದ ವ್ಯಾಪಕ ಪರಿಸರನಾಶ ಸಂಭವಿಸುವುದನ್ನು ತಪ್ಪಿಸಲೆಂದು ಕಿರುವಿದ್ಯುತ್ ಯೋಜನೆಗಳು ಚಾಲ್ತಿಗೆ ಬಂದಿವೆ. ಹೀಗೆ ಇಂದು ದೇಶಾದ್ಯಂತ ನೂರಾರು ಕಿರುವಿದ್ಯುತ್ ಯೋಜನೆಗಳು ರೂಪ ತಾಳುತ್ತಿವೆ. ಕರ್ನಾಟಕದಲ್ಲೂ ಏನಿಲ್ಲವೆಂದರೂ 2-3 ಡಜನ್ ಕಿರು ವಿದ್ಯುತ್ ಯೋಜನೆಗಳು ನಿರ್ಮಾಣ ಹಂತದಲ್ಲಿವೆ. ಆದರೆ ವಿಪರ್ಯಾಸ ನೋಡಿ, ಪರಿಸರಕ್ಕೆ ಹಾನಿಯಾಗಬಾರದೆಂಬ ಕಾಳಜಿಯಿಂದಲೇ ಹುಟ್ಟಿಕೊಂಡ ಈ ಯೋಜನೆಗಳು ವ್ಯಾಪಕ ಪರಿಸರ ಹಾನಿಯನ್ನುಂಟುಮಾಡುತ್ತಿದ್ದು ರಾಜ್ಯಾದ್ಯಂತ ಹೊಸ ವಿವಾದವೊಂದನ್ನು ಸೃಷ್ಟಿಸುತ್ತಿವೆ. ಕಾವೇರಿ ನದಿಪಾತ್ರದ ಯೋಜನೆಯ ಉದಾಹರಣೆ ನೋಡಿ.

ಕಳೆದ ವರ್ಷ ಕಾರ್ಯನಿಮಿತ್ತ ಮಹದೇವಪುರ ಗ್ರಾಮಕ್ಕೆ ಹೋಗಿದ್ದ ಮಂಡ್ಯದ ಯುವರೈತ ಮುಖಂಡ ಕಿರಂಗೂರು ಪಾಪು ಅವರಿಗೆ ಕಾವೇರಿ ನದಿಯನ್ನು ರಾಡಿ ಎಬ್ಬಿಸುತ್ತಿದ್ದ ಕಾಮಗಾರಿ ಕಣ್ಣಿಗೆ ಬಿತ್ತು. ಸ್ಥಳದಲ್ಲಿದ್ದ ಇಂಜಿನಿಯರನನ್ನು ಈ ಬಗ್ಗೆ ಪ್ರಶ್ನಿಸಲಾಗಿ ಆತ ಬಹಳ ಕೊಬ್ಬಿನಿಂದ "ನಾವು ಎಲ್ಲಾ ಕಡೆ ಸರಿ ಮಾಡಿಕೊಂಡಿದ್ದೀವಿ, ನಮ್ಮನ್ನು ಜಗ್ಗಿಸಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ" ಎಂದ. ಕಾರ್ಯಪ್ರವೃತ್ತರಾದ ಪಾಪು ತಾಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ ಎಲ್ಲಾ ಕಡೆ ತಿರುಗಿ ಈ ಯೋಜನೆಗೆ ಅನುಮತಿ ನೀಡಿದ್ದು ಹೇಗೆ ಎಂಬುದನ್ನು ತಿಳಿಯಲು ಪ್ರಯತ್ನಿಸಿದರು. ಅಧಿಕಾರಿಗಳು ನೀಡಿದ ಉತ್ತರ ಮತ್ತಷ್ಟು ಕುತೂಹಲಕಾರಿಯಾಗಿತ್ತು. ಅಲ್ಲಿ ಒಂದು ಕಿರು ವಿದ್ಯುತ್ ಯೋಜನೆ ಬರಲಿದೆ ಎಂಬುದನ್ನು ಬಿಟ್ಟರೆ ಯಾರಿಗೂ ಹೆಚ್ಚಿನ ಮಾಹಿತಿ ಇರಲಿಲ್ಲ. ಮೇಲಿನ ಆದೇಶದ ಪ್ರಕಾರ ಎಲ್ಲಾ ನಡೆಯುತ್ತಿದೆ ಎಂಬುದು ಅವರ ಉತ್ತರ. ಹಟ ಬಿಡದ ಪಾಪು ಮಾಹಿತಿ ಹಕ್ಕಿಗೆ ಮೊರೆ ಹೋಗಿ ಸದರಿ ಯೋಜನೆಗೆ ಸಂಬಂಧಪಟ್ಟ ಹಲವಾರು ದಾಖಲಾತಿಗಳನ್ನು ಪಡೆದುಕೊಂಡಿದ್ದಾರೆ. ಅ[...] ಮೂಲಕ ಈ ಯೋಜನೆಯ ಅಕ್ರಮಗಳು ಬೆಳಕಿಗೆ ಬಂದಿವ[...]

2007ರಲ್ಲಿ ಮೈತ್ರಿ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಗೆ 2 ಮೆಗಾವ್ಯಾಟ್ ಕರೆಂಟು ಉತ್ಪಾದಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಈ ಕಂಪನಿಯವರು ಏನೆಲ್ಲಾ ಲಾಬಿ ಮಾಡಿ ಅದನ್ನು 6 ಮೆಗಾವ್ಯಾಟ್‌[...] ಏರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಆದರೆ ಸ್ಥಳೀಯ ಶಾಸಕರನ್ನಾಗಲಿ ಅಥವಾ ವಿವಿಧ ಇಲಾಖೆಯ ಅಧಿಕಾರಿಗಳನ್ನಾಗಲಿ ಒಲಿಸಿಕೊಳ್ಳುವುದು ಅವರಿಂದ ಸಾಧ್ಯವಾಗಲಿ[...] ಇಲ್ಲ. ಹೀಗಾಗಿ 2009ರಲ್ಲೇ ಪೂರ್ಣಗೊಳ್ಳಬೇಕಿದ್ದ ಯೋಜನೆ ನೆನೆಗುದಿಗೆ ಬಿತ್ತು.

ಆ ನಂತರ ಈ ಯೋಜನೆಗೆ ಎಂಟ್ರಿ ಕೊಟ್ಟದ್ದು ಸೋಹಮ್ ರಿನ್ಯೂಬಲ್ ಎನರ್ಜಿ ಪ್ರೈ.ಲಿ ಕಂಪನಿ. ಮಂಗಳೂರು ಮೂಲದ ಸದಾನಂದ ಶೆಟ್ಟಿ ಈ ಕಂಪನಿಯ ಛೇರ್ಮನ್. ಆತ ಮಾಮೂಲಿ ವ್ಯಕ್ತಿಯಲ್ಲ, ವಿಜಯಾ ಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದವರು. ಅಷ್ಟು ಮಾತ್ರವಲ್ಲ ಅಂಥ ಆತ್ಯುನ್ನತ ಹುದ್ದೆಯಲ್ಲಿದ್ದಾಗ ನಾನಾ ಅವ್ಯವಹಾರಗಳಲ್ಲಿ ತೊಡಗಿದ್ದರೆಂಬ ಆರೋಪವನ್ನು ಹೊತ್ತವರು. ಈತ ಸರ್ಕಾರಿ ವಲಯದಲ್ಲಿ ತುಂಬಾ ಪ್ರಭಾವಶಾಲಿ ವ್ಯಕ್ತಿ. ಈತನ ಮಕ್ಕಳಾದ ಸಂಜಿತ್ ಶೆಟ್ಟಿ ಈ ಕಂಪನಿಯ ಎಂಡಿ ಆಗಿದ್ದರೆ, ಮತ್ತೊಬ್ಬ ಮಗ ಸುಚೇಂದ್ರ ಇದರ ಡೈರೆಕ್ಟರ್!

ಈ ಸೋಹಮ್ ಕಂಪನಿ ಕರ್ನಾಟಕದಲ್ಲಿ ಸುಮಾರು 7-8 ಕಡೆಗಳಲ್ಲಿ ಇಂಥದೇ ಯೋಜನೆಗಳನ್ನು ಏಕಕಾಲದಲ್ಲಿ ಕೈಗೊಂಡಿದೆ. ತಮ್ಮ ಕಾರ್ಯವ್ಯಾಪ್ತಿಯನ್ನು ನೆರೆಯ ರಾಜ್ಯಗಳಿಗೂ ವಿಸ್ತರಿಸಲು ಹೊರಟಿದ್ದಾರೆ. ಇಂಥಾ ಸೋಹಮ್ ಕಂಪನಿ ರಂಗಪ್ರವೇಶ ಮಾಡಿದ ನಂತರ ಈ ಯೋಜನೆಯ ಜಾರಿಗೆ ಸಂಬಂಧಿಸಿ ನಾನಾ ಅಕ್ರಮಗಳ ಸರಮಾಲೆಯೇ ಶುರುವಾಯಿತು. ನದಿಯ ಮಧ್ಯ[...] ಕಾನೂನುಬಾಹಿರವಾಗಿ ಭಾರೀ ಸ್ಫೋಟಕಗಳನ್ನು ಬಳ[...] ನದಿಯ ದಿಕ್ಕನ್ನೇ ತಪ್ಪಿಸುವ ಕಾಯಕದಲ್ಲಿ ತೊಡಗಿದ್ದಾರೆ. ಈ ಸ್ಫೋಟದ ಪರಿಣಾಮವಾಗಿ ಹತ್ತಿರದಲ್ಲೇ ಇರು[...]

ಶ್ರೀರಂಗಪಟ್ಟಣವು ನಾಡಿನ ಚರಿತ್ರೆಯಲ್ಲಿ ಮಹತ್ವದ ಪಾತ್ರವನ್ನು ಹೊಂದಿದೆ. ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಮೈಸೂರು ಹುಲಿ ಟಿಪ್ಪು ಸುಲ್ತಾನನಿಗೆ ಇದು ರಾಜಧಾನಿಯಾಗಿತ್ತು. ಇಂಥಾ ಕ್ಷೇತ್ರಕ್ಕೆ ರಮೇಶ್‌ಬಾಬು ಬಂಡಿಸಿದ್ದೇಗೌಡ ಎಂಬ ನಾಲಾಯಕ್ ಮನುಷ್ಯ ಶಾಸಕನಾಗಿದ್ದು ಮಾತ್ರ ಈ ನಾಡಿನ ದುರಂತಗಳಲ್ಲೊಂದು. ಜೆಡಿಎಸ್ ಪಕ್ಷದಿಂದ ಮಣ್ಣಿನ ಮಕ್ಕಳ ಹೆಸರಿನಲ್ಲಿ ಚುನಾವಣೆಗೆ ನಿಂತಿದ್ದ ಈತನನ್ನು ಅವರ ತಂದೆಯ ಮೇಲಿನ ವಿಶ್ವಾಸಕ್ಕಾಗಿ ಕ್ಷೇತ್ರದ ಜನ ಗೆಲ್ಲಿಸಿದ್ದರು.

ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ರೆಬಲ್ ಸ್ಟಾರ್ ಅಂಬರೀಷ್‌ರನ್ನು ಸೋಲಿಸಿ ಈ ಆಸಾಮಿಯನ್ನು ವಿಧಾನಸಭೆಗೆ ಕಳಿಸಿದ ಜನ ಈಗ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಿದ್ದಾರೆ.

ಶಾಸಕನ ಕರ್ಮಕಾಂಡ

ಕ್ಷೇತ್ರದ ಮತದಾರರ ದುಃಖದುಮ್ಮಾನಗಳಿಗೆ ಸ್ಪಂದಿಸಲು ಈತನಿಗೆ ಪುರುಸೊತ್ತೇ ಸಿಗುತ್ತಿಲ್ಲ. ಯಾಕೆಂದರೆ ಅಕ್ರಮ ದಂಧೆಗಳನ್ನು ತಡೆಯಬೇಕಾಗಿದ್ದ ಶಾಸಕನೇ ಅವುಗಳಿಗೆ ನಾಯಕತ್ವ ವಹಿಸಿಕೊಂಡು ಬಿಟ್ಟಿದ್ದಾನೆ. ಕನಕಪುರದ ಅಕ್ರಮ ಗ್ರಾನೈಟ್ ದಂಧೆಗೆ ಡಿಕೇಶಿ ದೊರೆಯಾಗಿರುವಂತೆ ಶ್ರೀರಂಗಪಟ್ಟಣದ ಅಕ್ರಮ ಗ್ರಾನೈಟ್ ದಂಧೆಗೆ ರಮೇಶ್‌ಬಾಬುನೇ ಅಧಿಪತಿ. ಅಷ್ಟು ಮಾತ್ರವಲ್ಲದೆ ಹತ್ತಾರು ಅಕ್ರಮ ಜಲ್ಲಿ ಕ್ರಷರ್‌ಗಳು, ಕ್ವಾರಿಗಳು ಇವರ ಕೃಪಾಕಟಾಕ್ಷದಲ್ಲೇ ನಡೆಯುತ್ತಿವೆ.


ಇಷ್ಟೆಲ್ಲಾ ಸಾಮರ್ಥ್ಯವಿದ್ದುಕೊಂಡು ರಿಯಲ್ ಎಸ್ಟೇಟ್ ದಂಧೆಗೆ ಇಳಿಯದೇ ಇದ್ದರೆ ಹೇಗೆ? ಹಾಗೆ ತಮ್ಮ ಬಂಧು ಮಿತ್ರ ಮೂಲಕ ರಿಯಲ್ ಎಸ್ಟೇಟ್‌ನಲ್ಲೂ ಈ ಶಾಸಕ ತೊಡಗಿಸಿಕೊಂಡಿದ್ದಾನೆ. ಹಾಗೆ ಮುಂದುವರೆದು ಪರಿಶಿಷ್ಟರ ಜಮೀನಿಗೂ ಕೈಹಾಕಿದ್ದಾನೆ. ಮೈಸೂರು ಬಳಿಯ ರಮ್ಮನಹಳ್ಳಿಯಲ್ಲಿ ಪರಿಶಿಷ್ಟ ಜಾತಿಯ ನಂಜಮ್ಮ ಎಂಬುವವರಿಗೆ ಸರ್ಕಾರಿ ಗೋಮಾಳದಲ್ಲಿ ಮಂಜೂರಾಗಿದ್ದ ಭೂಮಿಯನ್ನು ಅಗ್ಗದ ಬೆಲೆಗೆ ತನ್ನ ಹೆಂಡತಿ ಸುಮತಿ ಹೆಸರಿಗೆ ಲಪಟಾಯಿಸಿದ್ದು ಇತ್ತೀಚೆಗೆ ಬೆಳಕಿಗೆ ಬಂತು. ಅದೂ ಸಹ ಕಾನೂನುಬಾಹಿರವಾಗಿ!

ಊರೆಲ್ಲಾ ಅಕ್ರಮ ಸೈಟು ಮಾಡುತ್ತಿರುವಾಗ ತಾನು ಹಿಂದೆ ಬೀಳುವುದು ತುಂಬಾ ತಪ್ಪು ಎಂದು ತೀರ್ಮಾನಿಸಿ ರಮೇಶ್‌ಬಾಬು ಕಾರ್ಯಪ್ರವೃತ್ತನಾಗಿಬಿಟ್ಟ. ಮೈಸೂರಿನ ಪ್ರತಿಷ್ಠಿತ ಬಡಾವಣೆ ವಿಜಯನಗರದಲ್ಲಿ ತನ್ನ ಪತ್ನಿ ಸುಮತಿ ಹೆಸರಿನಲ್ಲಿ ಹಾಗೂ ಅರಕೆರೆ ಬಡಾವಣೆಯಲ್ಲಿ ತಾಯಿ ವಿಜಯಲಕ್ಷ್ಮಿ ಹೆಸರಿನಲ್ಲಿ ಮನೆಗಳಿದ್ದರೂ ತನಗೆ ಮನೆ ಮಠ ಏನೂ ಗತಿಯಿಲ್ಲವೆಂಬ ನಕಲಿ ಡಿಕ್ಲರೇಷನ್ ಕೊಟ್ಟು ಕಾನೂನುಬಾಹಿರವಾಗಿ ಜಿ ಕೆಟಗರಿ ಸೈಟು ಪಡೆದುಕೊಂಡಿದ್ದಾನೆ.

ದಕ್ಷಿಣೆ ಪಾವತಿಯಾಗದ ಹೊರತು ಇಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಅದಕ್ಕೇ ಈ ಕ್ಷೇತ್ರದಲ್ಲಿ ಒಂದೇ ಕಾಮಗಾರಿಗೆ 3-4 ಬಾರಿ ಗುದ್ದಲಿಪೂಜೆ ಮಾಮೂಲಾಗಿಬಿಟ್ಟಿದೆ. ತನ್ನ ಅಕ್ರಮಗಳಿಗೆ ಎದುರಾದವರಿಗೆ ನಾನಾ ಕಿರುಕುಳ ನೀಡಿ, ಸುಳ್ಳು ಕೇಸುಗಳಲ್ಲಿ ಸಿಲುಕಿಸುವುದರಲ್ಲಿ ಈತ ಎತ್ತಿದಕೈ. ಇಷ್ಟೆಲ್ಲಾ ಪ್ರತಾಪಗಳನ್ನು ಮೆರೆಯುತ್ತಿರುವ ಶಾಸಕ ಮತದಾರರನ್ನು ಓಲೈಸಲು ಚೀಪ್‌ರೇಟ್ ತಂತ್ರವೊಂದನ್ನು ಅನುಸರಿಸುತ್ತಿದ್ದಾನೆ. ತನ್ನ ತಾಯಿಯ ಹುಟ್ಟುಹಬ್ಬ, ತನ್ನ ಹುಟ್ಟುಹಬ್ಬ ಇತ್ಯಾದಿ ನೆಪದಲ್ಲಿ ಜನರಿಗೆ ಭರ್ಜರಿ ಬಾಡೂಟ ಹಾಕಿಸುವುದು, ಸೀರೆ-ಪಂಚೆ-ಅಕ್ಕಿ ಹಂಚುವುದು ಈತನ ಕೀಳುದರ್ಜೆಯ ಟ್ರಿಕ್ಸು! ಇಂಥಾ ಕೀಳುಮಟ್ಟದ ರಾಜಕೀಯದಲ್ಲಿ ತೊಡಗಿರುವ ಈತನಿಗೆ ಜ್ಞಾನೋದಯವಾಗುವ ಸಾಧ್ಯತೆ ಇದೆಯೆ? ಹೀಗೆ ಅಕ್ರಮಗಳಲ್ಲಿ ಮುಳುಗಿ ತೇಲುತ್ತಿರುವ ಈತ ಸೋಹಮ್ ಕಂಪನಿಯ ಅಕ್ರಮಗಳನ್ನು ತಡೆಗಟ್ಟುತ್ತಾನೆಯೇ?

...ದೇವಪುರ ಸೇತುವೆ ಬರುತು ಬಟ್ಟದೆ. ಇದಕ್ಕಿಂತ ...ಲಾಗಿ ನದಿಯ ಮಧ್ಯದಲ್ಲೇ ಇದ್ದ ಸುಂದರ ದ್ವೀಪ ...ಶಗೊಂಡಿದೆ. ಅಂತಾರಾಷ್ಟ್ರೀಯ ಖ್ಯಾತಿ ಹೊಂದಿರುವ ...ನತಿಟ್ಟು ಪಕ್ಷಿಧಾಮದ ಮಗ್ಗುಲಲ್ಲೇ ಈ ಸ್ಫೋಟ ...ಯುತ್ತಿರುವುದರಿಂದ ಸದಾ ಪಕ್ಷಿಗಳ ಕಲರವದಿಂದ ...ದಿರುತ್ತಿದ್ದ ಪ್ರದೇಶ ಈಗ ಬಿಕೋ ಎನ್ನುತ್ತಿದೆ. ...ರಿಗೊಂಡ ಪಕ್ಷಿಗಳು ದಿಕ್ಕಾಪಾಲಾಗಿವೆ.

...ಈ ಕಂಪನಿಯ ಮಂದಿಗೆ ಹೇಳೋರು ...ಕೇಳೋರು ಯಾರೂ ಇಲ್ಲ. ...ೇರಿ ನದಿಯ ಅರ್ಧ ...ಗವನ್ನು ಅನಾಮತ್ತಾಗಿ ...ಟ್ಟಹಾಕಿದ್ದಾರೆ. ಹೀಗಾಗಿ ...ಪಾಯಿ ರೈತರ ...ಜಮೀನುಗಳಿಗೆ ನೀರು ...ಸ್ತುತ್ತಿದೆ. ಸ್ಫೋಟಕ ...ತದಿಂದ ಎದ್ದೇಳುವ ...ಳಿನಿಂದಾಗಿ ಅದರ ...ಪಾಸಿನಲ್ಲಿರುವ ಬೆಳೆಗಳು ...ವಾಗುತ್ತಿವೆ.



...ಇಷ್ಟೂ ಸಾಲದೆಂಬಂತೆ ಈ ಸೋಹಮ್ ಕಂಪನಿ ...ವರು ನದಿಯ ದಂಡೆಯಲ್ಲಿದ್ದ ಕೋಟ್ಯಾಂತರ ...ಬಾಳುವ ಕಲ್ಲುಗಳನ್ನು ಹೊಡೆದು ಪರ್ವತದಂತೆ ರಾಶಿ ...ಕೊಂಡಿದ್ದಾರೆ. ನದಿಯ ನಡುವಿನಿಂದಲೆ ಅಕ್ರಮವಾಗಿ ...ಳು ತೆಗೆದು ರಾಶಿಹಾಕಿಕೊಂಡಿದ್ದಾರೆ. ಇಷ್ಟೆಲ್ಲಾ ...ಹುತಗಳು ನಡೆಯುತ್ತಿದ್ದರೂ ಜಿಲ್ಲಾಡಳಿತ ಕಣ್ಣು ಮುಚ್ಚ...ಿದೆ. ಆದರೆ ನೆನಪಿಡಿ. ನಮ್ಮ ರೈತರು ಮನೆಕಟ್ಟಲಿಕ್ಕೊಂದು ...ಬಂಡಿ ಮರಳು ತೆಗೆದರೂ ಕೂಡಲೇ ಹಾಜರಾಗುವ ...: ಅಧಿಕಾರಿಗಳು ಸ್ಥಳದಲ್ಲೇ ಸಾವಿರಾರು ರೂಪಾಯಿ ...ಎಳೆಯುತ್ತಾರೆ. ಇದು ನಮ್ಮನ್ನಾಳುವ ಅಧಿಕಾರಿಗಳ ...

...ಆದರೆ ಕಂಪನಿ ಸರ್ಕಾರಕ್ಕೆ ಸಲ್ಲಿಸಿರುವ ಯೋಜನಾ ...ದಿಯಲ್ಲಿ ಹೇಳಿಕೊಂಡಿರುವುದೇ ಬೇರೆ. ಅಲ್ಲಿಂದ ...40 ಕಿಲೋಮೀಟರ್ ದೂರವಿರುವ ಕನಕಪುರದ ...ಯಿಂದ ಕಾನೂನು ಪೂರಕವಾಗಿ ಮರಳನ್ನು ತರುವುದಾಗಿ, ...ಮುತ್ತಲ ಕ್ರಷರ್‌ಗಳಿಂದ ಅಗತ್ಯವಿರುವ ಕಲ್ಲುಗಳನ್ನು ...ದಿಸುವುದಾಗಿ ನೆಪಮಾತ್ರಕ್ಕೆ ಹೇಳಿಕೊಂಡಿರುವ ಕಂಪನಿ ...ಟ್ಯಾಂತರ ಬೆಲೆಬಾಳುವ ಈ ಸಂಪನ್ಮೂಲಗಳನ್ನು ಪುಕ್ಕಟೆ ...ಬಾಯಿಸುತ್ತಿರುವುದಲ್ಲದೆ ಸುತ್ತಲ ಪರಿಸರವನ್ನೂ ...ಗ್ಗೆಯುತ್ತಿದೆ.



...ಇಷ್ಟೆಲ್ಲಾ ನಡೆಯುತ್ತಿದ್ದರೂ ಸ್ಥಳೀಯ ಶಾಸಕ ...ೇಶ್‌ಬಾಬು ಏನು ಮಾಡುತ್ತಿದ್ದಾನೆ? ಈ ಪ್ರಶ್ನೆಗೆ ...ರ ಹುಡುಕಲು ಯಾರೂ ಅಷ್ಟು ಕಷ್ಟಪಡಬೇಕಾಗಿಲ್ಲ. ... ಹಿಂಬಾಲಕರೊಬ್ಬರ ಮೂಲಕ ಈ ಯೋಜನೆ ...ರ್ಮಾಣದ ಗುತ್ತಿಗೆಯನ್ನು ಇದೇ ಆಸಾಮಿಯೇ ...ಡಿಕೊಂಡಿದ್ದು ಈ ಎಲ್ಲಾ ಅಕ್ರಮಗಳ ನೇರ ಹೊಣೆ ...ವಾಗಿದ್ದಾರೆ. ಆದ್ದರಿಂದಲೇ ಸ್ಥಳೀಯ ರೈತರು ಎಷ್ಟೇ ...ಭಟಿಸಿದರೂ ಕಾಮಗಾರಿ ಮಾತ್ರ ಮುಂದುವರೆದೇ ...

...ಈಗ ಹೇಳಿಕೇಳಿ ಮಂಗಳೂರು ಮೂಲದವರೇ ಆದ ...ನಂದ ಗೌಡ ಸಿಎಂ ಆದಮೇಲೆ ಈ ಸದಾನಂದ ...ಗೆ ಮತ್ತಷ್ಟು ರೆಕ್ಕೆಪುಕ್ಕ ಬಂದಂತೆ ಕಾಣುತ್ತದೆ. ಆದೇ ...ದಲ್ಲಿ ಎಲ್ಲಾ ಕಾನೂನುಗಳನ್ನು ಕಾಲಕಸ ...ಡಿಕೊಂಡುಬಿಟ್ಟಿದ್ದಾರೆ. ಕೆಲವು ಸ್ಯಾಂಪಲ್ ನೋಡಿ. ...ಮಗಳಲ್ಲಿ ಪಾಲ್ಗೊಂಡ ಅಧಿಕಾರಿಗಳು ಜೈಲು ...ತ್ತಿರುವ ವಿದ್ಯಮಾನದಿಂದ ಎಚ್ಚೆತ್ತುಕೊಂಡ ನೀರಾವರಿ ...ಖೆ ಇತ್ತೀಚೆಗೆ ಈ ಕಂಪನಿಗೆ ನೋಟಿಸ್ ಜಾರಿ ... (ತಾ.11-05-2012, ಸಂಖ್ಯೆ ಕಿರು ಜಲ ವಿದ್ಯುತ್/ ...2-13/249-50) ನೀವು "ಇಲಾಖೆಯ ಆದೇಶವನ್ನು ...ಲ್ಲಂಘಿಸುತ್ತಿದ್ದೀರೆಂದು ಕಂಡು ಬಂದಿದೆ. ವರ್ಕಿಂಗ್ ...ಯಿಂಗ್ಸ್, ಜನರಲ್ ಲೇಔಟ್ ಪ್ಲಾನ್, ಕೀಪ್ಲಾನ್‌ಗಳನ್ನು ...ಡಿಸಿಕೊಳ್ಳಬೇಕಾದದ್ದು ಅವಶ್ಯಕ.... ಮೈಸೂರಿನ ಮುಖ್ಯ ...ಯರ್‌ರವರು ತಮಗೆ ಕಾಮಗಾರಿಯನ್ನು ನಿಲ್ಲಿಸಲು ...ದ್ದರೂ ತಾವು ಇದುವರೆಗೂ ಕಾಮಗಾರಿಯನ್ನು ...ಸಿರುವುದಿಲ್ಲ, ಆದ್ದರಿಂದ ಈ ಕೂಡಲೇ ಕಾಮಗಾರಿಯನ್ನು ...ಲು ತಮಗೆ ಸೂಚಿಸಲಾಗಿದೆ" ಎಂದು ಆದೇಶಿಸಿದ್ದಾರೆ.

ಪರಿಣಾಮ? ಶೂನ್ಯ. ಕಾಮಗಾರಿ ಅಬಾಧಿತವಾಗಿ ಸಾಗಿದೆ. ಅಂದಹಾಗೆ ಈ ಇಡೀ ಯೋಜನೆ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಈ ಕಾಮಗಾರಿ ಸ್ಥಳ ಜಗತ್ಪ್ರಸಿದ್ಧವಾದ ರಂಗನತಿಟ್ಟು ಪಕ್ಷಿಧಾಮದ ವ್ಯಾಪ್ತಿಯಲ್ಲಿ ಬರುತ್ತದೆ. ಆದ್ದರಿಂದ ವನ್ಯಜೀವಿ ಹಾಗೂ ಅರಣ್ಯ ಇಲಾಖೆಯ ಪೂರ್ವಾನುಮತಿ ಕಡ್ಡಾಯ. ಅರಣ್ಯ ಇಲಾಖೆಯನ್ನು ಸಂಪರ್ಕಿಸಿದ ಹೋರಾಟಗಾರರಿಗೆ "ತಮ್ಮ ಕಚೇರಿಯಿಂದ ಯಾವುದೇ ಅನುಮತಿ ನೀಡಿರುವುದಿಲ್ಲ, ಬದಲಿಗೆ ಇದು ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಉಲ್ಲಂಘನೆಯಾಗುತ್ತದೆ ಎಂದು ಮೇಲಿನವರಿಗೆ ಶಿಫಾರಸು ಮಾಡಲಾಗಿದೆ" ಎಂದು ಲಿಖಿತ ರೂಪದ ಹಿಂಬರಹವನ್ನು ಅರಣ್ಯಾಧಿಕಾರಿಗಳು ನೀಡಿದ್ದಾರೆ. ಅನಿಲ್ ಕುಂಬ್ಳೆ ನೇತೃತ್ವದಲ್ಲಿ ಸ್ಥಳ ಪರಿಶೀಲನೆ ಮಾಡಿದ ನಿಯೋಗವು ಸಹ ಈ ಪ್ರದೇಶದಲ್ಲಿ ಇಂಥಾ ಯೋಜನೆ ಕೂಡದು ಎಂದು ವರದಿ ನೀಡಿದ್ದಾರೆ. ಇದೆಲ್ಲಾ ಸರಿ, ಆದರೆ ಕಂಪನಿಗೆ ಈ ಎಲ್ಲವನ್ನೂ ಧಿಕ್ಕರಿಸುವ ದಾರ್ಷ್ಟ್ಯ ಎಲ್ಲಿಂದ ಬಂತು?

ಮಹದೇವಪುರ ಗ್ರಾಮ ಪಂಚಾಯತಿಯು ಮೊದಲಿನಿಂದಲೂ ಯೋಜನೆಯನ್ನು ವಿರೋಧಿಸಿದೆ. ಅದರಂತೆ ರೆವಿನ್ಯೂ ಇನ್‌ಸ್ಪೆಕ್ಟರ್ ವರದಿಯನ್ನು ಆಧರಿಸಿ ತಹಸೀಲ್ದಾರ್‌ರವರು ಜಿಲ್ಲಾಧಿಕಾರಿಗೆ ವರದಿ ನೀಡಿದ್ದಾರೆ. ಬಹುಶಃ ಕಚೇರಿಯ ಕಸದಬುಟ್ಟಿಯಲ್ಲಿ ಹುಡುಕಿದರೆ ಈಗಲೂ ಸಿಗಬಹುದೇನೋ? ನಂತರ ನದಿಯಲ್ಲಿ ಸ್ಫೋಟ ಕಾರ್ಯದಿಂದ ನದಿ ನೀರು ಕಲುಷಿತಗೊಂಡು ಜನ, ಜಾನುವಾರು ಹಾಗೂ ಜಲಚರಗಳಿಗೆ ತೊಂದರೆಯಾಗುತ್ತದೆಂದು ಅನೇಕರು ಬೊಬ್ಬಿಡುತ್ತಿದ್ದರೂ ಯಾವನೇ ಅಧಿಕಾರಿ ತಲೆಕೆಡಿಸಿಕೊಂಡಿಲ್ಲ. ಕಾಮಗಾರಿ ಸ್ಥಳದಲ್ಲಿ "ಯಾವುದೇ ಸಂದರ್ಭದಲ್ಲಿ ಸ್ಫೋಟಕಗಳನ್ನು ಸಿಡಿಸುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಹತ್ತಿರ ಸುಳಿಯಬಾರದು" ಎಂದು ಎಚ್ಚರಿಸುವ ಬೋರ್ಡು ಕಾನೂನನ್ನು ಅಣಕಿಸುತ್ತಾ ಅಲ್ಲೇ ನಿಂತಿದೆ. ಈ ಬಗ್ಗೆ ಡಿಸಿ ಕಚೇರಿಯನ್ನು ಸಂಪರ್ಕಿಸಿದ ತಹಸೀಲ್ದಾರ್‌ರಿಗೆ ಸಿಕ್ಕ ಉಪದೇಶವೇನೆಂದರೆ "ಸ್ಫೋಟಕ ಬಳಕೆಗೆ ಅನುಮತಿ ನೀಡುವ ವಿಷಯ ತಹಸೀಲ್ದಾರ್ ವ್ಯಾಪ್ತಿಗೆ ಬರುವುದಿಲ್ಲ ಸುಮ್ಮನೆ ಯಾಕೆ ತಲೆಕೆಡಿಸಿಕೊಳ್ತೀರಿ" ಅಂತ.

ಇಸ್ಕಾನ್ ಸಂಸ್ಥೆಯವರು ಇದರ ಸಮೀಪವೇ ಭೂಮಿಯನ್ನು ಹೊಂದಿದ್ದು ಅಲ್ಲಿ ಗೋಶಾಲೆ ಮತ್ತು ಶ್ರೀಕೃಷ್ಣ ದೇವಾಲಯಗಳಿವೆ. ಈಗಾಗಲೇ ಅವರು ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದಾರೆ. ಆದರೆ ಇಸ್ಕಾನ್‌ನವರು ಹೆಚ್ಚು ವಿರೋಧ ತೋರುತ್ತಿಲ್ಲ, ಯಾಕೆಂದರೆ ಅವರೂ ಕೂಡ ಸುಮಾರು 20 ಎಕರೆಯಷ್ಟು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಸ್ಥಳೀಯ ರೈತರು ಆರೋಪಿಸುತ್ತಾರೆ.

ಇಲ್ಲಿ ಮತ್ತೊಂದು ಆಸಕ್ತಿಕರ ವಿಷಯವಿದೆ. ಅದೇನೆಂದರೆ ಅಕ್ರಮವಾಗಿ ತಲೆ ಎತ್ತುತ್ತಿರುವ ಇಂಥಾ ಯೋಜನೆಯಿಂದ ಖಾಸಗಿಯವರು ಎಷ್ಟೇ ಲಾಭ ಮಾಡಿದರೂ ಅವರು ನಯಾಪೈಸೆ ಅಬ್ಕಾರಿ ತೆರಿಗೆಯನ್ನು ಸರ್ಕಾರಕ್ಕೆ ಕಟ್ಟುವಂತಿಲ್ಲ, ಜೊತೆಗೆ ಕಡಿಮೆ ಬಡ್ಡಿಯ ಸಾಲ, ಮೂರು ವರ್ಷದ ಮಾರಿಟೋರಿಯಮ್ ಅವಧಿ, ಅಸಂಪ್ರದಾಯಿಕ ಇಂಧನ ಇಲಾಖೆಯಿಂದ ಸಬ್ಸಿಡಿ ಮತ್ತು ಸರ್ಕಾರಿ ಭೂಮಿಯ ಕೊಡುಗೆ. ಎಲ್ಲಕ್ಕಿಂತ ಮಿಗಿಲಾಗಿ ಕಾರ್ಬನ್ ಮಾಲಿನ್ಯರಹಿತ ವಿದ್ಯುತ್ ಉತ್ಪಾದನೆ ಮಾಡಿದ ಕಾರಣಕ್ಕೆ 'ಕಾರ್ಬನ್ ಕ್ರೆಡಿಟ್'ನಿಂದ ಬರುವ ಮೊತ್ತ ವಾರ್ಷಿಕ ಎರಡು ಕೋಟಿಗೂ ಹೆಚ್ಚು..... ಸರ್ಕಾರದ ದುಡ್ಡಲ್ಲಿ ಶೆಟ್ಟಿಯ ಜಾತ್ರೆ ಮಾಡಲಿಕ್ಕೆ ಇನ್ನೇನು ಬೇಕು ಹೇಳಿ?

ಈ ಸದಾನಂದ ಶೆಟ್ಟಿಯು ಕೊಟ್ಟ ಸ್ಥಳೀಯ ಜನಪ್ರತಿನಿಧಿಗಳಿಂದ ಹಿಡಿದು ಮಂತ್ರಿಗಳವರೆಗೆ ಎಲ್ಲರನ್ನೂ ಬುಟ್ಟಿಗೆ ಹಾಕಿಕೊಂಡಿದೆಯಂತೆ. ಅಷ್ಟೇ ಏಕೆ? ರೈತಸಂಘದ ಕೆಲವು ಪ್ರಮುಖ ಮುಖಂಡರ ಕೈಬಿಸಿ ಮಾಡಿರುವುದರಿಂದ ಯಾರೂ ಈ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ನೇರವಾಗಿ ಆರೋಪಿಸುವ ಕಿರಂಗೂರು ಪಾಪು ಅವರ ಮಾತನ್ನು ನಿರಾಕರಿಸುವ ನೈತಿಕಶಕ್ತಿ ಆ ರೈತ ನಾಯಕರಿಗೆ ಇಲ್ಲದೇ ಹೋಗಿದ್ದು ಮಾತ್ರ ದುರಂತವೇ ಸರಿ. ಕೈ ಬಾಯಿ ಶುದ್ಧವಾಗಿಟ್ಟುಕೊಂಡಿರುವ ಕಾರ್ಯಕರ್ತರೆಲ್ಲಾ ಸೇರಿ ಹಿರಿಯ ರೈತ ನಾಯಕರಾದ ಕೆ.ಬೋರಯ್ಯ, ಸುನಂದಾ ಜಯರಾಂ, ಬಿ.ಟಿ.ಮುದ್ದೇಗೌಡ ಮುಂತಾದವರ ನಾಯಕತ್ವದಲ್ಲಿ ಹೋರಾಟ ರೂಪಿಸುವ ಪ್ರಯತ್ನದಲ್ಲಿದ್ದಾರೆ. ಅವರ ಪ್ರಯತ್ನಕ್ಕೆ ಯಶಸ್ಸು ಸಿಗಲಿ.



ಹೈಕಮಾಂಡ್ ವಿರುದ್ಧ ಯಡ್ಡಿಗೆ ಜಯ

ಕೊನೆಗೂ ಯಡಿಯೂರಪ್ಪ ಮತ್ತು ಬಿಜೆಪಿಯ ಹೈಕಮಾಂಡ್ ನಡುವೆ ಒಂದು ತರಹದ ಒಪ್ಪಂದ ಏರ್ಪಟ್ಟಿದ್ದು ಯಡ್ಡಿ ಕಳೆದ ಹಲವಾರು ವಾರಗಳಿಂದ ಪಕ್ಷದ ವರಿಷ್ಠರ ವಿರುದ್ಧ ಕಾದಿದ್ದ ಯುದ್ಧಕ್ಕೆ ಈಗ ಅಲ್ಪ ವಿರಾಮವನ್ನು ಘೋಷಿಸಿದ್ದಾರೆ. ಆದರೆ ಈ ಒಪ್ಪಂದವನ್ನು ನೋಡಿದರೆ ಕರ್ನಾಟಕದ ಮಾಂಡಲೀಕ ಯಡ್ಡಿಯ ಮುಂದೆ ಬಿಜೆಪಿಯ ಕೇಂದ್ರ ನಾಯಕರು ಮಂಡಿ ಊರಿ ಕೂತಿರುವಂತೆ ಕಾಣಿಸುತ್ತದೆ.

ತನ್ನದೇ ಆದ ಒಂದು ಹೊಸ ಕಚೇರಿಯನ್ನು ತೆರೆದು, ಅಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿಯವರ ಫೋಟೋ ಹಾಕಿದ್ದಲ್ಲದೆ ಸಾರ್ವಜನಿಕ ಸಭೆಯೊಂದರಲ್ಲಿ ಸೋನಿಯಾ ಅವರನ್ನು ಯಡ್ಡಿ ಹಾಡಿ ಹೊಗಳಿದ್ದರು. ಅಷ್ಟು ಸಾಲದೆಂಬಂತೆ ಇತ್ತೀಚೆಗೆ "ಜೆಪಿಯ ಮುಂದಿನ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ" ಎಂದು ಹೇಳುವ ಮೂಲಕ ಬಿಜೆಪಿಯ ಹಿರಿಯ ನಾಯಕ ಎಲ್.ಕೆ.ಅಡ್ವಾನಿ ವಿರುದ್ಧ ಯಡ್ಡಿ ಗುಡುಗಿದ್ದರು. ಇದೆಲ್ಲವನ್ನು ಕಂಡು ಯಡಿಯೂರಪ್ಪ ಸದ್ಯದಲ್ಲೇ ಬಿಜೆಪಿಗೆ ಗುಡ್‌ಬೈ ಹೇಳುತ್ತಾರೆ ಎಂದೂ, ಆನಂತರ ಆತ ಕಾಂಗ್ರೆಸ್ ಸೇರುತ್ತಾರೆ ಎಂದೂ, ಇಲ್ಲದಿದ್ದರೆ ತಾವೇ ಒಂದು ಹೊಸ ಪಕ್ಷ ಕಟ್ಟುತ್ತಾರೆ ಎಂದೂ ರಾಜಕೀಯ ವಲಯದಲ್ಲಿ ಚರ್ಚೆಯಾಗಿತ್ತು.

ಆದರೀಗ ಬಿಜೆಪಿ ಪಕ್ಷದ ಈ ರೆಬೆಲ್ ಸ್ಟಾರ್‌ನ ಆಕ್ರೋಶ, ಸಿಟ್ಟು ಮತ್ತು ಅಸಹನೆಯನ್ನು ದೆಹಲಿ ನಾಯಕರು ತುಂಬಾ ಜಾಣತನದಿಂದ ನಿವಾರಿಸಿದ್ದಾರೆ. ಹೀಗಾಗಿ ಯಡ್ಡಿ ಈಗ ಶಾಂತಿಯಿಂದ ವರ್ತಿಸುತ್ತಿದ್ದಾರೆ. ಅಂದರೆ ಪಕ್ಷ ಬಿಟ್ಟು ಹೋಗುವುದಕ್ಕೂ, ದೆಹಲಿ ನಾಯಕರ ವಿರುದ್ಧದ ಬಂಡಾಯ ಸಾರುವುದಕ್ಕೂ ಯಡ್ಡಿ ಈಗ ತಾತ್ಕಾಲಿಕ ತಡೆ ನೀಡಿದ್ದಾರೆ.

ಇದಕ್ಕೆ ಮುಖ್ಯಕಾರಣ ಸದ್ಯದಲ್ಲೇ ನಡೆಯಲಿರುವ ವಿಧಾನ ಪರಿಷತ್ತಿನ ಚುನಾವಣೆಗೆ ಯಡಿಯೂರಪ್ಪ ಸೂಚಿಸಿದ್ದ ತನ್ನ ಮೂವರು ಹಿಂಬಾಲಕರಲ್ಲಿ ಇಬ್ಬರನ್ನು ಬಿಜೆಪಿ ತನ್ನ ಅಧಿಕೃತ ಅಭ್ಯರ್ಥಿಗಳೆಂದು ಪ್ರಕಟಿಸಿರುವುದು. ಹಾಗೆ ಮಾಡುವ ಮೂಲಕ ಯಡ್ಡಿಗೆ ಹೈಕಮಾಂಡ್ ಸಾಂತ್ವನದ ಮುಲಾಮು ಹಚ್ಚಿದೆ.

ಅದರಲ್ಲೂ ಜೆಡಿಎಸ್‌ಅನ್ನು ತೊರೆದು ಮೊನ್ನೆ ಮೊನ್ನೆ ಬಿಜೆಪಿಯನ್ನು ಸೇರಿದ ಪುಟ್ಟಸ್ವಾಮಿಯವರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡುವ ಮುಖಾಂತರ ಯಡಿಯೂರಪ್ಪ ತನ್ನ ಹಠವನ್ನು ಸಾಧಿಸಿ ಹೈಕಮಾಂಡ್ ವಿರುದ್ಧ ಮೊದಲ ಸುತ್ತಿನ ಗೆಲುವು ಕಂಡಿದ್ದಾರೆ.

ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣಾ ಸಂದರ್ಭದಲ್ಲಿ ಬಂಡಾಯ ಅಭ್ಯರ್ಥಿಯಾಗಿ ಇದೇ ಪುಟ್ಟಸ್ವಾಮಿ ನಾಮಪತ್ರ ಸಲ್ಲಿಸುವಂತೆ ಯಡ್ಡಿ ನೋಡಿಕೊಂಡಿದ್ದರು. ಇಂತಹ ಉದ್ಧಟತನವನ್ನು ತೋರಿದ್ದಕ್ಕೆ ಪುಟ್ಟಸ್ವಾಮಿ ವಿರುದ್ಧ ಬಿಜೆಪಿಯ ನಾಯಕರು ಶಿಸ್ತು ಕ್ರಮವನ್ನು ಖಂಡಿತಾ ತೆಗೆದುಕೊಳ್ಳುತ್ತಾರೆ ಎಂದು ಎಲ್ಲರೂ ನಿರೀಕ್ಷಿಸಿದ್ದರು. ಆದರೀಗ ನೋಡಿದರೆ ಅದೇ ಪುಟ್ಟಸ್ವಾಮಿಯನ್ನು ವಿಧಾನಪರಿಷತ್‌ಗೆ ಆಯ್ಕೆಮಾಡುವ ಮುಖಾಂತರ ಬಿಜೆಪಿಯ ಹೈಕಮಾಂಡ್ ಯಡಿಯೂರಪ್ಪನ ಮುಂದೆ ಮಂಡಿಯೂರಿದೆ.

ದೇವೇಗೌಡ ಮತ್ತು ಅವರ ಕುಟುಂಬದ ಸದಸ್ಯರನ್ನು ಯದ್ವಾತದ್ವಾ ಬೈಯುವ ಕೆಲಸ ಬಿಟ್ಟರೆ ಈ ಪುಟ್ಟಸ್ವಾಮಿ ಬಿಜೆಪಿ ಪಕ್ಷಕ್ಕಾಗಿ ಕಡಿದು ಕಟ್ಟೆಹಾಕಿದ್ದು ಏನೂ ಇಲ್ಲ. ಪುಟ್ಟಸ್ವಾಮಿಗೆ ಹೋಲಿಸಿದರೆ ಕಳೆದ ಐವತ್ತು ವರ್ಷಗಳಿಂದ ಆರೆಸ್ಸೆಸ್ಸಿನಲ್ಲಿ ಶಿಸ್ತಿನ ಸಿಪಾಯಿಗಳಂತೆ ಕೆಲಸ ಮಾಡಿರುವ ಅದೆಷ್ಟೋ ಜನರಿದ್ದಾರೆ. ಆದರೆ ಅವರೆಲ್ಲರನ್ನು ಕಡೆಗಣಿಸಿ ಆರೆಸ್ಸೆಸ್ಸಿಗಾಗಲಿ, ಬಿಜೆಪಿಗಾಗಲಿ ಪುಟ್ಟ ಸೇವೆಯನ್ನೂ ಮಾಡಿರದ ಪುಟ್ಟಸ್ವಾಮಿಗೆ ಪರಿಷತ್ ಸದಸ್ಯತ್ವವನ್ನು ನೀಡಿರುವುದು ಆಕಾಂಕ್ಷಿಗಳಲ್ಲಿ ಬೇಸರವನ್ನೂ, ಕೋಪವನ್ನೂ ಹುಟ್ಟಿಸಿದೆ. ಆದರೇನಂತೆ ಪುಟ್ಟಸ್ವಾಮಿಯ ಆಯ್ಕೆಯು ಯಡ್ಡಿಯ ಬಗ್ಗೆ ಬಿಜೆಪಿಯ ಹೈಕಮಾಂಡಿಗೆ ಅದೆಷ್ಟು ಹೆದರಿಕೆ ಇದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ.

ಪುಟ್ಟಸ್ವಾಮಿಯಂತೆ ಯಡ್ಡಿಯ ಮತ್ತೊಬ್ಬ ಹಿಂಬಾಲಕ ವೀರಯ್ಯ ಅವರನ್ನೂ ಬಿಜೆಪಿಯ ನಾಯಕರು ಮತ್ತೊಮ್ಮೆ ವಿಧಾನ ಪರಿಷತ್ತಿಗೆ ಆಯ್ಕೆಮಾಡಿದ್ದಾರೆ. ಇದು ಕೂಡ ಬಿಜೆಪಿ ಪಕ್ಷದ ಮೇಲೆ ಹಾಗೂ ಸರ್ಕಾರದ ಮೇಲೆ ಯಡ್ಡಿಗೆ ಅದೆಂತಹ ಹತೋಟಿ ಇದೆ ಎಂಬುದನ್ನೂ ಪರೋಕ್ಷವಾಗಿ ತೋರಿಸುತ್ತದೆ.

ಪುಟ್ಟಸ್ವಾಮಿ ಮತ್ತು ವೀರಯ್ಯನವರಂತೆ ವಿಧಾನ ಪರಿಷತ್ತಿಗೆ ಯಡ್ಡಿಯ ಹಿಂಬಾಲಕರ ಪಡೆಯಿಂದ ಆಯ್ಕೆಯಾಗಬೇಕಿದ್ದ ಮೂರನೇ ಅಭ್ಯರ್ಥಿ ಲಕ್ಷ್ಮಿನಾರಾಯಣ. ಆದರೆ ಅವರಿಗೆ ಮುಂದಿನ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ತುರುವೆಕೆರೆ ಕ್ಷೇತ್ರದಿಂದ ಸ್ಪರ್ಧಿಸಲು ಪಕ್ಷದ ಟಿಕೆಟ್ ನೀಡಲು ಹೈ ಕಮಾಂಡ್ ಒಪ್ಪಿದೆಯಂತೆ.

ಇದೆಲ್ಲದ ಮಧ್ಯೆ ಸದ್ಯದಲ್ಲೇ ಮುಖ್ಯಮಂತ್ರಿ ಸದಾನಂದ ಗೌಡರು ತಮ್ಮ ಸಂಪುಟವನ್ನು ವಿಸ್ತರಿಸಿದರೆ ಅದರಲ್ಲಿ ಯಡ್ಡಿಯ ಹಿಂಬಾಲಕರನ್ನು ಕನಿಷ್ಠ ನಾಲ್ವರಿಗೆ ಸಚಿವ ಸ್ಥಾನ ನೀಡಬೇಕೆಂಬ ಯಡ್ಡಿ ಷರತ್ತಿಗೂ ಹೈಕಮಾಂಡ್ ತಲೆದೂಗಿದೆ.

ಇತ್ತೀಚೆಗೆ ಇದೇ ಸದಾನಂದ ಗೌಡ ಮತ್ತು ಬಿಜೆಪಿಯ ರಾಜ್ಯಾಧ್ಯಕ್ಷ ಈಶ್ವರಪ್ಪನವರು ಶೋಭಾ ಕರಂದ್ಲಾಜೆ, ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ, ಸೋಮಣ್ಣ ಸೇರಿದಂತೆ ಯಡ್ಡಿ ಅನೇಕ ಹಿಂಬಾಲಕರು ಸರ್ಕಾರಕ್ಕೆ ಅಸಹಕಾರ ನೀಡುತ್ತಿರುವ ಹಿನ್ನೆಲೆಯಲ್ಲಿ ಅವರನ್ನೆಲ್ಲ ಸಂಪುಟದಿಂದ ಕೈಬಿಡಬೇಕೆಂದು ಇದೇ ಬಿಜೆಪಿಯ ಹೈಕಮಾಂಡಿಗೆ ಪತ್ರ ಬರೆದಿದ್ದರು. ಆದರೆ ಈಗ ಅವರೆಲ್ಲರನ್ನು ಸಂಪುಟದಲ್ಲಿ ಉಳಿಸಿಕೊಳ್ಳುವುದಲ್ಲದೆ ಇನ್ನೂ ನಾಲ್ವರಿಗೆ ಗೂಟದ ಕಾರುಗಳನ್ನು ನೀಡುವುದಕ್ಕೆ ಬಿಜೆಪಿ ನಾಯಕರು ಒಪ್ಪಿಕೊಂಡಿದ್ದಾರೆ.

ಇವೆಲ್ಲ ಬೆಳವಣಿಗೆಗಳನ್ನು ಗಮನಿಸಿದರೆ, ಬಿಜೆಪಿ ಮತ್ತು ಸರಕಾರದ ಮೇಲೆ ಯಡಿಯೂರಪ್ಪ ಮತ್ತೆ ಹತೋಟಿಯನ್ನು ಸಾಧಿಸುತ್ತಿದ್ದಾರೆ ಎಂಬುದು ಯಾರಿಗಾದರೂ ಗೊತ್ತಾಗುತ್ತದೆ. ಈ ಕಾರಣಕ್ಕೆ ಮೊನ್ನೆಯತನಕ ಬಿಜೆಪಿಯ ಕೇಂದ್ರ ನಾಯಕರ ವಿರುದ್ಧ ಮತ್ತು ರಾಜ್ಯದ ಮುಖ್ಯಮಂತ್ರಿ ಸದಾನಂದ ಗೌಡರ ವಿರುದ್ಧ ಬಂಡಾಯವೆದ್ದಿದ್ದ ಯಡ್ಡಿ ಈಗ ತಮ್ಮ ಮಾತಿನ ಶೈಲಿಯನ್ನು ಬದಲಾಯಿಸಿದ್ದಾರೆ. ಮೊನ್ನೆಯ ತನಕ ಸದಾನಂದ ಗೌಡರ ಜೊತೆ ಒಂದೇ ವೇದಿಕೆಯನ್ನು ಏರಲೂ ಸಿದ್ಧವಿಲ್ಲದಿದ್ದ ಯಡ್ಡಿ ಕಳೆದ ಒಂದೆರಡು ದಿನಗಳಿಂದ ಸದಾನಂದ ಗೌಡ ಮತ್ತು ಈಶ್ವರಪ್ಪ ಜೊತೆ ದೋಸ್ತಿಯಂತೆ ಹರಟೆ ಹೊಡೆಯಲಾರಂಭಿಸಿದ್ದಾರೆ.

ಯಡಿಯೂರಪ್ಪನಿಗೆ ತಾನು ಏನೇ ಮಾಡಿದರೂ, ಎಷ್ಟೇ ಚೀರಾಡಿದರೂ ತಾನು ಮತ್ತೆ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸುವುದು ಸಾಧ್ಯವಿಲ್ಲ ಎಂದು ಗೊತ್ತಾಗಿದೆ. ಆದರೆ ತಾನು ಅಧಿಕಾರಕ್ಕಾಗಿ ಪ್ರತಿಭಟಿಸದಿದ್ದರೆ, ಪಕ್ಷದ ನಾಯಕರ ವಿರುದ್ಧ ದಿನಕ್ಕೊಂದು ಹೇಳಿಕೆ ನೀಡಿ ಅರ್ಭಟಿಸದಿದ್ದರೆ, ತನ್ನ ಬೆನ್ನಿಗಿರುವ ಹಿಂಬಾಲಕರೆಲ್ಲ ಜಾಗ ಖಾಲಿ ಮಾಡಿ ಈಶ್ವರಪ್ಪ-ಸದಾನಂದಗೌಡರ ಪಾಳಯಕ್ಕೆ ಹಾರುತ್ತಾರೆ ಎಂಬುದು ಕೂಡ ಯಡ್ಡಿಗೆ ಗೊತ್ತಿದೆ. ಈ ಕಾರಣಕ್ಕಾಗಿಯೇ ತನ್ನ ಹಿಂಬಾಲಕರನ್ನು ತನ್ನ ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಯಡಿಯೂರಪ್ಪ ಯಾವಾಗಲೂ ಹೈಕಮಾಂಡ್ ವಿರುದ್ಧ ಗರಂ ಆಗುತ್ತಿದ್ದರು.

▶8

ಯಡ್ಡಿಗೆ ಜಯ

▶7

ಹಾಗಲ್ಲ ಮಾಡಿದ್ದರಿಂದಲೇ ತನ್ನ ಇಬ್ಬರು ಬೆಂಬಲಿಗರು ವಿಧಾನ ಪರಿಷತ್ತಿಗೆ ಏರುವುದನ್ನೂ, ಮತ್ತೊಬ್ಬರಿಗೆ ಪಕ್ಷದ ಟಿಕೆಟ್‌ಅನ್ನೂ ಮತ್ತು ಇನ್ನೂ ನಾಲ್ವರಿಗೆ ಸಚಿವ ಸ್ಥಾನವನ್ನೂ ಗಟ್ಟಿ ಮಾಡಿಕೊಳ್ಳಲು ಯಡ್ಡಿಗೆ ಸಾಧ್ಯವಾಗಿದೆ.

ಹಲವಾರು ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವ ಯಡ್ಡಿ ಸಿಬಿಐ ತನಿಖೆಗೆ ಒಳಗಾದ ತಕ್ಷಣ ದೆಹಲಿ ನಾಯಕರು ತನ್ನನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಾರೆ, ಆ ಮೂಲಕ ಪಕ್ಷದಲ್ಲಿ ತಾನು ಮೂಲೆಗುಂಪಾಗುತ್ತೇನೆ ಎಂಬ ಭಯ ಯಡ್ಡಿಯನ್ನು ಆವರಿಸಿತ್ತು, ಅಷ್ಟೇ ಅಲ್ಲ ತನ್ನ ವಿರುದ್ಧ ತನ್ನ ಸಾಂಪ್ರದಾಯಿಕ ವೈರಿ ಅನಂತ್‌ಕುಮಾರ್ ದೆಹಲಿಯಲ್ಲಿ ತಂತ್ರ ಹೆಣೆದಿರುವುದು ಕೂಡ ಯಡ್ಡಿಯ ಗಮನಕ್ಕೆ ಬಂದಿತ್ತು, ಅನಂತ್‌ಕುಮಾರರ ಹುನ್ನಾರವನ್ನು ವಿಫಲಗೊಳಿಸಬೇಕಾದರೆ ತಾನು ಮೊದಲು ದೆಹಲಿ ನಾಯಕರ ವಿಶ್ವಾಸವನ್ನು ಮತ್ತೆ ಗಳಿಸಬೇಕೆಂಬುದು ಯಡ್ಡಿಯ ಮೂಲತಂತ್ರವಾಗಿತ್ತು, ಆ ಕಾರಣಕ್ಕೇ ಯಡ್ಡಿ ಯಾವಾಗಲು ಅನಂತ್‌ಕುಮಾರ್ ಅವರ ಗಾಡ್‌ಫಾದರ್ ಎನಿಸಿಕೊಂಡಿರುವ ಅಡ್ವಾನಿಯವರನ್ನು ಟೀಕಿಸುತ್ತಿದ್ದರು.

ಬಿಜೆಪಿಯ ಹೈಕಮಾಂಡಿಗೆ ಯಡ್ಡಿ ಮಾತ್ರವಲ್ಲ, ಮುಂದಿನ ಚುನಾವಣೆಯಲ್ಲಿ ಗೆಲುವು ಸಾಧಿಸಲು ಯಡ್ಡಿಯನ್ನು ಬೆಂಬಲಿಸುತ್ತಿರುವ ರಾಜ್ಯದ ಲಿಂಗಾಯತ ಮತದಾರರು ಎಷ್ಟು ಮುಖ್ಯ ಎಂದು ಅರಿವಾಗಿದೆ. ಹೀಗಾಗಿ ಯಾವುದೇ ಕಾರಣಕ್ಕೂ ಯಡಿಯೂರಪ್ಪ ಪಕ್ಷ ಬಿಟ್ಟು ಹೋಗದಂತೆ ಸದ್ಯಕ್ಕೆ ಎಚ್ಚರಿಕೆ ವಹಿಸುತ್ತಿದ್ದಾರೆ. ಒಂದು ವೇಳೆ ಯಡ್ಡಿ ಪಕ್ಷಕ್ಕೆ ಗುಡ್‌ಬೈ ಹೇಳಿದರೆ ರಾಜಕೀಯವಾಗಿ ಪ್ರಬಲವಾಗಿರುವ ಲಿಂಗಾಯತ ಸಮುದಾಯದ ಓಟ್ ಬ್ಯಾಂಕ್‌ನ್ನು ಬಿಜೆಪಿ ಕಳೆದುಕೊಳ್ಳಬೇಕಾಗುತ್ತದೆ ಎಂಬ ರಾಜಕೀಯ ಪ್ರಜ್ಞೆ ಕೂಡ ದೆಹಲಿ ನಾಯಕರಿಗೆ ಇದೆ. ಹೀಗಾಗಿ ಒಂದು ಕಡೆ ಕ್ಲೀನ್ ಇಮೇಜ್ ಹೊಂದಿರುವ ಹಾಲಿ ಮುಖ್ಯಮಂತ್ರಿ, ಸದಾನಂದ ಗೌಡ ಎಷ್ಟು ಮುಖ್ಯವೋ, ಹಾಗೆಯೇ ಮತ್ತೊಂದೆಡೆ ಭ್ರಷ್ಟಾಚಾರ ಆರೋಪಗಳ ಸರಮಾಲೆಯನ್ನೇ ಹೊಂದಿರುವ ಯಡಿಯೂರಪ್ಪ ಕೂಡ ಬಿಜೆಪಿಗೆ ಅನಿವಾರ್ಯ ಎಂಬ ತೀರ್ಮಾನಕ್ಕೆ ಬಿಜೆಪಿ ವರಿಷ್ಠರು ಬಂದಿದ್ದಾರೆ. ಈ ಕಾರಣದಿಂದಲೇ ಯಡಿಯೂರಪ್ಪನವರ ಮುಖ್ಯಮಂತ್ರಿ ಬದಲಾವಣೆಯ ಬೇಡಿಕೆಯನ್ನು ಹೊರತುಪಡಿಸಿ ಅವರ ಬಹುತೇಕ ರಾಜಕೀಯ ಬೇಡಿಕೆಗಳಿಗೆ ದೆಹಲಿ ನಾಯಕರು ತಥಾಸ್ತು ಎಂದಿದ್ದಾರೆ.

ಯಡಿಯೂರಪ್ಪನ ವಿರುದ್ಧ ಸಿಬಿಐ ತನಿಖೆ ಆರಂಭಗೊಂಡಾಗ ಯಾವುದೇ ಹೇಳಿಕೆ ನೀಡದೆ ಮೌನವಹಿಸಿದ್ದ ಬಿಜೆಪಿಯ ಹೈಕಮಾಂಡ್ ಈಗ ತನ್ನ ಬಿಗಿಯಾದ ನಿಲುವನ್ನು ಸ್ವಲ್ಪ ಸಡಲಿಸಿದೆ. ಅದಕ್ಕೆ ಸಾಕ್ಷಿ ಎಂಬಂತೆ ಯಡಿಯೂರಪ್ಪನವರ ಮೊಮ್ಮಗಳ ಮದುವೆಗೆ ದೆಹಲಿ ನಾಯಕರೆಲ್ಲಾ ಬೆಂಗಳೂರಿಗೆ ಆಗಮಿಸಿದ್ದಾರೆ. ಇದೆಲ್ಲವೂ ಒಂದು ರೀತಿಯಲ್ಲಿ ಕಳೆದ ಹಲವಾರು ತಿಂಗಳುಗಳಲ್ಲಿ ಪಕ್ಷದಿಂದ ನಿರ್ಲಕ್ಷಕ್ಕೆ ಒಳಗಾಗಿದ್ದ ಯಡಿಯೂರಪ್ಪನವರಿಗೆ ನೈತಿಕ ಬಲವನ್ನು ತಂದು ಕೊಟ್ಟಿದೆ.

ಇತ್ತೀಚಿನ ತನಕ ಎರಡೂ ಕಡೆಯವರು 'ನಾ ಬಿಡೆ, ನೀ ಕೊಡೆ' ಎಂಬಂತೆ ವರ್ತಿಸುತ್ತಿದ್ದರು. ಆದರೀಗ "ನಾ ಕೊಡುತ್ತೇನೆ, ನೀನು ಬಿಡಬೇಡ" ಎಂಬ ಸ್ಥಿತಿಗೆ ಬಿಜೆಪಿಯ ಹೈಕಮಾಂಡ್ ಮತ್ತು ಯಡ್ಡಿ ನಡುವೆ ಒಪ್ಪಂದವಾಗಿದೆ. ಅಂದರೆ ದೆಹಲಿ ನಾಯಕರ ವಿರುದ್ಧ ಕರ್ನಾಟಕದ ಯಡಿಯೂರಪ್ಪ ಮೊದಲ ಸುತ್ತಿನಲ್ಲಿ ಜಯಗಳಿಸಿದ್ದಾರೆ....

ಈ ತಾತ್ಕಾಲಿಕ ಕದನವಿರಾಮ ಎಷ್ಟು ದಿನ ಉಳಿಯುತ್ತದೋ..ಗೊತ್ತಿಲ್ಲ...

• ಶೆಣೈ

ವಸತಿಶಾಲಾ ಶಿಕ್ಷಕರ ಸಂಕಟ

ಕೋರ್ಟಿನ ಆದೇಶಕ್ಕೂ ಕಿಮ್ಮತ್ತಿಲ್ಲ!

ರಾಜ್ಯ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಸುಮಾರು ಆರೇಳು ವರ್ಷಗಳಿಂದ ದುಡಿದ ಹೊರಗುತ್ತಿಗೆ ಶಿಕ್ಷಕರು ಸರ್ಕಾರದ ಇಬ್ಬಂದಿನೀತಿಯಿಂದಾಗಿ ಅತಂತ್ರ ಸ್ಥಿತಿ ತಲುಪಿದ್ದಾರೆ. ಕಳೆದ ಹತ್ತು ವರ್ಷಗಳ ಅಂತರದಲ್ಲಿ ಈ ಶಾಲೆಗಳ ಉಸ್ತುವಾರಿಯಲ್ಲಾದ ಬದಲಾವಣೆಯಿಂದ ಪ್ರಾರಂಭವಾದ ಈ ಗೊಂದಲ ಈಗ ಏನಿಲ್ಲವೆಂದರೂ ಐದು ಸಾವಿರ ಶಿಕ್ಷಕರು ಮತ್ತವರ ಕುಟುಂಬಗಳನ್ನು ಸಂಪೂರ್ಣವಾಗಿ ಮುಳುಗಿಸುವ ಹಂತಕ್ಕೆ ಬಂದಿದೆ. ಕಷ್ಟ ಆಲಿಸಬೇಕಾದ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿ ಎ.ನಾರಾಯಣಸ್ವಾಮಿ ತನಗೂ ಇದಕ್ಕೂ ಸಂಬಂಧವೇ ಇಲ್ಲವೆಂಬಂತೆ ವರ್ತಿಸುತ್ತಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

2001ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ರಾಜ್ಯ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘವು (ಕ್ರೈಸ್) ಈ ಶಾಲೆಗಳ ಉಸ್ತುವಾರಿ ವಹಿಸಿಕೊಂಡಿದ್ದಲ್ಲದೆ ಅಗತ್ಯವಿರುವ ಶಿಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಮುಂದಾಗಿತ್ತು, ಆದರೆ 2005ರಲ್ಲಿ ಕೋರ್ಟ್‌ನ ಆದೇಶದಂತೆ ಈ ಕ್ರೈಸ್ ಸಂಘವು ಪಂಚಾಯತ್ ನಿರ್ವಹಣಾ ವ್ಯಾಪ್ತಿಗೆ ಬರುವುದಿಲ್ಲ ಎಂಬ ತೀರ್ಪಿನನ್ವಯ ಶಾಲೆಗಳ ಉಸ್ತುವಾರಿಯನ್ನು ಅದರಿಂದ ಪಡೆದು ಜಿಲ್ಲಾ ಪಂಚಾಯತ್ ವ್ಯಾಪ್ತಿಗಳಿಗೆ ನೀಡಲಾಗಿತ್ತು, ಈ ನಾಲ್ಕು ವರ್ಷದ ಅವಧಿಯಲ್ಲಿ ನಡೆದ ಗುತ್ತಿಗೆ ನೇಮಕಾತಿಗಳನ್ನು ಕ್ರೈಸ್ ನೇರ ಗುತ್ತಿಗೆಯವರು ಎಂದು ಪರಿಗಣಿಸಲಾಗಿದೆ. ಜಿಲ್ಲಾ ಪಂಚಾಯತ್ ನಿರ್ವಹಣಾ ಸಮಯದಲ್ಲಿ ಆಯಾ ಜಿಲ್ಲೆಯ ವಸತಿಶಾಲೆಗಳ ಶಿಕ್ಷಕರ ನೇಮಕಾತಿಯನ್ನು ಟೆಂಡರ್ ಕರೆದು ಖಾಸಗಿ ಮಾನವ ಸಂಪನ್ಮೂಲ ಏಜೆನ್ಸಿಗಳಿಗೆ ನೀಡಿ ಅವರ ಮೂಲಕ ಶಿಕ್ಷಕರ ಸೇವೆ ಪಡೆಯಲಾಗುತ್ತಿತ್ತು, ಇವರು ಅಂದರೆ ಹೊರಗುತ್ತಿಗೆಯ ಮೂಲಕ ಗುತ್ತಿಗೆ ನೌಕರಿ ಮಾಡುತ್ತಿರುವವರು ಈ ಹಿಂದಿನ ಕ್ರೈಸ್ ನೇರ ಗುತ್ತಿಗೆಯವರಿಗಿಂತ ಭಿನ್ನರು ಎಂದು ಭಾವಿಸಿರುವುದೇ ಸದ್ಯದ ರಾದ್ಧಾಂತಕ್ಕೆ ಕಾರಣ.

2010-11ನೇ ಸಾಲಿನಲ್ಲಿ ಪುನಃ ವಸತಿಶಾಲೆಗಳ ಉಸ್ತುವಾರಿಯನ್ನು ರಾಜ್ಯ ವಸತಿಶಾಲಾ ಶಿಕ್ಷಣ ಸಂಸ್ಥೆಗಳ ಸಂಘಕ್ಕೇ ವಹಿಸಲಾಗಿತ್ತು. ಈ ಹಂತದಲ್ಲಿ ಅಗತ್ಯವಿದ್ದ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಗುತ್ತಿಗೆ ಉಸಾಬರಿಗೇ ಹೋಗದ ಸಂಘವು ಅರ್ಜಿ ಆಹ್ವಾನಿಸಿ ನೇರ ನೇಮಕಾತಿ ಮಾಡಿಕೊಳ್ಳಲು ಮುಂದಾಗಿತ್ತು, ಅದರಂತೆ ಸುಮಾರು 5225 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿ ಅಧಿಸೂಚನೆ ಹೊರಡಿಸಿತ್ತು.


ಅದಕ್ಕೂ ಮುನ್ನ 25.01.2011ರ ರಾಜ್ಯಪತ್ರದಲ್ಲಿ ಸೂಚನೆಯೊಂದನ್ನು ಪ್ರಕಟಿಸಿ ಸದ್ಯದಲ್ಲೇ ಆರಂಭವಾಗುವ ನೇಮಕಾತಿಯಲ್ಲಿ ಈಗಾಗಲೇ ಸದರಿ ವಸತಿಶಾಲೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವವರಿಗೆ ವರ್ಷಕ್ಕೆ 5%ನಂತೆ ಗರಿಷ್ಠ 8 ವರ್ಷಗಳವರೆಗೆ (ಅಂದರೆ 40%) ಕೃಪಾಂಕವನ್ನು ಮತ್ತು ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡುವುದಾಗಿ ಸರ್ಕಾರ ಪ್ರಕಟಿಸಿತ್ತು, ಈ ನಿಯಮದಿಂದ ಸುಮಾರು ಏಳೆಂಟು ವರ್ಷಗಳಿಂದ ದುಡಿದ ತಮಗೆ ಅನುಕೂಲವಾಗಲಿದೆ ಎಂಬ ನಂಬಿಕೆಯಲ್ಲಿ ಅರ್ಜಿ ಸಲ್ಲಿಸಲು ಹೋದ ಹೊರಗುತ್ತಿಗೆ ಶಿಕ್ಷಕರಿಗೆ ದೊಡ್ಡ ಆಘಾತವೇ ಕಾದಿತ್ತು, ಏಕೆಂದರೆ ಇಲಾಖೆ ಅಂದರೆ ನೇಮಕಾತಿ ಮಾಡಿಕೊಳ್ಳುತ್ತಿರುವ ಕ್ರೈಸ್ ಸಂಘದ ಅಭಿಪ್ರಾಯದಂತೆ ಆರಂಭದ ನಾಲ್ಕು ವರ್ಷ ತನ್ನ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ನೇರವಾಗಿ ತಾನೇ ಗುತ್ತಿಗೆ ಮೂಲಕ ನೇಮಕ ಮಾಡಿಕೊಂಡಿತ್ತಲ್ಲ ಅವರನ್ನಷ್ಟೇ ಗುತ್ತಿಗೆ ನೌಕರರೆಂದು ಪರಿಗಣಿಸಿ ಅವರಿಗಷ್ಟೇ ಮೀಸಲಾತಿಯ ಸೌಲಭ್ಯಗಳನ್ನು ಕಾದಿರಿಸಿತ್ತು.

ಸರ್ಕಾರದ ಆದೇಶದಂತೆ ವಸತಿಶಾಲೆಗಳ ಆಡಳಿತ ವರ್ಗ ಬದಲಾವಣೆಯಾಗಿದ್ದರಲ್ಲಿ ಮತ್ತು ಆಯಾ ಆಡಳಿತಕ್ಕೆ ತಕ್ಕಂತೆ ನೇಮಕಾತಿ ಪ್ರಕ್ರಿಯೆಯೂ ಬದಲಾಗಿದ್ದರಲ್ಲಿ ಈ ಹೊರಗುತ್ತಿಗೆ ಮೂಲಕ ಆಯ್ಕೆಯಾದವರದೇನೂ ಪ್ರಮಾದವಿರಲಿಲ್ಲ, ಒಂದೊಮ್ಮೆ ಕ್ರೈಸ್ ಆಡಳಿತವೇ ನಿರಂತರವಾಗಿ ಮುಂದುವರೆದುಕೊಂಡು ಬಂದಿದ್ದರೆ ಇವರೂ ಸಹ ಅದರಡಿಯಲ್ಲೆ ಗುತ್ತಿಗೆ ನೌಕರಿಗೆ ಸೇರಿಕೊಂಡಿರುತ್ತಿದ್ದರು. ಆದರೆ ಮಧ್ಯದಲ್ಲಿ ತನ್ನ ಉಸ್ತುವಾರಿ ಕಳೆದುಕೊಂಡು ಈಗ ಉಸ್ತುವಾರಿ ಸಿಕ್ಕಕೂಡಲೇ ತನ್ನಿಂದ ನೇಮಿತವಾಗಿ ದುಡಿದವರ ಶ್ರಮ ಮಾತ್ರ ಲೆಕ್ಕಕ್ಕುಂಟು ಬೇರೆಯವರ ಅವಧಿಯಲ್ಲಿ ಆಯ್ಕೆಯಾಗಿ ದುಡಿದವರಿಗೂ ತಮಗೂ ಸಂಬಂಧವೇ ಇಲ್ಲವೆನ್ನುವಂತೆ ನಿಯಮ ರೂಪಿಸಿದ್ದು ನಿಜಕ್ಕೂ ದೊಡ್ಡ ಅನ್ಯಾಯ.

ಇದು ತಿಳಿಯುತ್ತಿದ್ದಂತೆ ಸುಮಾರು ಒಂದು ಸಾವಿರ ಹೊರಗುತ್ತಿಗೆಯ ಶಿಕ್ಷಕರು ಕ್ರೈಸ್ ಗುತ್ತಿಗೆ ಶಿಕ್ಷಕರಿಗೆ ನೀಡಿರುವಂತೆಯೇ ತಮಗೂ ಕೃಪಾಂಕ ದೊರಕಿಸಿಕೊಡಬೇಕೆಂದು ಹೈಕೋರ್ಟ್ ಮೊರೆ ಹೋಗಿದ್ದರು. ಆಗ ತೀರ್ಪು ನೀಡಿದ ಹೈಕೋರ್ಟ್ ಬಾಕಿ ನೇರ ಗುತ್ತಿಗೆಯವರಿಗೆ ನೀಡಿರುವ ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆಗಳನ್ನು ಇವರಿಗೂ ನೀಡಬೇಕೆಂದು ಆದೇಶಿಸಿತ್ತು, ಅದನ್ನು ಧಿಕ್ಕರಿಸಿ ನೇಮಕಾತಿ ಮಂಡಳಿಯು ಪರೀಕ್ಷೆ ನಡೆಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನೂ ಪ್ರಕಟಿಸಿತ್ತು.

ಆಗ ಮತ್ತೊಮ್ಮೆ ಕೋರ್ಟ್ ಮೆಟ್ಟಿಲೇರಿದ ಹೊರಗುತ್ತಿಗೆ ಶಿಕ್ಷಕರ ಪರವಾಗಿ ಹೈಕೋರ್ಟ್ ಅಂತಿಮ ಆಯ್ಕೆಪಟ್ಟಿ ಪ್ರಕಟಿಸದಂತೆ ತಡೆಯಾಜ್ಞೆ ವಿಧಿಸಿತ್ತು, ಆದರೆ ಮಕ್ಕಳ ಶೈಕ್ಷಣಿಕ ಹಿನ್ನಡೆಯನ್ನು ಮುಂದು ಮಾಡಿಕೊಂಡು ಕೋರ್ಟ್‌ನ ಮನವೊಲಿಸಿದ ಮಂಡಳಿ ತನ್ನ ತಡೆಯಾಜ್ಞೆಯನ್ನು ತಾನೇ ತೆರವುಗೊಳಿಸುವಂತೆ ನೋಡಿಕೊಂಡಿದೆ. ಆದರೂ ತಾನು ಅಂತಿಮ ತೀರ್ಪು ಪ್ರಕಟಿಸುವವರೆಗೆ ನ್ಯಾಯ ಕೋರಿ ಅರ್ಜಿ ಸಲ್ಲಿಸುವವರ ಸ್ಥಾನಕ್ಕೆ ಧಕ್ಕೆಯಾಗದಂತೆ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಬೇಕು ಎಂಬ ನಿಬಂಧನೆ ವಿಧಿಸಿಯೇ ಕೋರ್ಟ್ ನೇಮಕಾತಿ ಪ್ರಕ್ರಿಯೆಗೆ ಹಸಿರು ನಿಶಾನೆ ತೋರಿಸಿತ್ತು.

ಆದರೆ ಮತ್ತೊಂದು ಅಡ್ಡಿ ಬರುವುದರೊಳಗೆ



ನೇಮಕಾತಿಯನ್ನು ಮುಗಿಸಿಬಿಡುವ ಆತುರದಲ್ಲಿರುವ ಕ್ರೈಸ್ ಸಂಘವು ಆವಸರದಲ್ಲೆ ಸ್ಥಳ ನಿಗದಿಯ ಕೌನ್ಸೆಲಿಂಗ್ ಅನ್ನು ಆರಂಭಿಸಿದೆ. ಹೈಕೋರ್ಟ್‌ನ ಆದೇಶದಲ್ಲಿ ಉಲ್ಲೇಖವಾಗಿರುವಂತೆ ಅರ್ಜಿದಾರರ ಯಥಾಸ್ಥಿತಿಯನ್ನು ಕಾಪಾಡಬೇಕೆಂದರೆ ಅವರು ಸದ್ಯ ಕರ್ತವ್ಯದಲ್ಲಿರುವ ಹುದ್ದೆಯಿಂದ ಸ್ಥಾನಪಲ್ಲಟಗೊಳಿಸಬಾರದು ಅಥವಾ ಆ ಜಾಗಕ್ಕೆ ಹೊಸಬರನ್ನು ನೇಮಿಸಬಾರದು. ಆದರೆ ನಡೆಯುತ್ತಿರುವ ಕೌನ್ಸೆಲಿಂಗ್‌ನಲ್ಲಿ ಇಷ್ಟೂ ಜನ ಕರ್ತವ್ಯದಲ್ಲಿರುವ ಸ್ಥಾನಗಳನ್ನು ಖಾಲಿ ಅಂತಲೇ ತೋರಿಸಲಾಗುತ್ತಿದೆ. ಇದರಿಂದ ಹೊಸದಾಗಿ ಆಯ್ಕೆಯಾಗುತ್ತಿರುವವರು ಆ ಸ್ಥಳವನ್ನು ಆಯ್ದುಕೊಳ್ಳುತ್ತಾರೆ. ಆಗ ಕೋರ್ಟ್ ಮೊರೆಯಲ್ಲಿರುವವರು ಹೊಸದಾಗಿ ಬಂದವರಿಗೆ ಜಾಗ ಮಾಡಿಕೊಡಲೇಬೇಕಾಗುತ್ತದೆ. ಅಲ್ಲಿಗೆ ಕೋರ್ಟ್‌ನ 'ಇವರ ಯಥಾಸ್ಥಿತಿಯನ್ನು ಕಾಪಾಡಬೇಕು' ಎನ್ನುವ ಕರಾರಿಗೆ ಕಿಮ್ಮತ್ತಿನ ಬೆ... ಇರುವುದಿಲ್ಲ, ವಸತಿಶಾಲೆ ಸಂಘ ಈಗ ಮಾಡುತ್ತಿರುವುದು ಅದನ್ನೆ.

ಈ ನಡುವೆ ಸಚಿವ ಸಂಪುಟದ ಸಭೆಯಲ್ಲಿ ಕ್ರೈ... ಮೂಲಕ ಹೊರಗುತ್ತಿಗೆ ಆದವರನ್ನು ನೇರವಾ...



ಕಾಯಂಗೊಳಿಸಲು ಆದೇಶ ಹೊರಡಿಸಲಾಗಿದೆ. ಅಂದ... ಈ ಮೊದಲು ಅವರಿಗಾಗಿ ನೀಡಿದ್ದ ಕೃಪಾಂಕ, ಸಡಿಲಿಕೆ... ಹಂಗೂ ಇಲ್ಲದೆ ಇಲಾಖೆಗೆ ಭರ್ತಿಯಾಗಿದ್ದಾರೆ. ಅದ... ಆ ಸೌಲಭ್ಯಗಳನ್ನು ಕೊಡಿ ಎಂದು ಕೇಳುತ್ತಿರುವ ಐದಾ... ಸಾವಿರ ಶಿಕ್ಷಕರನ್ನು ಸುಖಾಸುಮ್ಮನೆ ಸತಾಯಿಸಲು ಸರ್ಕಾ... ನಿರ್ಧರಿಸಿದಂತಿದೆ. ಈ ನಡುವೆ ಕ್ರೈಸ್ ಸಂಘದ ಗುತ್ತಿ... ನೌಕರರು ಹಣ ಚೆಲ್ಲಾಡಿರುವುದರಿಂದ ಈ ರೀತಿ... ಧೋರಣೆ ಅನುಸರಿಸಲಾಗುತ್ತಿದೆ ಎಂಬ ಆರೋಪವ... ಕೇಳಿಬರುತ್ತಿದೆ. ಸರ್ಕಾರದ ಈ ಮಲತಾಯಿ ಧೋರ... ಮತ್ತು ಇಬ್ಬಂದಿತನ ಇವರನ್ನು ಇಕ್ಕಟ್ಟಿಗೆ ಸಿಲುಕಿಸಿ... ಏಜೆನ್ಸಿಗಳಿಂದ ನೇಮಕವಾದವರು ಎಂಬ ಕಾರಣಕ್ಕೆ ಅ... ದುಡಿಮೆಗೆ ಬೆಲೆ ನೀಡುವುದಿಲ್ಲ ಎಂಬುದು ಒಪ್ಪತಕ್ಕುದ... ವಸತಿಶಾಲೆಗಳು ಪ್ರತಿ ವರ್ಷ ಗರಿಷ್ಠ ಶೇಕಡಾ ಫಲಿತಾಂ... ನೀಡುತ್ತ ಬಂದಿವೆ, ಅದರಲ್ಲಿ ಇವರ ಶ್ರಮದ ಪಾಲ... ಇದೆ. ಅದೂಅಲ್ಲದೆ ಈಗ ಏಳೆಂಟು ವರ್ಷಗಳಿಂದ ಇ... ದುಡಿದವರನ್ನು ಸಣ್ಣದೊಂದು ಕಾರಣಕ್ಕೆ ಕನಿಷ್ಠ ಸೌಲಭ್ಯವ... ನಿರ್ಲಕ್ಷಿಸುವುದು ಆಳುವ ಸರ್ಕಾರದ ಹೊಣೆಗೇಡಿತನವಲ್ಲ... ಮತ್ತೇನೂ ಅಲ್ಲ, ಕಡೇಪಕ್ಷ ಕೋರ್ಟಿನ ತೀರ್ಪಿಗೆ ಗೌರ... ಕೊಡುವಷ್ಟೂ ಕಳಕಳಿ ಸರ್ಕಾರಕ್ಕಿಲ್ಲದಿರುವುದು ಜನತೆ... ದುರಾದೃಷ್ಟವೇ ಸರಿ.

❖ ಗಿರೀಶ್ ತಾಳಿಕಟ್ಟೆ


ವಿಷ ಕುಡೀರಿ ಅಂದ ಸಚಿವ

ತಮಗಾಗಿರುವ ಈ ಅನ್ಯಾಯ ಮತ್ತು ತಮ್ಮ ಶ್ರಮದ ನಿರ್ಲಕ್ಷ್ಯದ ಬಗ್ಗೆ ಸಚಿವರ ಗಮನಕ್ಕೆ ತರಲು ಸಮಾಜ ಕಲ್ಯಾಣ ಇಲಾಖೆಯ ಸಚಿವ ಎ. ನಾರಾಯಣಸ್ವಾಮಿಯನ್ನು ಭೇಟಿಯಾದವರಿಗೆ ಆತ್ಮಹತ್ಯೆಯ ಪುಕ್ಕಟೆ ಸಲಹೆಗಳು ಸಿಗುತ್ತಿವೆಯೇ ಹೊರತು, ಕನಿಷ್ಠ ಪಕ್ಷ ನಿಟ್ಟುಸಿರು ಬಿಡುವಂತಹ ಆಶ್ವಾಸನೆಯೂ ಸಿಗುತ್ತಿಲ್ಲ. ಮೊನ್ನೆ ಒಂದಷ್ಟು ಜನ ಈ ಕುರಿತು ಭೇಟಿಯಾದಾಗ ತಮ್ಮ ಬಳಿ ನೀವೇಕೆ ಬಂದಿದ್ದೀರಿ, ನೀವೆಲ್ಲ ಏಜೆನ್ಸಿ ಮೂಲಕ ಹೊರಗುತ್ತಿಗೆಯವರು. ನನಗೂ ನಿಮಗೂ ಸಂಬಂಧವೇ ಇಲ್ಲವೆನ್ನುವ ಬೇಜವಾಬ್ದಾರಿಯ ಮಾತನಾಡಿದ್ದಾರೆ. ಅಲ್ಲಿದ್ದವರೊಬ್ಬರು ನೀವೇ ಹೀಗೆಂದರೆ ನಾವು ಪ್ರಾಣ ಕಳೆದುಕೊಳ್ಳಬೇಕಾಗುತ್ತೆ ಎಂದು ಅಲವತ್ತು ಕೊಂಡದ್ದಕ್ಕೆ 'ನನ್ನಿಂದ ಏನೂ ಮಾಡಲು ಆಗೋಲ್ಲ, ಬೇಕಾದ್ರೆ ವಿಷ ಕುಡಿದು ಸಾಯ್ರಪಾ' ಎಂಬ ಸಲಹೆಯನ್ನೂ ನೀಡಿದ್ದರು.

ಆದಾದನಂತರ ಮತ್ತೊಮ್ಮೆ ಮನವಿ ಪತ್ರದ ಸಮೇತ ಅವರ ಬಳಿ ಹೋದಾಗ ಕೊಂಚ ತಾಳ್ಮೆ ಕಳೆದುಕೊಂಡ ಸಚಿವ ಮತ್ತದೇ ಬೇಜವಾಬ್ದಾರಿ ಡೈಲಾಗ್ ಹೇಳಿ ಅವರೆದುರ ಮನವಿ ಪತ್ರ ಹರಿದು ಹಾಕಿ ಪ್ರತಾಪ ಪ್ರದರ್ಶಿಸಿದ್ದರು.

ಚಳ್ಳಕೆರೆಯಲ್ಲಾಗಲೇ ಚುನಾವಣೆಯ ಕಿಕ್ಕು!

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಯಾರಿಗೆ ಟಿಕೆಟ್ ನೀಡಬೇಕು ಎಂಬುದರ ಬಗ್ಗೆ ಎಐಸಿಸಿ ರಾಜ್ಯದಾದ್ಯಂತ ಪಕ್ಷದ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸುತ್ತಿದೆ. ಚಿತ್ರದುರ್ಗ ಜಿಲ್ಲೆಯಲ್ಲೂ ಅಂತಹ ಅಭಿಪ್ರಾಯ ಸಂಗ್ರಹ ನಡೆದಿದೆ. ಈ ಸಮೀಕ್ಷೆಯ ದಿನ ಎಐಸಿಸಿ ಪ್ರತಿನಿಧಿಯಾಗಿ ಮಹಾರಾಷ್ಟ್ರದ ವಿಶ್ವನಾಥ ಚಾಕೂಟೆ ಆಗಮಿಸಿ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಆಕಾಂಕ್ಷಿಗಳ ಕುರಿತು ಅಭಿಪ್ರಾಯ ಸಂಗ್ರಹಿಸಿದ್ದಾರೆ.



ಶಶಿಕುಮಾರ್

ಇಲ್ಲಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಮುಂದಾಗಿರುವ ರಘುಮೂರ್ತಿ ಕುರಿತು ಹೇಳಬೇಕಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲೇ ಖಚಿತ ಕಾಂಗ್ರೆಸ್‌ನಿಂದ ಸ್ಪರ್ಧಿಸಬೇಕಿತ್ತು. ಪಕ್ಷ ಬಿ.ಫಾರಂ ಕೂಡಾ ನೀಡಿತ್ತು. ಕೊನೇ ಗಳಿಗೆಯಲ್ಲಿ ನಟ ಶಶಿಕುಮಾರ್ ಎಂಟ್ರಿಯಾಗಿದ್ದರಿಂದ ರಘುಮೂರ್ತಿ ಟಿಕೆಟ್ ವಂಚಿತರಾದರು.

ಚುನಾವಣಾ ಫಲಿತಾಂಶ ಬಂದಾಗ ನಟ-ಶಶಿಕುಮಾರ್ ಕೇವಲ ನೂರು ಮತಗಳ ಅಂತರದಲ್ಲಿ ಪರಾಭವಗೊಂಡರು. ಅಂದು ಪರಾಭವಗೊಂಡ ಶಶಿಕುಮಾರ್‌ಗಿಂತ ನೂರು ಪಟ್ಟು ಬೇಸರಗೊಂಡವರು ಪಕ್ಷದ ಕಾರ್ಯಕರ್ತರು. ಕನಿಷ್ಠ ಮತದಾನದ ದಿನ ಶಶಿಕುಮಾರ್ ನಾಲ್ಕೈದು ಹಳ್ಳಿಗಳಿಗೆ ಎಡತಾಕಿ ಕೈ ಮುಗಿದಿದ್ದರೂ ಗೆದ್ದೇ ಬಿಡುತ್ತಿದ್ದರು. ಆದರೆ, ಶಶಿಕುಮಾರ್‌ನನ್ನು ಹತ್ತಿರದಿಂದ ನೋಡಿದವರ ಪ್ರಕಾರ ಎರಡು ಪೆಗ್ ಕಡಿಮೆ ಕುಡಿದು ಆ ಸಮಯವನ್ನು ಜನರ ಜೊತೆ ಕಳೆದಿದ್ದರೆ ಗೆಲ್ಲುತ್ತಿದ್ದರು.

ಹೀಗೆ ಎರಡು ಪೆಗ್ ಹೆಚ್ಚಾಗಿ ಕುಡಿದು ಸೋತ ಶಶಿಕುಮಾರ್ ಮತ್ತೆರಡು ಪೆಗ್ ಏರಿಸಿಕೊಂಡು ಬೆಂಗಳೂರಿನ ಕಡೆ ಹೊರಟರು. ಥೇಟ್ ಸಂತೆ ವ್ಯಾಪಾರಿಯಂತೆ, ಬಂದ ಪುಟ್ಟ, ಹೋದ ಪುಟ್ಟ ಎಂಬಂತಾಗಿತ್ತು ನಟ ಶಶಿಕುಮಾರ್‌ರ ಪೊಲಿಟಿಕಲ್ ಎಪಿಸೋಡು.

ಪಕ್ಷದ ಟಿಕೆಟ್‌ನಿಂದ ವಂಚಿತರಾದ ರಘುಮೂರ್ತಿ ಅಸಮಾಧಾನದಿಂದ ಕೂರಲಿಲ್ಲ, ಮತ್ತೆ ಕಾರ್ಯಕರ್ತರ ಕೈಹಿಡಿದರು. ಪಕ್ಷ ಗೆದ್ದಾಗ ಮಾತ್ರವಲ್ಲ ಎಂಬಂತೆ ನಡೆದುಕೊಂಡರು. ಪಕ್ಷ ಸೋತಿದೆ ಎಂಬ ಭಾವನೆಯೇ ಬರದಂತೆ ಕಾರ್ಯಕರ್ತರೊಂದಿಗೆ ಸಂಪರ್ಕವೃದ್ಧಿ ಮಾಡಿಕೊಂಡರು. ಇಡೀ ಕ್ಷೇತ್ರದ ಹಳ್ಳಿ ಹಳ್ಳಿಗಳಲ್ಲಿ ತಿರುಗಿ ಕಾರ್ಯಕರ್ತರಲ್ಲಿ ಭರವಸೆ ತುಂಬಿ ಪಕ್ಷವನ್ನು ಸಂಘಟಿಸುವ ಕೆಲಸಕ್ಕೆ ಮುಂದಾದರು. ಗ್ರಾಮ ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ-ಹೀಗೆ ಎಲ್ಲಾ ಚುನಾವಣೆಗಳಲ್ಲೂ ಕಾರ್ಯಕರ್ತರನ್ನು ಹುರಿದುಂಬಿಸಿ ಪಕ್ಷದ ಯಶಸ್ಸಿಗೆ ಟೊಂಕಕಟ್ಟಿ ನಿಂತರು.

ಸಿದ್ದರಾಮಯ್ಯ ನೇತೃತ್ವದಲ್ಲಿ ಬಳ್ಳಾರಿಗೆ ಹಮ್ಮಿಕೊಂಡ ಪಾದಯಾತ್ರೆ ಸಂದರ್ಭದಲ್ಲಿ ಇಡೀ ಸಂಘಟನೆಯ ಜವಾಬ್ದಾರಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಕೆಲಸ ಮಾಡಿದರು. ಚಳ್ಳಕೆರೆ ಗಡಿ ಪ್ರವೇಶಿಸಿ, ಗಡಿದಾಟುವವರೆಗೆ ರಾಜ್ಯ ಕಾಂಗ್ರೆಸ್ ನಾಯಕರಿಗೆ ಸಿಕ್ಕ ಅಭೂತಪೂರ್ವ ಜನಬೆಂಬಲದ ಹಿಂದೆ ರಘುಮೂರ್ತಿ ಕಾರ್ಯಕರ್ತರ ಮುಖಂಡನಾಗಿ ಗಳಿಸಿದ ಪ್ರೀತಿ, ಶ್ರಮ, ಎಲ್ಲವೂ ಇತ್ತು.

ಪಕ್ಷ ಸಂಘಟಿಸುವ ರಘುಮೂರ್ತಿ ಕಾಯಕ ನಿರಂತರವಾಗಿ ಮುಂದುವರಿಯುತ್ತಲೇ ಇದೆ. ಚಳ್ಳಕೆರೆ ವಿಧಾನಸಭಾ ಕ್ಷೇತ್ರದ 220 ಬೂತ್‌ಗಳ ಯಾವ ಕಾರ್ಯಕರ್ತರ ಬಳಿ ಕೇಳಿದರೂ ರಘುಮೂರ್ತಿ ಹೆಸರನ್ನು ತಟ್ಟನೆ ಹೇಳುತ್ತಾರೆ. ಮೊನ್ನೆ ವೀಕ್ಷಕರಾಗಿ ಆಗಮಿಸಿದ್ದ ಎಐಸಿಸಿ ಸದಸ್ಯ ವಿಶ್ವನಾಥ ಚಾಕೂಟೆಯವರು ರಘುಮೂರ್ತಿ ಪಕ್ಷ ಸಂಘಟಿಸುವಲ್ಲಿ ಹಾಕಿರುವ ಶ್ರಮ, ಕಾರ್ಯಕರ್ತರ ಅಭಿಪ್ರಾಯ ಗಮನಿಸಿ ಮೆಚ್ಚುಗೆ ಸೂಚಿಸಿದ್ದಾರೆ.

ಕರ್ನಾಟಕ ಗ್ರಾಮೀಣ ಜಲ ಅಭಿವೃದ್ಧಿ ವಿಭಾಗದಲ್ಲಿ ಎಂಜಿನಿಯರ್ ಆಗಿದ್ದ ರಘುಮೂರ್ತಿ ಇನ್ನೂ 13 ವರ್ಷ ಸೇವಾವಧಿ ಇರುವಾಗಲೇ ರಾಜೀನಾಮೆ ನೀಡಿ ರಾಜಕೀಯಕ್ಕೆ ಬಂದವರು. ಹಾಗೆಂದು ದಿಢೀರ್ ರಾಜಕೀಯ ಕ್ರೇಜಿನಿಂದ ರಾಜಕೀಯಕ್ಕೆ ಇಳಿದವರಲ್ಲ, ಅವರ ಕೌಟುಂಬಿಕ ಹಿನ್ನೆಲೆ ಕೂಡಾ ಕಾಂಗ್ರೆಸ್‌ನದೇ. ಸರಿಸುಮಾರು ಮುಕ್ಕಾಲು ದಶಕಗಳಿಂದ ಅವರ ಕುಟುಂಬ ನಿರಂತರವಾಗಿ ಕಾಂಗ್ರೆಸ್ ಪಕ್ಷ ನಿಷ್ಠೆಯನ್ನಿರಿಸಿಕೊಂಡೇ ರಾಜಕೀಯವಾಗಿ ಗುರುತಿಸಿಕೊಂಡಿದೆ. ಅವರ ಸೊಸೆ ತುರುವನೂರು ಜಿ.ಪಂ.ಕ್ಷೇತ್ರದ ಸದಸ್ಯೆಯಾಗಿದ್ದವರು. ಸಹೋದರ ತಿಪ್ಪೇಸ್ವಾಮಿ ಒಂದು ಅವಧಿಗೆ ತಾ.ಪಂ. ಸದಸ್ಯರಾಗಿ, ಪ್ರಸ್ತುತ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದಾರೆ. ರಾಜಕೀಯದೊಂದಿಗಿನ ಇಂತಹ ಒಡನಾಟದಿಂದಲೇ ರಘುಮೂರ್ತಿ ರಾಜಕೀಯದತ್ತ ಮುಖಮಾಡಿದ್ದಾರೆ.



ರಘುಮೂರ್ತಿ

ತಾಲ್ಲೂಕಿನ ಅಭಿವೃದ್ಧಿ ಕುರಿತು ತನ್ನದೇ ಆದ ಒಳನೋಟ ಹೊಂದಿರುವ ರಘುಮೂರ್ತಿ "ನಂಜುಂಡಪ್ಪ ವರದಿಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಂದು ಹೆಸರಿರುವುದರಲ್ಲಿ ಚಳ್ಳಕೆರೆ ಕೂಡಾ ಒಂದು. ಮಳೆಯಾಶ್ರಿತ ಕೃಷಿ ಚಟುವಟಿಕೆಗಳೇ ಇಲ್ಲಿ ಪ್ರಧಾನ. ಮೊದಲ ಆದ್ಯತೆಯಾಗಿ ವೇದಾವತಿ ನೀರಿಗೆ ಬ್ಯಾರೇಜ್ ನಿರ್ಮಾಣ ಮಾಡಬೇಕು. ರಾಣಿಕೆರೆಗೆ ನೀರು ಹರಿಸಬೇಕು. ಫ್ಲೋರೈಡ್ ನೀರು ಬಹುತೇಕ ತಾಲ್ಲೂಕಿನಾದ್ಯಂತ ಜನರ ಆರೋಗ್ಯಕ್ಕೆ ಸವಾಲಾಗಿದೆ. ಬಹಳ ಮುಖ್ಯವಾಗಿ ಎಲ್ಲಾ ವರ್ಗದ ಜನರಿಗೆ ಆರ್ಥಿಕ ಚೈತನ್ಯ ಹೆಚ್ಚಿಸುವಂತ ಅಭಿವೃದ್ಧಿ ಯೋಜನೆಗಳ ಜಾರಿಗೆ ತುರ್ತು ಆದ್ಯತೆ ನೀಡಬೇಕಿದೆ" ಎನ್ನುತ್ತಾರೆ.

ರಘುಮೂರ್ತಿ ಮಾತುಗಳು ಮಾಮೂಲಿ ರಾಜಕಾರಣಿಯ ಬೂಟಾಟಿಕೆ ಶೈಲಿಯದ್ದು ಅಂತಾ ಅನ್ನಿಸುವುದಿಲ್ಲ, ಹಾಗಾಗಿ ರಘುಮೂರ್ತಿ ರಾಜಕೀಯವಾಗಿ ಭರವಸೆ ಹುಟ್ಟಿಸುತ್ತಾರೆ. ಈ ನಡುವೆ ನಟ ಶಶಿಕುಮಾರ್ ಮತ್ತೆ ಚಳ್ಳಕೆರೆಯತ್ತ ಕಣ್ಣುಹಾಯಿಸುತ್ತಿದ್ದಾರೆ. ಸಿದ್ದರಾಮಯ್ಯನವರ ಜೊತೆ ಕಾಂಗ್ರೆಸ್ ಪಕ್ಷ ಸೇರಿದ ಭಕ್ತರಾಮೇಗೌಡ, ಈಗಾಗಲೇ ಒಂದೆರಡು ಚುನಾವಣೆಗಳಲ್ಲಿ ನಾಮಮಾತ್ರದ ಓಟು ಪಡೆದು ಪರಾಭವಗೊಂಡಿದ್ದ ಜಗಳೂರಯ್ಯ ಸೇರಿದಂತೆ ಹಲವು ಹೆಸರುಗಳು ಚಾಲ್ತಿಯಲ್ಲಿವೆ.

ಅಂತೆಕಂತೆಗಳೇನೇ ಇರಲಿ, ಕಾಂಗ್ರೆಸ್ ಪಕ್ಷಕ್ಕೆ ಶ್ರಮಿಸಿದ ವ್ಯಕ್ತಿಯೊಬ್ಬರಿಗೆ ಟಿಕೆಟ್ ನೀಡಬೇಕೆಂಬ ಮಾನದಂಡವನ್ನೇ ಅನುಸರಿಸಿದರೆ ಪರಿಗಣಿಸಬೇಕಾದ ಏಕೈಕ ಅಭ್ಯರ್ಥಿ ರಘುಮೂರ್ತಿ.

ಕ್ಷೇತ್ರದ ಒಲವು ಕೂಡಾ ಕಾಂಗ್ರೆಸ್ ಕಡೆಗಿರುವುದು ಕಂಡುಬರುತ್ತಿದೆ. ಹಾಲಿ ಶಾಸಕ ತಿಪ್ಪೇಸ್ವಾಮಿಯವರ ಮಗ ಕುಮಾರಸ್ವಾಮಿ ಅಘೋಷಿತ ಶಾಸಕನಂತೆ ಓಡಾಡುತ್ತಿದ್ದರೂ ರಾಜಕೀಯವಾಗಿ ಇನ್ನೂ ಅಪ್ರಬುದ್ಧ. ಜೆಡಿಎಸ್‌ನಿಂದ ಕಳೆದ ಬಾರಿ ಸ್ಪರ್ಧಿಸಿದ್ದ ತಿಪ್ಪೇಸ್ವಾಮಿಯೇ ಕಣಕ್ಕಿಳಿಯಲಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಚಳ್ಳಕೆರೆ ಇಡೀ ಜಿಲ್ಲೆಯಲ್ಲೇ ವಿಚಿತ್ರ ರೀತಿಯ ರಾಜಕೀಯ ಖಯಾಲಿಗೆ ಹೇಳಿಮಾಡಿಸಿರುವ ಕ್ಷೇತ್ರ. ಹಾಗಾಗಿ ಇಲ್ಲಿ ಏನು ಸಂಭವಿಸುತ್ತದೆ ಎಂದು ಹೇಳಲಾಗದು. ಆದರೆ, ರಾಜಕೀಯವನ್ನು ಜನರ ಜೊತೆ ಕೆಲಸ ಮಾಡುವ ಅವಕಾಶವಾಗಿ, ಒಂದು ಕಾಳಜಿಯಾಗಿ ಸ್ವೀಕರಿಸಿರುವ ರಘುಮೂರ್ತಿ ಹಾದಿ ಸುಗಮವಾಗಬೇಕು. ಆ ಹಾದಿಯನ್ನು ಸುಗಮಗೊಳಿಸಬೇಕಾದ ಜವಾಬ್ದಾರಿ ಕೆಪಿಸಿಸಿಯದಾಗಿದೆ.

ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್, ಪ್ರತಿಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ, ಕೇಂದ್ರ ಸಚಿವರಾಗಿರುವ ಮಲ್ಲಿಕಾರ್ಜುನ ಖರ್ಗೆಯಂತ ಹಿರಿಯ ನಾಯಕರೂ ರಘುಮೂರ್ತಿಯ ಪಕ್ಷದ ಸಂಘಟನೆಯ ಕಾರ್ಯ ವೈಖರಿಯನ್ನು ಗಮನಿಸಿರುವುದರಿಂದ ರಘುಮೂರ್ತಿಗೆ ಪಾಸಿಟಿವ್ ಸಿಗ್ನಲ್ ಸಿಗುವುದು ಕಷ್ಟವೇನಲ್ಲ.

ಶ್ರೀಗಂಧ ದುರ್ಗಂಧವಾದಾಗ...!

ಕರ್ನಾಟಕದ ಹೆಮ್ಮೆಯ ಮೈಸೂರು ಸ್ಯಾಂಡಲ್ ಸಾಬೂನು ಇಡೀ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆದಿದೆ. ಅದಕ್ಕೆ ಪ್ರಮುಖ ಕಾರಣ ಕರುನಾಡಿನ ಶ್ರೀಗಂಧದ ತಾಜಾ ಪರಿಮಳ. ಸರ್ಕಾರದ ದುರಾಡಳಿತ, ಅಧಿಕಾರಿಗಳ ವ್ಯಾಪಕ ಭ್ರಷ್ಟಾಚಾರ ಇತ್ಯಾದಿಗಳ ಹೊರತಾಗಿಯೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಂಪನಿ ತನ್ನ ಮಾರುಕಟ್ಟೆಯನ್ನು ವಿಸ್ತರಿಸುತ್ತಾ ಬಂದಿದೆ. ಕಳೆದ ಒಂದು ದಶಕದಿಂದೀಚೆಗೆ ಕಂಪನಿ ಸತತ ಲಾಭ ಮಾಡಿದೆ. ಇದೆಲ್ಲಾ ಸಾಧ್ಯವಾಗಿರುವುದು ನಮ್ಮಲ್ಲಿ ದೊರೆಯುವ ಜಗತ್ತಿನಲ್ಲೇ ಉತ್ಕೃಷ್ಟ ದರ್ಜೆಯ ಪರಿಶುದ್ಧ ಶ್ರೀಗಂಧದ ಕಾರಣದಿಂದ ಮಾತ್ರ.



ಹೀಗಿರುವಾಗ ಕಂಪನಿಯು ತನ್ನ ಅಭಿವೃದ್ಧಿ ಯೋಜನೆಗಳ ಭಾಗವಾಗಿ ಇತ್ತೀಚೆಗೆ ಅಧಿಕೃತ ವೆಬ್‌ಸೈಟೊಂದನ್ನು ಪ್ರಾರಂಭಿಸಿದೆ. ಆ ವೆಬ್‌ಸೈಟಿನಲ್ಲಿ ಸಿರಿಗನ್ನಡದ ಕಗ್ಗೊಲೆ ನಡೆಸಿದೆ. ವೆಬ್‌ಸೈಟ್‌ನಲ್ಲಿ ಕನ್ನಡಕ್ಕೆ ಒದಗಿರುವ ದುರ್ಗತಿಯ ಕೆಲವು ಸ್ಯಾಂಪಲ್‌ಗಳನ್ನು ನೋಡಿ.

"ಸರ್ಕಾರ ಶ್ರೀಗಂಧದ ಆಯಿಲ್ ಕಾರ್ಖಾನೆ ಸ್ಥಾಪಿಸಲಾಯಿತು ಮೈಸೂರು ಅವನ ಹೈನೆಸ್ Nalwadi ಕೃಷ್ಣರಾಜ ಒಡೆಯರ್ ಮತ್ತು ದಿವಾನ್ ಸರ್, ಎಂ ವಿಶ್ವೇಶ್ವರಯ್ಯ ಶ್ರೀಗಂಧದ ತೈಲ ಹೊರತೆಗೆಯಲು, ಮೈಸೂರು ವರ್ಷದಲ್ಲಿ 1916 ಸಮಯದಲ್ಲಿ. " ಈ ವಾಕ್ಯದಲ್ಲಿರುವ ಅರ್ಧವಿರಾಮ, ಪೂರ್ಣವಿರಾಮ, ದಪ್ಪಕ್ಷರ, ಆಂಗ್ಲ ಅಕ್ಷರ ಸಮೇತ ಎಲ್ಲವನ್ನೂ ವೆಬ್‌ಸೈಟ್‌ನಲ್ಲಿ ಇದ್ದ ಹಾಗೆ ನೀಡಲಾಗಿದೆ. ಇದು ಆ ವೆಬ್‌ಸೈಟ್‌ನಲ್ಲಿರುವ ಪ್ರಪ್ರಥಮ ವಾಕ್ಯ

ಮೈಸೂರು ಸ್ಯಾಂಡಲ್ ಕಾರ್ಖಾನೆಯ ಸ್ಥಾಪನೆಗೆ ಕಾರಣರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಈಗೇನಾದರೂ ಬದುಕಿದ್ದು "ಅವನ ಹೈನೆಸ್ ಕೃಷ್ಣ ರಾಜ ಒಡೆಯರ್" ಎಂಬ ಅಧಿಕೃತ ಸಂಬೋಧನೆಯನ್ನು ಒಂದುವೇಳೆ ಓದಿಬಿಟ್ಟಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೇನೋ?

ಹಾಗೆ ಮುಂದುವರೆದರೆ ಮತ್ತೊಂದು ವಾಕ್ಯ ಹೀಗಿದೆ. _" London ರಿಂದ SG Shastry ಆಫ್ ವಾಪಸಾತಿಯೊಂದಿಗೆ, ಮೈಸೂರು ಸ್ಯಾಂಡಲ್ ಸೋಪ್ ಆಫ್ ಯುಗ ಪ್ರಾರಂಭವಾಯಿತು. " ಈ ವಾಕ್ಯವನ್ನು ಹೇಗಾದರೂ ಸಹಿಸಿಕೊಳ್ಳಬಹುದು. ಮಿಷನ್ ಹೇಳಿಕೆಯೆಂಬ ಮತ್ತೊಂದು ವಾಕ್ಯವನ್ನು ಓದಿ. "ಲಿಮಿಟೆಡ್ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳು ಸಾಧಿಸಲು ಶ್ರಮಿಸಬೇಕು ಹಾಗಿಲ್ಲ-" ಆಹಾ...! ಹೀಗಾದರೆ ಕಂಪನಿ ಉದ್ಧಾರವಾದ ಹಾಗಾಯ್ತು! ಇದರ ಮೂಲ ಇಂಗ್ಲಿಷ್ ರೂಪ " _" Karnataka Soaps & Detergents Limited shall strive to achieve :-- " ಅಂದರೆ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಕಂಪನಿಯು ಇವುಗಳನ್ನು ಸಾಧಿಸಲು ಶ್ರಮಿಸುತ್ತದೆ ಎಂದರ್ಥ. ಈ ವೆಬ್‌ಸೈಟ್‌ನಲ್ಲಿ ತುಂಬಾ ಇಂಥದ್ದೇ ಕನ್ನಡ ರಾರಾಜಿಸುತ್ತಿದೆ. ಇದು ಕನ್ನಡ ಭಾಷೆಗೆ ಮಾತ್ರ ಸೀಮಿತವಾಗಿಲ್ಲ, ತೆಲುಗು ತಮಿಳುಗಳನ್ನು ಒಳಗೊಂಡಂತೆ ಹತ್ತಾರು ಭಾಷೆಗಳ ಅನುವಾದಕ್ಕೂ ಇದೇ ಗತಿಯಾಗಿದೆ.

ಇಂಥಾ ಅವಾಂತರಗಳಿಗೆ ಕಾರಣವೇನಿರಬಹುದು? ಈ ಪ್ರಶ್ನೆಯ ಬೆನ್ನತ್ತಿದರೆ ಕಂಪನಿಯ ವೆಬ್‌ಸೈಟನ್ನು ರೂಪಿಸಿದ ಮೂರ್ಖ ಅಧಿಕಾರಿಗಳ ಬೇಜವಾಬ್ದಾರಿತನ ಮತ್ತು ಕನ್ನಡದ ಬಗ್ಗೆ ಅವರಿಗಿರುವ ಅಸಡ್ಡೆ ಗೋಚರಿಸುತ್ತದೆ. ಇಲ್ಲಿ ನಾವು ಓದುತ್ತಿರುವ ಕನ್ನಡ ಗೂಗಲ್ ಟ್ರಾನ್ಸ್‌ಲೇಟರ್



ಕಂಪನಿ ಅಧ್ಯಕ್ಷ ಶಿವಾನಂದ ನಾಯಕ್

ಅನುವಾದಿಸಿ ಕೊಟ್ಟಿರುವಂಥದ್ದು. ಸಾರಾಂಶದಲ್ಲಿ ಯಂತ್ರದಿಂದ ಭಾಷಾಂತರಗೊಂಡು ಸೃಷ್ಟಿಯಾದ ಭಾಷೆ! ಅಧಿಕಾರದ ಮದದಲ್ಲಿರುವ, ಕನ್ನಡದ ಗಂಧಗಾಳಿ ಗೊತ್ತಿಲ್ಲದ, ಕನ್ನಡದ ಬಗ್ಗೆ ತೀವ್ರ ಅನಾದರವನ್ನು ಹೊಂದಿರುವ ಐಎಎಸ್ ಅಧಿಕಾರಿಗಳದೇ ಪಾರುಪತ್ಯವಾಗಿಬಿಟ್ಟರೆ ಎಂಥಾ ಅವಾಂತರಗಳನ್ನು ಸೃಷ್ಟಿಸಬಹುದು ಎಂಬುದಕ್ಕೆ ಇದೊಂದು ಸ್ಪಷ್ಟ ನಿದರ್ಶನ.

ಮುಖ್ಯವಾಗಿ ಕನ್ನಡಿಗರಾದ ನಾವು ಕೇಳಲೇಬೇಕಾದ ಪ್ರಶ್ನೆಯೊಂದಿದೆ. ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯೆಂದು ಬಡಾಯಿ ಕೊಚ್ಚುವ ಸರ್ಕಾರಕ್ಕೆ, ತನ್ನ ಒಡೆತನದಲ್ಲಿರುವ ಸಂಸ್ಥೆಯನ್ನು ಪರಿಚಯಿಸುವ ವೆಬ್‌ಸೈಟ್ ಬರಹಗಳನ್ನು ಮೊದಲು ಇಂಗ್ಲಿಷ್‌ನಲ್ಲಿ ಬರೆದು ನಂತರ ಕನ್ನಡಕ್ಕೆ ಅನುವಾದಿಸಬೇಕಾದ ಕರ್ಮವಾದರೂ ಯಾಕೆ ಬಂತು? ನೇರವಾಗಿ ಸಿರಿಗನ್ನಡ ಭಾಷೆಯಲ್ಲಿ ಒಂದು ಕಂಪನಿಯ ಪರಿಚಯ ಬರೆಯಲಾಗದಂಥ ದುಸ್ಥಿತಿ ಕನ್ನಡಿಗರಿಗೆ ಬಂದಿದೆಯೆ?

ಈ ಕಂಪನಿಯ ಚೇರ್ಮನ್ ಆಗಿರುವ ಶಿವಾನಂದ ನಾಯಕ್ ಹಾಗೂ ಡೈರೆಕ್ಟರ್ ಆಗಿರುವ ಕನ್ನಡಿಗ ಐಎಎಸ್ ಅಧಿಕಾರಿ ಕೆ.ಶಿವರಾಂ ಸಹಾ ಕನ್ನಡ ಮರೆತುಬಿಟ್ಟರೆ? ಇಲ್ಲವಾದರೆ ಇಂಥಾ ವಿಕೃತಿ ಹೇಗೆ ಸಾಧ್ಯ?

•ದೊಡ್ಡಿ ಮೂರ್ತಿ

ಒಂದೆಡೆ ಆದಿಚುಂಚನಗಿರಿಗೆ ಉತ್ತರಾಧಿಕಾರಿಯಾಗುವ ದುರಾಶೆ, ಮತ್ತೊಂದೆಡೆ ಕುಂಚಟಿಗರ ಪಟ್ಟವೂ ಕಿತ್ತುಹೋಗುವ ಹತಾಶೆ. ಅಲ್ಲೂ ಸಲ್ಲದೆ ಇಲ್ಲೂ ಸಲ್ಲದೆ ಅಂತರಪಿಶಾಚಿಯಂತಾದ ನಂಜಾವಧೂತರಿಗೆ ಶಾಂತವೀರಸ್ವಾಮಿ ಮತ್ತು ಹನುಮಂತನಾಥರನ್ನು ಮುಂದಿಟ್ಟುಕೊಂಡು ಕುಂಚಟಿಗರ ಮಹಾಮಂಡಲ ಸಮಾವೇಶಕ್ಕಿಳಿದದ್ದು ಬುಡವನ್ನೇ ಅಲ್ಲಾಡಿಸಿಬಿಟ್ಟಿದೆ. ನಂಜಾವಧೂತರೇ ಹುಟ್ಟುಹಾಕಿದ ಕುಂಚಟಿಗ ಅಸ್ತಿತ್ವ ಈಗ ಅವರನ್ನೇ ಕೈಬಿಟ್ಟು ಮುನ್ನಡೆದಿದೆ. ಜೂನ್ 3 ರ ಒಕ್ಕಲಿಗರ ಸಂಘದ ಗುರುವಂದನೆಗೆ ಪಾಪ ನಂಜಾವಧೂತರ ಜೊತೆ ಯಾವ ಕುಂಚಟಿಗ ನರಪಿಳ್ಳೆಯೂ ಇಲ್ಲ!

• ಡಾ. ಸೋಮನಾಥ್


ಬಾಲಗಂ ಸ್ವಾಮಿಗೆ ಕೊನೆಗಾಲದ ಕಷ್ಟ

ಕುಂಚಟಿಗರ ಬಂಡಾಯ

ನಂಜುಕಾರಿದ ನಂಜಾವಧೂತ

ಗುರುವಂದನೆಯ ಮರೆಯಲಿ ಬಿಜೆಪಿ ಭೂತ

ಕುಂಚಟಿಗರು ಬಂಡೆದ್ದಿದ್ದಾರೆ. ತಮ್ಮದೇ ಒಕ್ಕಲಿಗ ಸಮೂಹದ ವಿರುದ್ಧ. ಗೌಡರ ಜಗದ್ಗುರು ಬಾಲಗಂಗಾಧರ ಸ್ವಾಮಿಗೆ ಗುರುವಂದನೆಯ ನೆಪದಲ್ಲಿ ಮುಖ್ಯಮಂತ್ರಿ ಸದಾನಂದ ಗೌಡರನ್ನೂ ಸಾಧ್ಯವಾದರೆ ಬಿಜೆಪಿಯನ್ನೂ ಬಿಗಿದಪ್ಪಿಕೊಳ್ಳುವಂತೆ ಒಕ್ಕಲಿಗರನ್ನು ಯಾಮಾರಿಸುವ ಬೃಹತ್ ಸಮಾವೇಶದ ಬುಡದಲ್ಲೇ ಈಗ ಕುಂಚಟಿಗರ ರಣಕಹಳೆ ಮೊಳಗುತ್ತಿದೆ!



ಮೇ 27 ರ ಭಾನುವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ನೆರೆದ ಸರಿಸುಮಾರು ಒಂದು ಲಕ್ಷದಷ್ಟು ಕುಂಚಟಿಗರ ಆಕ್ರೋಶ, ಹುಮ್ಮಸ್ಸು ಮತ್ತು ಆವೇಶದ ತೀವ್ರತೆಯೇ ಹಾಗಿತ್ತು. ಸದ್ಯಕ್ಕದು ತಣಿಯುವ ಲಕ್ಷಣಗಳಿಲ್ಲ. ಒಬ್ಬ ಬಾಲಗಂಗಾಧರನಾಥರಾಗಲಿ, ನಂಜಾವಧೂತರಾಗಲಿ, ಒಕ್ಕಲಿಗರ ಸಂಘದ ಅಧಿಪತಿಗಳೇ ಆಗಲಿ ಅದನ್ನು ತಡೆಯುವಷ್ಟು ಶಕ್ತರಲ್ಲ. ಕುಂಚಟಿಗರು ಪ್ರತ್ಯೇಕತೆ ಬಯಸುತ್ತಿದ್ದಾರೆ ಮತ್ತು ಅದಕ್ಕಾಗಿ ಬೀದಿಗಿಳಿದಿದ್ದಾರೆ.

ಸೋಕಾಲ್ಡ್ ದಕ್ಷಿಣ ಕನ್ನಡ ಒಕ್ಕಲಿಗ ಸದಾನಂದ ಗೌಡರೇ ಮುಖ್ಯಮಂತ್ರಿಯಾಗಿರುವಾಗ, ರಾಜ್ಯದ ಎರಡನೇ ಬಲಾಢ್ಯ ಜನಾಂಗವೆಂಬ ಹೆಗ್ಗಳಿಕೆಯನ್ನೂ ಧಿಕ್ಕರಿಸಿ, ಒಕ್ಕಲಿಗರೆಂಬ ಹಣೆಪಟ್ಟಿಯಡಿ ದಕ್ಕಬಹುದಾದ ರಾಜಕೀಯ ಪ್ರಾಬಲ್ಯವನ್ನೂ ತಿರಸ್ಕರಿಸಿ ಏಕಾಏಕಿ ಪ್ರತ್ಯೇಕತೆಗೆ ಹಂಬಲಿಸುತ್ತಿರುವ ಕುಂಚಟಿಗರ ಆಕ್ರೋಶಕ್ಕೊಂದು ಕಾರಣ ಇರಲೇಬೇಕಲ್ಲವೆ?

ಅದು ಇಂದು ನಿನ್ನೆಯ ಬೆಳವಣಿಗೆಯೇನಲ್ಲ. ಒಕ್ಕಲಿಗರಲ್ಲಿ ಸಮೂಹ ಪ್ರಜ್ಞೆ ಹುಟ್ಟಿಕೊಂಡು, ತಮ್ಮದೇ ಜಾತಿಯ ಪ್ರತ್ಯೇಕ ಸಂಘ ಕಟ್ಟಿಕೊಂಡು, ತಮ್ಮವರನ್ನೇ ಮಂತ್ರಿ, ಮುಖ್ಯಮಂತ್ರಿಗಳಾಗಿಸಿ ಜನಾಂಗಕ್ಕೊಂದೇ ಮೆಡಿಕಲ್. ಡೆಂಟಲ್ ಕಾಲೇಜುಗಳು ಬಂದು ಯಾವತ್ತು ಕೋಟಿಗಟ್ಟಲೇ ಆದಾಯ ಶುರುವಾಯಿತೋ ಅಲ್ಲಿಂದಲೇ ಇಂಥದೊಂದು ಅಸಹನೆ, ಅಪಸ್ವರದ ಬೀಜವೂ ಮೊಳಕೆಯೊಡೆದಿತ್ತು. ಅದು ಮರಸು ಮತ್ತು ಗಂಗಡಕಾರರ ವಿರುದ್ಧದ ಮಿಕ್ಕೆಲ್ಲಾ ಉಪಜಾತಿಗಳ ಅಸಮಾಧಾನ ಮತ್ತು ಅತೃಪ್ತಿ!

ಮರಸು-ಗಂಗಡಕಾರ!

ಸದ್ಯ ರಾಜ್ಯದ ಸಮಸ್ತ ಒಕ್ಕಲಿಗರನ್ನು ಪ್ರತಿನಿಧಿಸುವ ಮೂರು ಕೇಂದ್ರಗಳ ಪೈಕಿ ಒಂದು ಆದಿಚುಂಚನಗಿರಿ ಮಠವಾದರೆ ಮತ್ತೊಂದು ಒಕ್ಕಲಿಗರ ಸಂಘ. ಮೂರನೆಯ ಶಕ್ತಿಕೇಂದ್ರದಂತಿರುವುದು ಮಣ್ಣಿನ ಮಗ ದೇವೇಗೌಡ ಮತ್ತವರ ಜೆಡಿಎಸ್ ಪಾಳಯ. ಮೇಲುನೋಟಕ್ಕೆ ಇವೆಲ್ಲವೂ ಒಕ್ಕಲಿಗರ ಶಕ್ತಿಕೇಂದ್ರಗಳಂತೆ ಕಂಡರೂ ಒಳಮರ್ಮ ಬೇರೆಯದೇ ಇದೆ. ಇವತ್ತಿಗೂ ಒಕ್ಕಲಿಗರ ಸಂಘವನ್ನು ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿರುವುದು ಹೊಸಕೋಟೆ, ದೇವನಹಳ್ಳಿ ಭಾಗದ ಮರಸು ಒಕ್ಕಲಿಗರು ಮತ್ತು ಮಂಡ್ಯ, ಮೈಸೂರು, ಹಾಸನ ಭಾಗದ ಗಂಗಡಕಾರರು. ಇಡೀ ಜಾತಿಯಾಗಿ ಅಲ್ಲದೆ ಹೋದರೂ ಈ ಜನಾಂಗದ ಕೆಲ ಪುಢಾರಿಗಳೇ ಒಕ್ಕಲಿಗರ ಸಂಘದ ಚುಕ್ಕಾಣಿ ಹಿಡಿದಿದ್ದಾರೆಂಬ ಅಸೂಯೆ ಮಿಕ್ಕೆಲ್ಲಾ ಉಪಜಾತಿಗಳ ನಾಯಕರಿಗಿದೆ. ಹಾಗೇ ಆದಿಚುಂಚನಗಿರಿ ಸ್ವಾಮಿಯೂ ಸೇರಿದಂತೆ ಮಠದ ಟ್ರಸ್ಟು, ಅಧಿಕಾರಿಗಳು, ಶಾಖಾ ಮಠದ ಸ್ವಾಮಿಗಳೆಲ್ಲ ಗಂಗಡಕಾರರೇ ಎಂಬ ಕಟುವಾಸ್ತವದ ಅರಿವೂ ಒಕ್ಕಲಿಗ ಉಪಜಾತಿಗಳಿಗಿದೆ. ಜಾತಿಯಾಗಿ ದೇವೇಗೌಡರು ದಾಸ ಒಕ್ಕಲಿಗರಾದರೂ ಅದೂ ಕೂಡ ಗಂಗಡಕಾರರ ಉಪ ಪಂಗಡವೆ.

ವಿಪರ್ಯಾಸವೆಂದರೆ ಒಕ್ಕಲಿಗ ಸಮೂಹವೊಂದೇ ಸರಿಸುಮಾರು 112 ಉಪಜಾತಿಗಳ, ಒಳಪಂಗಡಗಳ ವಿಶಾಲ ಸರೋವರ. ಗಂಗಡಕಾರ, ಮರಸು, ಮುಸುಕು, ಹಳ್ಳಿಕಾರ, ಕುಂಚಟಿಗ, ನೊಣಬ, ನಾಮಧಾರಿ, ಮಡ್ಡರು, ತುಳಿವ, ಹಾಲಕ್ಕಿ, ಒಕ್ಕಲು, ದಾಸ, ಬಡಗರು, ಹೊಸ ದೇವರು, ಕುಂಬಿ ಚೆರಳು ಕೊಡೋರು, ಅರಮುಡಿ, ನಾಡವಾರ, ಮರಚ, ಊಡಿಗಗೌಡ, ವೆಲ್ಲಾಳ, ಹೆಗಡೆ, ಸರ್ಪ, ಚೋಳ, ಪಾಂಡ್ಯ ಒಕ್ಕಲಿಗ, ಸಮುದ್ರ ಕುಲ, ದೇವನಮಕ್ಕಳು- ಹೀಗೆ ಭೌಗೋಳಿಕ ಪರಿಸರಕ್ಕೆ ತಕ್ಕಂತೆ, ವೃತ್ತಿ, ಆಚಾರ, ಪರಿಸ್ಥಿತಿಗನುಗುಣವಾಗಿ ಜಾತಿ, ಉಪಜಾತಿಗಳಾಗಿ ವಿಂಗಡಿಸಲ್ಪಟ್ಟಿದೆ.

ಚಿಕ್ಕಮಗಳೂರು, ಹಾಸನದ ಕಡೆಯ ಗಂಗಡಕಾರರಲ್ಲೇ ದಾಸ ಮತ್ತು ಮುಳ್ಳು ಉಪಜಾತಿ ವೈರುಧ್ಯವಿದೆ. ಕೋಲಾರ, ದೇವನಹಳ್ಳಿ, ಹೊಸಕೋಟೆಯ ಮರಸು ಗೌಡರ ಆಚಾರವಿಚಾರಕ್ಕೂ ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯದ ಕಡೆಯ ಗಂಗಡಿಕಾರರ ಕಲಾಚಾರಗಳಿಗೂ ವ್ಯತ್ಯಾಸವಿದೆ. ದಕ್ಷಿಣ ಕನ್ನಡದ ಶೆಟ್ಟಿ ಬಂಟರ ಸಂಸ್ಕೃತಿಯೇ ಬೇರೆ, ಕೊಡಗಿನ ಅರೆಭಾಷೆ ಗೌಡರ ಪರಂಪರೆಯೇ ಬೇರೆಯಿದೆ. ತುಮಕೂರಿನ ಗಡಿಭಾಗದಿಂದ ಶುರುವಾಗಿ ತುರುವೇಕೆರೆ, ಗುಬ್ಬಿ ತಿಪಟೂರು ಕಡೆಯ ಚೋಳ ಒಕ್ಕಲಿಗರಿಗೂ ಕೊರಟಗೆರೆ, ಮಧುಗಿರಿ, ಶಿರಾ, ಪಾವಗಡ ಸೇರಿದಂತೆ ಬೆಂಗಳೂರಿನ ಯಲಹಂಕ ಭಾಗದಲ್ಲಿ ನೆಲೆಸಿರುವ ಕುಂಚಟಿಗರಿಗೂ ಭಿನ್ನತೆಯಿದೆ. ಉತ್ತರ ಕನ್ನಡ ಹಾಲಕ್ಕಿ ಒಕ್ಕಲಿಗರು ಹೆಸರಿಗಷ್ಟೇ ಗೌಡರಾದರೂ ಇವತ್ತಿಗೂ ಆದಿವಾಸಿ ಬುಡಕಟ್ಟುಗಳಂತೆ ಅರಣ್ಯವನ್ನಾಶ್ರಯಿಸಿದ್ದಾರೆ. ಹಾಗೆ ಬೆಳಗಾವಿ, ಬೀದರ್ ಭಾಗದ ಕುಡು ಒಕ್ಕಲಿಗರಿಗೂ ಮೈಸೂರು ಪ್ರಾಂತ್ಯದ ಒಕ್ಕಲಿಗರಿಗೂ ಸಂಬಂಧವೇ ಇಲ್ಲವೆಂಬಂತಿದೆ. ಗಂಗಡಿಕಾರರಲ್ಲೇ ಭುಜಣಿಗೆ ಮತ್ತು ಪಟ್ಟೆಗೆಯೆಂಬ ವಿಭಿನ್ನ ಅವಳಿ ಪಂಗಡಗಳಿವೆ.

ಕುರುಡು ಕಾಂಚಾಣ

ಒಕ್ಕಲಿಗರ ಇಂಥ ವೈವಿಧ್ಯತೆ ಮತ್ತು ವಿಭಿನ್ನತೆಯನ್ನು ಒಗ್ಗೂಡಿಸುವ ಪ್ರಯತ್ನ ಮತ್ತು ಮುತ್ಸದ್ದಿತನವಿದ್ದದ್ದು ಕುಂಚಟಿಗ ಒಕ್ಕಲಿಗರ ಸಂಘಕ್ಕೆ ಅಧ್ಯಕ್ಷರಾಗಿದ್ದ ಮರಿಗೌಡ, ಕೆ.ಎಸ್. ರಾಮೇಗೌಡ, ಗುತ್ತಲ ಗೌಡ, ರಾಮಯ್ಯರಂಥ ನಾಯಕರಲ್ಲಿ ಮಾತ್ರ. ಕಾಲಕ್ರಮೇಣ ಅಂಥದೊಂದು ಉದಾತ್ತತೆಯೇ ಮಾಯವಾಯಿತು. ಅದಕ್ಕೆ ಕಾರಣವಾಗಿದ್ದು 1980 ರಲ್ಲಿ ಒಕ್ಕಲಿಗರ ಸಂಘಕ್ಕೊಂದು ಮುಖ್ಯಮಂತ್ರಿ ಗುಂಡೂ ರಾಯರು ಮಂಜೂರು ಮಾಡಿದ ಮೆಡಿಕಲ್ ಕಾಲೇಜು. ಶ್ರೀಕಂಠಯ್ಯನವರ ಕಾಳಜಿಯ ಫಲವಾಗಿ ಒಕ್ಕಲಿಗರ ಸಂಘಕ್ಕೊಂದು ಮೆಡಿಕಲ್ ಕಾಲೇಜು ಮಂಜೂರಾಗಿದ್ದೇ ತಡ ಒಕ್ಕಲಿಗರ ಸಂಘದ ಗುಣಲಕ್ಷಣವೇ ಬದಲಾಯಿತು. ಪ್ರತಿಯೊಂದು ಮೆಡಿಕಲ್ ಸೀಟಿಗೂ ಕೋಟಿ ಲೆಕ್ಕದಲ್ಲಿ ದುಡ್ಡು ಉದುರುವುದು ಗೊತ್ತಾಗಿದ್ದೇ ಪುಢಾರಿಗಳು, ರೌಡಿಗಳು ಸಂಘಕ್ಕೆ ವಕ್ಕರಿಸಿದರು. ಗುತ್ತಲಗೌಡ, ಮರಿಗೌಡ, ವೆಂಕಟಗಿರಿಗೌಡ, ಪಿಳ್ಳೆಭೈರಪ್ಪನಂಥವರ ಬದಲಿಗೆ ಲಿಕ್ಕರ್ ದೊರೆ ಕೆಂಚಪ್ಪಗೌಡನಂಥವರು ಸಂಘದ ಅಧಿಕಾರ ಹಿಡಿದರು. ಅಲ್ಲಿಯತನಕ ಸಂಘದ ನೇತೃತ್ವ ವಹಿಸುತ್ತಿದ್ದ ನಿಷ್ಠಾವಂತರು, ಪ್ರಾಮಾಣಿಕರು, ಜನಾಂಗದ ಕಾಳಜಿಯುಳ್ಳವರೆಲ್ಲ ಕಾಲಕ್ರಮೇಣ ಗೆಲ್ಲುವುದೇ ದುಸ್ತರವಾಯಿತು. ದುಡ್ಡೊಂದೇ ಸಂಘದಲ್ಲಿ ಮುಖ್ಯವಾಗಿ ಜನಾಂಗದ ಕಾಳಜಿ, ವಿದ್ಯೆ, ವಿದ್ವತ್ತು, ಪ್ರಾಮಾಣಿಕತೆ, ಆದರ್ಶಗಳೆಲ್ಲ ಮರೆಯಾಗಿ ಕೊನೆಕೊನೆಗೆ ಸಂಘದ ಡೈರೆಕ್ಟರುಗಳೂ ಜನಾಂಗದ, ಆಸ್ತಿಯಂತಿದ್ದ ಸಂಘದ ಜಮೀನನ್ನೇ ನುಂಗಿ ಹಾಕುವ ಮಟ್ಟಿಗೆ 'ರಿಯಲ್ ಎಸ್ಟೇಟ್' ಕುಲ ಘಾತುಕರಾದರು.



ದೇವರಾಜ್



ಮುರಳೀಧರ ಹಾಲಪ್ಪ

ಇನ್ನು ಆದಿಚುಂಚನಗಿರಿ ಬಾಲ ಗಂಗಾಧರರೂ ಇದಕ್ಕೆ ಹೊರತಾಗಲಿಲ್ಲ. ಮೆಡಿಕಲ್ ಕಾಲೇಜಿನ ಕುರುಡು ಕಾಂಚಾಣಕ್ಕೆ ಅವರೂ ಬಲಿಯಾದರು. ಶ್ರೀಮಂತ ಒಕ್ಕಲಿಗರು, ಅಧಿಕಾರಿಗಳು, ರಿಯಲ್ ಎಸ್ಟೇಟ್ ದಂಧೆಕೋರರ ಮಕ್ಕಳ ಹೊರತಾಗಿ ಯಾವ ಬಡರೈತ ಒಕ್ಕಲಿಗರೆಲ್ಲ ಕಾಸಿಗೆ ಕಾಸು ಸೇರಿಸಿ ಆದಿಚುಂಚನಗಿರಿ ಸಾಮ್ರಾಜ್ಯವನ್ನು ಕಟ್ಟಿದ್ದರೋ; ಅಂತಹ ಯಾವೊಬ್ಬ ಬಡರೈತನ ಮಗನಿಗೂ ಮೆಡಿಕಲ್-ಇಂಜಿನಿಯರಿಂಗ್ ಸೀಟು ಸಿಗಲಿಲ್ಲ. ಒಂದೆಡೆ ಒಕ್ಕಲಿಗರ ಸಂಘ ಮತ್ತೊಂದೆಡೆ ಆದಿಚುಂಚನಗಿರಿ ಮಠಗಳು ಹೇಗೆ ಅಧಿಕಾರಿಗಳು, ಅನುಕೂಲಸ್ಥ ಒಕ್ಕಲಿಗರ ಕೈಗೊಂಬೆಗಳಾದವೋ ಹಾಗೆ ಅಧಿಕಾರಕ್ಕೆ ಬಂದ ದೇವೇಗೌಡ, ಕೃಷ್ಣ ಕುಮಾರಸ್ವಾಮಿ ನಿರ್ಗತಿಕ ಒಕ್ಕಲಿಗರ ಭೂಮಿ ಕಿತ್ತು ಕೆಐಎಡಿಬಿಯ ಶೂಲವಿಟ್ಟಿದ್ದು ಬಿಟ್ಟರೆ ಲಾಭವಾಗಿದ್ದು ಮಾತ್ರ ಇದೇ ಅಧಿಕಾರಿಗಳು ಮತ್ತು ರಿಯಲ್ ಎಸ್ಟೇಟ್ ಒಕ್ಕಲಿಗರಿಗೆ!

ಕುಂಚಟಿಗರ ಬೇಗುದಿ

ಇಂಥ ಪರಿಸ್ಥಿತಿಯಲ್ಲಿ ಹೇಳುಕೇಳುವವರಿಲ್ಲದ ಉಪಜಾತಿಗಳ ಪಾಡು ಅಕ್ಷರಶಃ ಅನಾಥವಾಯಿತು. ಈಗ ಬಂಡೆದ್ದ ಕುಂಚಟಿಗರ ಆಕ್ರೋಶದ ಹಿಂದಿರುವುದೂ ಇದೇ ನಾಯಕಮಣಿಗಳ ಸ್ವಾರ್ಥ ಮತ್ತು ದುರಾಚಾರ. ಇಲ್ಲಿಗೆ ಕೆಲದಿನಗಳ ಹಿಂದಷ್ಟೇ ಪ್ರತ್ಯೇಕ ಮೀಸಲಾತಿ ಬಯಸಿ ಹಳ್ಳಿಕಾರ್ ಒಕ್ಕಲಿಗರು ದನಿಯೆತ್ತಿದಾಗಲೇ ನಾಯಕರಿಗಿದು ಎಚ್ಚರಿಕೆ ಗಂಟೆಯಾಗಬೇಕಿತ್ತು. ರಿಯಲ್ ಎಸ್ಟೇಟ್, ಮೆಡಿಕಲ್ ಸೀಟು, ಅಧಿಕಾರಿಗಳ ವರ್ಗಾವರ್ಗಿಯಲ್ಲೇ ತಲ್ಲೀನರಾಗಿದ್ದ ಪಾಳೆಗಾರರಿಗಿದು ಎಲ್ಲಿ ಅರ್ಥವಾಗಬೇಕು?



...ಂದು ರೆಡ್ಡಿಗಳು, ನಿನ್ನೆ ಹಳ್ಳಿಕಾರರು, ಇಂದು ಕುಂಚಟಿಗರು; ನಾಳೆ...?

...ಇಳಿಗೆ ವರ್ಷದ ಹಿಂದಷ್ಟೇ ಹಳ್ಳಿಕಾರರ ಸಂಘ ಸ್ಥಾಪನೆಗೊಂಡು ಹೇಮಚಂದ್ರ ಸಾಗರ್, ಚಿತ್ರನಟ ವಜ್ರಮುನಿಯವರ ...ಂಧಿಗಳಲ್ಲ ಸೇರಿಕೊಂಡು ಒಕ್ಕಲಿಗರಿಂದ ಪ್ರತ್ಯೇಕತೆ ಘೋಷಿಸಿಕೊಂಡಾಗಲೇ ಒಕ್ಕಲಿಗರ ಸಂಘಕ್ಕೆ ಇದು ...ಕೆಯ ಗಂಟೆಯಾಗಬೇಕಿತ್ತು. ಈ ಬಗ್ಗೆ ಯಾವೊಬ್ಬ ನಾಯಕರೂ ತಲೆಕೆಡಿಸಿಕೊಳ್ಳಲಿಲ್ಲ. ಇದಕ್ಕೂ ಮೊದಲೇ ...ಲಿಂಗಾರೆಡ್ಡಿ, ಕಂಟ್ರ್ಯಾಕ್ಟರ್‌ಗಳಾದ ಜಯರಾಮ ರೆಡ್ಡಿ, ನಾರಾಯಣರೆಡ್ಡಿ ಮುಂತಾದವರು ಸೇರಿಕೊಂಡು ...ತನ ರೆಡ್ಡಿ ಜನಸಂಘಕ್ಕೆ ಜೀವಕೊಟ್ಟು ಒಕ್ಕಲಿಗರ ಕೋಟೆಗೆ ಬಿರುಕು ತಂದಾಗಿತ್ತು, ಆಗಲೂ ಒಕ್ಕಲಿಗ ...ಯಕರಿಗಿದು ಅಪಾಯವೆನಿಸಲಿಲ್ಲ.

...ಇವತ್ತು ಕರ್ನಾಟಕದ ರೆಡ್ಡಿಗಳಿಗೆ ಆಂಧ್ರದ ರೆಡ್ಡಿಗಳೇ ಪರಮಾಪ್ತರು. ಅದರಲ್ಲೂ ಬಳ್ಳಾರಿಯ ಗಣಿ ಖದೀಮ ...ರ್ದನ ರೆಡ್ಡಿಯಂಥವರನ್ನು ಬೆಂಗಳೂರಿನ ರೆಡ್ಡಿಗಳು ಅಪ್ಪಿಕೊಂಡದ್ದು ಜನಾಂಗಕ್ಕೊದಗಿದ ವಿಪತ್ತೆಂದು ಯಾವ ...ಯಕರೂ ಪರಿಗಣಿಸಲಿಲ್ಲ. ಈಗ ಕುಂಚಟಿಗರು ಇದೇ ದಾರಿ ಹಿಡಿದಿದ್ದಾರೆ. ಮುಂದೆ ಇನ್ನಾವ ಜಾತಿಗಳು ಈ ...ರ್ಗ ಅನುಸರಿಸಬಹುದೊ ಗೊತ್ತಿಲ್ಲ. ದೂರದೃಷ್ಟಿ ಮತ್ತು ಮುತ್ಸದಿತನವನ್ನು ಯಾವ ಒಕ್ಕಲಿಗ ಸ್ವಾಮಿಯಾಗಲಿ, ...ಯಕನಾಗಲಿ ಮೈಗೂಡಿಸಿಕೊಳ್ಳದೇ ಹೋದರೆ, ಒಕ್ಕಲಿಗರ ಸಂಘವನ್ನು ರಿಯಲ್ ಎಸ್ಟೇಟ್ ಖದೀಮರಿಂದ ...ಪದೇ ಹೋದರೆ ಕೊನೆಗೆ ಮರಸು ಅಥವಾ ಗಂಗಡಕಾರರ ಹೊರತಾಗಿ ಯಾವ ಜಾತಿ ತಾನೇ ಒಕ್ಕಲಿಗರಾಗಿ ...ಯಲು ಸಾಧ್ಯ?

...ಈ ಬಗ್ಗೆ ತಲೆಕೆಡಿಸಿಕೊಳ್ಳುವವರ್ಯಾರು?



...ಗ ಕುಂಚಟಿಗರು ಬೀದಿಗಿಳಿದಿದ್ದಾರೆ. ಹಾಗೆ ...ವರೆ ಇದು ನಿನ್ನೆ ಮೊನ್ನೆಯ ಬೇಗುದಿಯೇನಲ್ಲ, ...ರ ಅಸಂಖ್ಯಾತ ಒಳಪಂಗಡಗಳು, ಉಪಜಾತಿಗಳಿಗೆ ...ಸಿದರೆ ಕುಂಚಟಿಗರು ತೀರ ವಿಭಿನ್ನ ಸಂಪ್ರದಾಯ ...ತುಮಕೂರು, ಚಿತ್ರದುರ್ಗ ಸೇರಿದಂತೆ ಮಧುಗಿರಿ, ...ಗೆರೆ, ಶಿರಾ, ಕಳ್ಳಂಬೆಳ್ಳ ಮತ್ತು ಪಾವಗಡದ ಕೆಲ ...ಲ್ಲಿ ಕುಂಚಟಿಗರದ್ದೇ ಪ್ರಾಬಲ್ಯವಿದೆ. ಬೆಂಗಳೂರಿನ ...ಕ ಭಾಗದಲ್ಲಿ ಗಣನೀಯವಾಗಿರುವ ಕುಂಚಟಿಗರಲ್ಲಿ ...ರ ಜಾಯಮಾನಕ್ಕೆ ತೀರ ವ್ಯತಿರಿಕ್ತ ... 48 ಗೋತ್ರಗಳಿವೆ. ರಾಜೇನವರು, ...ವರು, ಜಲದೇನವರು, ಬಸಲೆಯ ...ಳಿಕಲ್ಲಿನವರು, ದೊಮ್ಮಗುತ್ತಿಯವ್ರು- ... ತರಹೇವಾರಿ ಗೋತ್ರಗಳಲ್ಲಿ ...ಸಲ್ಪಡುವ ಕುಂಚಟಿಗರಲ್ಲೇ ಒಂದು ...ಜ ಕಾಲಕ್ಕೇ ಬಸವಣ್ಣನವರ ಪ್ರಭಾವ ...ಗಿ ವೀರಶೈವ ಧರ್ಮವನ್ನಪ್ಪಿದೆ. ... ವೀರಶೈವ ಕುಂಚಟಿಗರೆಂದೋ, ...ರಿ ಕುಂಚಟಿಗರೆಂದೋ ಕರೆಯುತ್ತಾರೆ. ...ಥ ವೀರಶೈವ ಕುಂಚಟಿಗರಿರುವುದು ...ಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ...ರ್ಗ ಜಿಲ್ಲೆಯ ಹೊಳಲ್ಕೆರೆ, ಹೊಸದುರ್ಗ ಭಾಗದಲ್ಲಿ. ...ರ್ಗದ ಮುರುಘಾ ಶಿವಶರಣರು ಜಾತಿ-ಉಪಜಾತಿ ...ಬ್ಬ ಸ್ವಾಮೀಜಿಯನ್ನು ಹುಟ್ಟುಹಾಕುವ ಮೂಲಕ ...ಪ್ರಯೋಗವೊಂದಕ್ಕೆ ಕೈಯಿಟ್ಟರಲ್ಲ; ಹಾಗೇ ವೀರಶೈವ ಕುಂಚಟಿಗರಿಗೆಂದು ಸೃಷ್ಟಿಸಿದ್ದು ಹೊಸದುರ್ಗದ ಒಪ್ಪತ್ತಿನ ಮಠದ ಶಾಂತವೀರ ಸ್ವಾಮಿಯನ್ನು.

ಹೀಗೆ ಮುರುಘಾ ಶರಣರು ಶಾಂತವೀರ ಸ್ವಾಮೀಜಿಯನ್ನು ಕುಂಚಟಿಗ ವೀರಶೈವರಿಗೆಂದೇ ಹರಿಬಿಡುವುದಕ್ಕೂ ಕಾರಣವಿತ್ತು, ಅದು ಪಟ್ಟನಾಯಕನಹಳ್ಳಿಯ ಗುರುಗುಂಡೇಶ್ವರ ಮಹಾಸಂಸ್ಥಾನ ಮಠದ ನಂಜಾವಧೂತರು!

ಶಾಂತವೀರಸ್ವಾಮೀಜಿ ಸಸ್ಯಾಹಾರಿ ಕುಂಚಟಿಗರ ಸಂಘಟನೆಗಿಳಿಯುವುದಕ್ಕೂ ಎರಡು ವರ್ಷದ ಮೊದಲೇ ನಂಜಾವಧೂತರ ಉದ್ಭವವಾಗಿತ್ತು. ಆದಿಚುಂಚನಗಿರಿ ಬಾಲಗಂಗಾಧರನಾಥರಿಂದ ದೀಕ್ಷೆ ಪಡೆದು ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಪೀಠ ಹಿಡಿದ ನಂಜಾವಧೂತರಿಗೆ ತಾನು ಬಾಲಗಂಗಾಧರನಾಥರಂತೆ ನಿರಂಕುಶ ಪೀಠಾಧಿಪತಿಯಾಗುವ ದುರಾಸೆ. ಹಾಗಂತ ಆದಿಚುಂಚನಗಿರಿ ಸ್ವಾಮಿಯನ್ನು ಹಿಂದಿಕ್ಕುವ ಛಾತಿ ಬೇಕಲ್ಲ, ಅದಕ್ಕೆಂದು ನಂಜಾವಧೂತರು ಹುಟ್ಟು ಹಾಕಿದ್ದು ಕುಂಚಟಿಗ ಪ್ರತ್ಯೇಕತೆಯನ್ನು.



ಶ್ರೀ ಶ್ರೀ ಶ್ರೀ ಶಾಂತವೀರ ಮಹಾಸ್ವಾಮಿಗಳು

ನಂಜಾವ ಧೂತ

ತಾನು ಕುಂಚಟಿಗರ ಜಗದ್ಗುರುವೆಂದೂ ತನಗೆ ಆದಿಚುಂಚನಗಿರಿಯ ಅಂಕೆಯೇ ಇಲ್ಲವೆಂದೂ, ಕುಂಚಟಿಗರಿಗೆ ಒಕ್ಕಲಿಗರಿಂದ ಅಪಾರ ಅನ್ಯಾಯವಾಗಿದೆಯೆಂದೂ ಕುಂಚಟಿಗರೆಲ್ಲ ಒಂದಾಗಬೇಕೆಂದು; ಬೊಬ್ಬೆ ಶುರುವಿಟ್ಟದ್ದೇ ನಂಜಾವಧೂತರು. ಒಂದು ಹಂತದಲ್ಲಿ ಯಶಸ್ವಿಯೂ ಆದರು. ಶಿರಾ, ಹಿರಿಯೂರು, ಮಧುಗಿರಿ, ಕೊರಟಗೆರೆ, ಪಾವಗಡದಂಥ ಊರುಗಳಲ್ಲಿ ಕುಂಚಟಿಗ ಮಹಾಮಂಡಲದ ಶಾಖೆಗಳಾದವು. ಕುಂಚಟಿಗರ ಹಾಸ್ಟೆಲ್, ಕುಂಚಟಿಗ ಸಮುದಾಯ ಭವನಗಳ ಉದ್ಘಾಟನೆಗೆ ನಂಜಾವಧೂತರನ್ನೇ ಕರೆದರು. ರಾಜಕೀಯವಾಗಿ ಕಳ್ಳಂಬೆಳ್ಳ, ಹಿರಿಯೂರು, ಶಿರಾ, ಕೊರಟಗೆರೆ, ಮಧುಗಿರಿಗಳಲ್ಲಿ ನಂಜಾವಧೂತರಿಗೆ ಪ್ರಾಮುಖ್ಯತೆ ಬಂತು. ಬೆಂಗಳೂರಿನ ಅನೇಕ ಕಡೆಗಳಲ್ಲಿ ಸಾಮಾನ್ಯ ಒಕ್ಕಲಿಗರೂ ಆದಿಚುಂಚನಗಿರಿ ಸ್ವಾಮಿಗಳ ಜೊತೆಜೊತೆಗೇ ನಂಜಾವಧೂತರಿಗೆ ವೇದಿಕೆ ಕೊಟ್ಟರು. ಒಂದು ಹಂತದಲ್ಲಿ ಒಕ್ಕಲಿಗರಿಗೆ ವ್ಯತಿರಿಕ್ತವಾಗಿ ಕುಂಚಟಿಗರು ಸಾಂಸ್ಕೃತಿಕ ಸಾಂಜಾಗೃತಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಾರಣರಾಗಿದ್ದ ನಂಜಾವಧೂತರಿಗೆ ದುರಾಶೆ, ಮಹತ್ವಾಕಾಂಕ್ಷೆಯ ಜೊತೆಜೊತೆಗೆ ಚಿತ್ರವಿಚಿತ್ರ ಖಯಾಲಿಗಳಿದ್ದವು. ಸನ್ಯಾಸದ ವಿರುದ್ಧವಾಗಿ ವಿನಾಕಾರಣ ಮುಖಕ್ಕೆ ಪೌಡರ್ ಮೆತ್ತಿಕೊಳ್ಳುವುದು, ತುಟಿಗೆ ಲಿಪ್‌ಸ್ಟಿಕ್ ಹಚ್ಚುವುದು, ತುಮಕೂರಿನ ಡೆಂಟಿಸ್ಟರೊಬ್ಬರನ್ನು ಹಿಡಿದು ಹಲ್ಲುಗಳಿಗೆ ಪಾಲಿಶ್ ಮಾಡಿಸುವುದು, ಜೊತೆಗೆ ಬಾಲಗಂಗಾಧರರ ನಂತರ ತಾನೇ ಆದಿಚುಂಚನಗಿರಿ ಮಠದ ಉತ್ತರಾಧಿಕಾರಿಯೆಂದು ಭೋಂಗು ಬಿಡುವುದು!



ಶ್ರೀ ಶ್ರೀ ಶ್ರೀ ಹನುಮಂತನಾಥ ಮಹಾಸ್ವಾಮಿಗಳು

ಇದೇ ಹೊತ್ತಿಗೆ ಹೊಸದುರ್ಗದಲ್ಲಿ ತಲೆ ಎತ್ತಿದ ಶಾಂತವೀರ ಸ್ವಾಮಿ ಮಹಾ ಮಹತ್ವಾಕಾಂಕ್ಷಿ ಮತ್ತು ಸಂಘಟನಾ ಚತುರ. ಮುರುಘಾಮಠದ ಆಡಳಿತಾಧಿಕಾರಿಯಾಗಿದ್ದ ಎಸ್.ಕೆ. ಬಸವರಾಜನ್‌ರ ಪತ್ನಿ ಸೌಭಾಗ್ಯರಿಗೆ ಶಾಂತವೀರ ಸಮೀಪದ ಸಂಬಂಧಿ ಕೂಡ. ಯಾವ ವೇಗದಲ್ಲಿ ಶಾಂತವೀರ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಭಾಗದ ವೀರಶೈವ ಕುಂಚಟಿಗರನ್ನು ಸಂಘಟಿಸಿದರೆಂದರೆ ಮುರುಘಾ ಮಠದಿಂದ ಹೊರಬಿದ್ದು ಅದೇ ಹೊಸದುರ್ಗದಲ್ಲಿ ಶ್ರೀಕುಂಚಟಿಗ ಮಹಾಸಂಸ್ಥಾನ ಮಠ ಸ್ಥಾಪಿಸಿಬಿಟ್ಟರು. ಒಂದೆಡೆ ಶಾಂತವೀರರು ದಾವಣಗೆರೆ, ಚಿತ್ರದುರ್ಗಗಳ ಸಸ್ಯಾಹಾರಿ ಕುಂಚಟಿಗರ ಪಾಲಿಗೆ ಪ್ರಶ್ನಾತೀತ ನಾಯಕರಾಗುತ್ತಿದ್ದಂತೆಯೇ ಮತ್ತೊಂದೆಡೆ ತಲೆ ಎತ್ತಿದ್ದು ಹನುಮಂತನಾಥ ಸ್ವಾಮಿ.

ಕೊರಟಗೆರೆಯ ಎಲೆರಾಂಪುರದಲ್ಲಿ ಕುಂಚಟಿಗರ ಮಹಾಮಂಡಳಿಯ ಅಧ್ಯಕ್ಷ ದೇವರಾಜಯ್ಯ ಹನುಮಂತನಾಥರಿಗೆಂದೇ ಪ್ರತ್ಯೇಕ ಮಠ ಕಟ್ಟಿಸಿಕೊಟ್ಟರು. ಅದಕ್ಕೂ ಕುಂಚಟಿಗ ಮಹಾಸಂಸ್ಥಾನ ಮಠವೆಂಬ ಹೆಸರೇ ಇಟ್ಟರು. ಮಾಂಸಾಹಾರಿ ಕುಂಚಟಿಗರಿಗಾಗಿ ಎಲೆರಾಮಪುರದ ಹನುಮಂತನಾಥ ಮತ್ತು ಸಸ್ಯಾಹಾರಿ ಕುಂಚಟಿಗರಿಗಾಗಿ ಹೊಸದುರ್ಗದ ಶಾಂತವೀರಸ್ವಾಮಿ ತಲೆಎತ್ತಿದ್ದೇ ನಂಜಾವಧೂತರ ಹೊಟ್ಟೆಯಲ್ಲಿ ಖಾರ ಕಿವುಚಿದಂತಾಯ್ತು. ಒಂದೆಡೆ ಆದಿಚುಂಚನಗಿರಿಗೆ ಉತ್ತರಾಧಿಕಾರಿಯಾಗುವ ದುರಾಶೆ ಮತ್ತೊಂದೆಡೆ ಕುಂಚಟಿಗರ ಪಟ್ಟವೂ ಕಿತ್ತು ಹೋಗುವ ಹತಾಶೆ. ಅಲ್ಲೂ ಸಲ್ಲದೆ ಇಲ್ಲೂ ಸಲ್ಲದೆ ಅಂತರಪಿಶಾಚಿಯಂತಾದ ನಂಜಾವಧೂತರಿಗೆ ಶಾಂತವೀರ ಸ್ವಾಮಿ ಮತ್ತು ಹನುಮಂತನಾಥರನ್ನು ಮುಂದಿಟ್ಟುಕೊಂಡು ಕುಂಚಟಿಗರ ಮಹಾಮಂಡಲ ಸಮಾವೇಶಕ್ಕಿಳಿದದ್ದು ಬುಡವನ್ನೇ ಅಲ್ಲಾಡಿಸಿಬಿಟ್ಟದೆ.

ಮೇ 27 ರ ಅರಮನೆ ಮೈದಾನದ ಕುಂಚಟಿಗರ ಸಮಾವೇಶಕ್ಕೆ ತಾನು ಬರುವುದಿಲ್ಲ ಎಂದೇ ಮುನಿಸಿ ಕೊಂಡು ಕೊನೆಗಳಿಗೆಯಲ್ಲಿ ಬಂದು ಬೆಂಬಲಿಗರ ಹಿಂಡನ್ನೂ ಕರೆತಂದು ದೊಂಬಿ ಎಬ್ಬಿಸಿದ್ದೂ ಅಲ್ಲದೆ ಮರುದಿನ ಪತ್ರಿಕಾಗೋಷ್ಠಿ ಕರೆದು ಒಕ್ಕಲಿಗ ಸಮೂಹವನ್ನು ಒಡೆಯುವ ಕುತಂತ್ರ ನಡೆದಿದೆಯೆಂದು ಬೊಬ್ಬೆಯಿಟ್ಟ ನಂಜಾವಧೂತರಿಗೆ ತಾನೇ ಹುಟ್ಟುಹಾಕಿದ ಕುಂಚಟಿಗ ಪ್ರತ್ಯೇಕವಾದದ ನೆನಪೇ ಇಲ್ಲ. ನಂಜಾವಧೂತರೇ ಹುಟ್ಟುಹಾಕಿದ ಕುಂಚಟಿಗ ಅಸ್ತಿತ್ವ ಈಗ ಅವರನ್ನೇ ಕೈಬಿಟ್ಟು ಮುನ್ನಡೆದಿದೆ. ಜೂನ್ 3 ರ ಒಕ್ಕಲಿಗರ ಸಂಘದ ಗುರುವಂದನೆಗೆ ಪಾಪ ನಂಜಾವಧೂತರ ಜೊತೆ ಯಾವ ಕುಂಚಟಿಗ ನರಪಿಳ್ಳೆಯೂ ಇಲ್ಲ!

ಮುಖ್ಯಮಂತ್ರಿಯ ದುಡ್ಡು, ಅಶೋಕ್ ಬಸ್ಸು, ಬಚ್ಚೇಗೌಡರ ಬಂಟರು

ಗುರುವಂದನೆಯೋ ಬಿಜೆಪಿ ಮೇಳವ್ರೋ?

...ಜೂನ್ 3 ರಂದು ಆದಿಚುಂಚನಗಿರಿ ಬಾಲಗಂಗಾಧರನಾಥ ಸ್ವಾಮಿಗೆ ...ವಂದನೆಯಂತೆ!

...ಪ್ರಶ್ನೆಯೆಂದರೆ ಏಕಾಏಕಿ ಬಾಲಗಂ ಸ್ವಾಮಿಗೆ ಗುರುವಂದನೆ ಸಲ್ಲಿಸಬೇಕೆಂಬ ...ತ್ತು ಒಕ್ಕಲಿಗರ ಸಂಘಕ್ಕೆ ಹುಟ್ಟಿಕೊಂಡಿದ್ದೇಕೆ? 60 ವರ್ಷ ತುಂಬಿದ ...ಕ್ತ ಷಷ್ಟ್ಯಬ್ಧಿ ನಡೆಸುವುದು ಸರ್ವೇಸಾಮಾನ್ಯ. ಪೀಠಾಧಿಕಾರ ಹಿಡಿದದ್ದಕ್ಕೆ ...ವರ್ಷ ತುಂಬಿದ ಪೀಠಾರೋಹಣ ಸುವರ್ಣ ಮಹೋತ್ಸವ ನಡೆಸಿದ್ದೂ ...ಿ. ಗುರುವಂದನೆಗೆಂದೇ ನಿರ್ದಿಷ್ಟ ಧಾರ್ಮಿಕ ಮುಹೂರ್ತವೆಂದಿಲ್ಲ. ...ತ್ಯ ಭಕ್ತಾದಿಗಳು ಕಾಣಿಕೆಯಿಟ್ಟು ಕಾಲಿಗೆ ಬಿದ್ದರೆಂದರೆ ಅದೇ ಗುರುವಂದನೆ. ...ಕೂಲಸ್ಥರು ಮನೆಗೆ ಕರೆದು ಪಾದಕಾಣಿಕೆ ಕೊಡುತ್ತಾರೆ, ...ಕೂಲವಿಲ್ಲದವರು ಮಠಕ್ಕೇ ಬಂದು ಕಾಲಿಗೆರುತ್ತಾರೆ. ...ಎತ್ತಿಂದೆತ್ತ ಲೆಕ್ಕ ಹಾಕಿದರೂ ಜೂನ್ 3 ರ ಅರಮನೆ ...ದಾನದ ಗುರುವಂದನೆಗೆ ಆಧ್ಯಾತ್ಮಿಕ ಕಾರಣವಾಗಲಿ, ...ರ್ಮಿಕ ಅನಿವಾರ್ಯತೆಯಾಗಲಿ ಕಾಣಿಸುತ್ತಿಲ್ಲ. ...ಸಾಕಾರಣ ರೂಢಿಯಲ್ಲೇ ಇಲ್ಲದ ವಿಚಿತ್ರ ಗುರುವಂದನೆ ...ಲಿಗರ ಸಂಘಕ್ಕಾಗಲಿ, ಆದಿಚುಂಚನಗಿರಿ ಸ್ವಾಮಿಗಾಗಲಿ ... ಇರಲಿಲ್ಲ. ಆದರೂ ಅಂಥಾದ್ದೊಂದು ಅತಾರ್ಕಿಕ, ...ಬದ್ಧ ಸಮಾವೇಶವನ್ನು ಹುಟ್ಟು ಹಾಕಲೇಬೇಕಾದ ...ರ್ಹ ಮಂತ್ರಿ ಅಶೋಕ್ ಮತ್ತು ಒಕ್ಕಲಿಗರ ಸಂಘದ ... ಅಧ್ಯಕ್ಷ ಕೆಂಚಪ್ಪ ಗೌಡನಿಗಿತ್ತು.



...ದೇವೇಗೌಡ, ಕುಮಾರಸ್ವಾಮಿ, ಕೃಷ್ಣ ಅಂಬರೀಷ್, ...ಯಾತೆ ತಾನು ಕೂಡ ಒಕ್ಕಲಿಗರ ಸಾರ್ವತ್ರಿಕ ನಾಯಕನಾಗಬೇಕೆನ್ನುವ ...ಕೆಯ ಹಪಾಹಪಿ ಅಶೋಕ್‌ಗಿದೆ. ಏನೇ ಲಗಾಟಿ ಹೊಡೆದರೂ ...ಿ ಮತ್ತು ಕೀಟು ಜಾಯಮಾನದ ಅಶೋಕ್‌ಗೆ ಸಾರಾಸಗಟಾಗಿ ಒಕ್ಕಲಿಗರು ...ಸೋಲುವುದು ಕಷ್ಟವೆ. ಹಿಂದೆ ಯಡ್ಡಿ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲೇ ...ೋಕ್ ಈ ತರಹದ ರ‍್ಯಾಲಿ ಮಾಡಿಸಿ ಅದರಲ್ಲಿ ತಾನು ಮಿಂಚುವ ...ಸಿ ಹೆಡೆಯುತ್ತಿತ್ತು, ಒಕ್ಕಲಿಗರ ಸಂಘವಾಗಲಿ, ಆದಿಚುಂಚನಗಿರಿ ...ಗಲಿ ಅದಕ್ಕೆ ಸೊಪ್ಪು ಹಾಕದ ಕಾರಣ ಆ ಬಯಕೆ ಸುಪ್ತಾವಸ್ಥೆಯಲ್ಲಿಯೇ ...ತ್ತು, ಇದಕ್ಕೆ ಮರುಜೀವ ಬಂದಿದ್ದು ಸದಾನಂದ ಗೌಡ ...ಮಂತ್ರಿಯಾಗಿ ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪ ಗೌಡ ಡ್ರಾಪ್‌ಔಟ್ ... ಹಗರಣದಲ್ಲಿ ಸಿಲುಕಿಬಿದ್ದ ನಂತರವೇ. ...ಸದ್ಯ, ಮುಖ್ಯಮಂತ್ರಿ ಸದಾನಂದ ಗೌಡರ ಕುರ್ಚಿ ಪ್ರತಿಕ್ಷಣಕ್ಕೊಮ್ಮೆ ...ತ್ತಿದೆ. ಅದಕ್ಕೆ ಕಾರಣಕರ್ತರಾದ ಯಡ್ಡಿಗೊಂದು ಫೇಸ್ ಮತ್ತು ...ಾ ದಾಳಿಯ ವಿರುದ್ಧ ಗುರಾಣಿಯಾಗಿ ಸದಾನಂದ ಗೌಡರಿಗಿರುವುದು ...ಗ ಬೆಂಬಲದ ರಕ್ಷಣೆಯೊಂದೆ. ಮುಖ್ಯಮಂತ್ರಿಯ ಈ ಅತಂತ್ರಸ್ಥಿತಿಯನ್ನು ಬಳಸಿಕೊಂಡು ತಾನು ಬಿಜೆಪಿ ಪಾಳಯದ ಏಕಮೇವಾದ್ವಿತೀಯ ಒಕ್ಕಲಿಗ ನಾಯಕನಾಗುವುದು ಅಶೋಕ್ ಹುನ್ನಾರ. ಹೇಗೂ ದುಡ್ಡುಕಾಸಿನ ವ್ಯವಸ್ಥೆಗೆ ಸದಾನಂದ ಗೌಡರೇ ಮೇಲೆ ಬಿದ್ದು ಏರ್ಪಾಡು ಮಾಡುತ್ತಾರೆ.

ಮುಖ್ಯಮಂತ್ರಿಯಿಂದ ಸಾಧ್ಯವಾದಷ್ಟು ದುಡ್ಡು ಕಿತ್ತೂ ಸಮಾವೇಶದಲ್ಲಿ ತಾನು ವಿಜೃಂಭಿಸಿಬಿಟ್ಟರಾಯ್ತು. ಸದಾನಂದ ಗೌಡರಿಗೊಂದು ಜಾತಿ ಗುರಾಣಿಯನ್ನು ಕಲ್ಪಿಸಿದಂತಾಯ್ತು. ಮುಖ್ಯಮಂತ್ರಿ ವಿರುದ್ಧ ಯಡ್ಡಿಯನ್ನು ಮೆತ್ತಗಾಗಿಸಲು ಒಕ್ಕಲಿಗ ಸಮೂಹವನ್ನು ರಕ್ಷಾಕವಚವಾಗಿ ಪ್ರಯೋಗಿಸಿದ ಹಾಗೂ ಆಯ್ತು. ಅಂತಿಮವಾಗಿ ಜಾತಿಯ ಕಾರಣಕ್ಕೆ ಬಿಜೆಪಿಯನ್ನು ಸಹಿಸಿಕೊಳ್ಳಬೇಕೆಂಬ ಮನಸ್ಥಿತಿಗೆ ಒಕ್ಕಲಿಗರನ್ನು ಪಳಗಿಸಿದಂತಾಯ್ತು. ಇದೆಲ್ಲದರ ಒಟ್ಟು ಪರಿಣಾಮವಾಗಿ ತಾನು ಬಿಜೆಪಿ ಪಾಳಯದಲ್ಲಿ ಏಕಮೇವಾದ್ವಿತೀಯ ಒಕ್ಕಲಿಗ ನಾಯಕನಾಗಿ ಹೊರಹೊಮ್ಮಿದಂತಾಯ್ತು.

ಹೀಗೆ ಒಂದೇ ಕಲ್ಲಿಗೆ ಹಲವು ಕಾಯಿ ಉದುರಿಸುವ ಅಶೋಕ್ ಷಡ್ಯಂತ್ರಕ್ಕೆ ಕೈಜೋಡಿಸಿದ್ದು ಒಕ್ಕಲಿಗರ ಸಂಘದ ಕಳಂಕಿತ ಅಧ್ಯಕ್ಷ ಕೆಂಚಪ್ಪ ಗೌಡ ಮತ್ತು ಅದಕ್ಕೆ ಕುಮ್ಮಕ್ಕಾಗಿ ನಿಂತಿದ್ದು ಹೊಸಕೋಟೆಯ ಬಚ್ಚೇಗೌಡ!

ಸದ್ಯ ಮಂತ್ರಿ ಬಚ್ಚೇಗೌಡರ ತಮ್ಮ ಗೋಪಾಲಗೌಡ ಮತ್ತು ಚೇಲಾ ಹುಲ್ಲೂರು ಮಂಜನೇ ಇಡೀ ಒಕ್ಕಲಿಗ ಸಂಘವನ್ನು ನಿಯಂತ್ರಿಸುತ್ತಾರಾದ್ದರಿಂದ ಇಂಥದ್ದು ಅಸಾಧ್ಯವೇನಲ್ಲ ಯಾವ ಕ್ಷಣದಲ್ಲಾದರೂ ಡ್ರಾಪ್‌ಔಟ್ ಸೀಟ್ ವಂಚನೆಯಲ್ಲಿ ಜೈಲುಪಾಲಾಗುವ ಆತಂಕ ಕೆಂಚಪ್ಪ ಗೌಡನಿಗೆ. ಕೆಂಚಪ್ಪ ಗೌಡನ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ನಿರೀಕ್ಷಣಾ ಜಾಮೀನಿನಲ್ಲಿ ಆತ ಜೈಲುಪಾಲಾಗುವುದು ತಪ್ಪಿದೆ. ಕೇಸು ದುರ್ಬಲಗೊಳಿಸದೇ ಹೋದರೆ ಬಚಾವಾಗುವುದು ಕಷ್ಟ. ಅದಕ್ಕೆ ಗೃಹಮಂತ್ರಿಯ ಕೃಪೆ ಬೇಕೆಂದರೆ ಸಂಘವನ್ನು ಸರ್ಕಾರಕ್ಕೆ ಅಡುವಿಡದೇ ವಿಧಿಯಿಲ್ಲ.



ಸದ್ಯ ನಾರಾಯಣಗೌಡ ಸಮಾವೇಶದ ವೇದಿಕೆಯ ಹೊಣೆ ಹೊತ್ತರೆ ಮಂತ್ರಿ ಅಶೋಕ್ ಬಸ್ಸು, ಲಾರಿಗಳನ್ನು ಒದಗಿಸಿಕೊಡುತ್ತಿದ್ದಾರೆ. ಆದಿಚುಂಚನಗಿರಿ ಮಠವೇ ಊಟೋಪಚಾರದ ಹೊಣೆ ಹೊತ್ತಿದೆ. ಇಷ್ಟಕ್ಕೆಲ್ಲಾ ವಿಟಮಿನ್ 'ಎಮ್' ಎಂದರೆ ದುಡ್ಡೂಕಾಸಿನ ಅನುಕೂಲ ಕಲ್ಪಿಸುತ್ತಿರುವುದು ಮುಖ್ಯಮಂತ್ರಿ ಸದಾನಂದ ಗೌಡರೇ.

ಒಟ್ಟಾರೆ ಇದೊಂದು ಬಿಜೆಪಿ ಸಮಾವೇಶವಲ್ಲದೆ ಒಕ್ಕಲಿಗರ ಕಾರ್ಯಕ್ರಮವಲ್ಲ ಎಂಬುದು ಸಮಸ್ತ ಒಕ್ಕಲಿಗ ಸಮೂಹಕ್ಕೆ ಚೆನ್ನಾಗಿ ಅರ್ಥವಾಗಿದೆ. ದೇವೇಗೌಡ, ಕುಮಾರಸ್ವಾಮಿ, ಡೀಕೆ ಆದಿಯಾಗಿ ಯಾವೊಬ್ಬ ನಾಯಕರಿಗೂ ಈ ಬಗ್ಗೆ ಆಸಕ್ತಿಯಿಲ್ಲ. ಕೇಂದ್ರ ಮಂತ್ರಿ ಕೃಷ್ಣ ಬರುವುದೇ ಕಷ್ಟವಂತೆ. ಮೈಸೂರು, ಮಂಡ್ಯ, ಹಾಸನ ಭಾಗದ ಒಕ್ಕಲಿಗರಲ್ಲಿ ಸಮಾವೇಶದ ಬಗ್ಗೆಯೇ ಅಸಹ್ಯವಿದೆ. ಇದೆಲ್ಲವೂ ಅಶೋಕ್‌ಗೆ ಗೊತ್ತಿಲ್ಲವೆಂದಿಲ್ಲ. ಮೀಸೆ ಮಣ್ಣಾಗಬಾರದಲ್ಲ; ಕೋಲಾರ, ಹೊಸಕೋಟೆ, ದೇವನಹಳ್ಳಿ ಭಾಗದಿಂದ ಸಾಧ್ಯವಾದಷ್ಟು ಮರಸು ಒಕ್ಕಲಿಗರನ್ನು ಬಾಡಿಗೆಗೆ ತಂದಾದರೂ ಜೂನ್ 3 ರ ಗುರುವಂದನೆಯನ್ನು ಯಶಸ್ವಿಗೊಳಿಸುವುದು ಅಶೋಕ್, ಬಚ್ಚೇಗೌಡ, ಕೆಂಚಪ್ಪ ಗೌಡ ಜೋಡಿಯ ಹುನ್ನಾರ.

ಜೊತೆಗೆ ದಾಸರಹಳ್ಳಿ ಮುನಿರಾಜು, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ, ಕೆ.ಆರ್. ಪುರದ ನಂದೀಶ್ ರೆಡ್ಡಿ, ಬೆಂಗಳೂರಿನ ಬಹುತೇಕ ಬಿಜೆಪಿ ಕೌನ್ಸಿಲರ್‌ಗಳಿಗೂ ಬಾಡಿಗೆ ಜನರನ್ನು ಕರೆತರುವಂತೆ ಅಶೋಕ್ ಫರ್ಮಾನು ಹೊರಡಿಸಿದ್ದಾರೆ. ವೃದ್ಧಾಪ್ಯದಲ್ಲಿ ಖಾಯಿಲೆಗೆ ಬಿದ್ದು ಪ್ರಜ್ಞೆಯನ್ನೇ ಕಳಕೊಂಡ ಬಾಲಗಂಗಾಧರನಾಥರಿಗಿದು ಎಲ್ಲಿ ಅರ್ಥವಾಗಬೇಕು? ಇಲ್ಲಿ ಪ್ರಶ್ನೆಯೆಂದರೆ; ನಿರ್ಗತಿಕ ಒಕ್ಕಲಿಗರ ಬಗ್ಗೆ ಯಾವತ್ತಿಗೂ ಕಾಳಜಿ ವಹಿಸದ, ಶ್ರೀಮಂತರು, ಹೊರರಾಜ್ಯದವರನ್ನೆ ಡಾಕ್ಟರ್, ಇಂಜಿನಿಯರ್‌ಗಳನ್ನಾಗಿ ಮಾಡಿದ, ಸಾಮಾನ್ಯ ಒಕ್ಕಲಿಗರು, ರೈತಾಪಿಗಳ ಪಾಲಿಗೆ ಯಾವತ್ತಿಗೋ ಮುಗಿದುಹೋದ ಒಕ್ಕಲಿಗರ ಸಂಘಕ್ಕೆ ತಾನು ಸಮಸ್ತ ಒಕ್ಕಲಿಗರ ಪ್ರತಿನಿಧಿಯೆಂದೂ, ರೈತಾಪಿ ಒಕ್ಕಲಿಗರ ಪರವಾಗಿ ತಾನೇ ಬಾಲಗಂ ಸ್ವಾಮಿಗೆ ಗುರುವಂದನೆ ಸಲ್ಲಿಸುವ ಹಕ್ಕಿದೆಯೆಂದೂ ಹೇಳಲು ಯಾವ ನೈತಿಕತೆಯಿದೆ?

ಹಾಗೇ, ಒಕ್ಕಲಿಗ ಸಮೂಹದಿಂದಲೇ ಎಲ್ಲವನ್ನೂ ಪಡೆದು ಶ್ರೀಮಂತರು, ಅಧಿಕಾರಿಗಳ ಪಾಲಿಗಷ್ಟೇ ಕಾಮಧೇನುವಾದ ಬಾಲಗಂಗಾಧರನಾಥ ಸ್ವಾಮೀಜಿಗಳಿಗೆ ಸಮಸ್ತ ಜನಾಂಗದ ಗುರುವಂದನೆಗೆ ಪಾತ್ರರಾಗುವ ಯಾವ ನೈತಿಕತೆಯಿದೆ?

ಗನ್ ರನ್ನರ್ ಟಿಪ್ಯಾ ಜೊತೆ ಹೆಬ್ಬೆಟ್ ಮಂಜನ ದೋಸ್ತಿ

ಪೊಲೀಸರಿಗೆ ಮಾಹಿತಿದಾರನಾಗಿ ಕೆಲಸ ಮಾಡುತ್ತಿದ್ದ ಜೊತೆಗೆ ಧಾರವಾಡ, ಬೆಳಗಾಂ, ಬಾಗಲಕೋಟೆ ಸೇರಿದಂತೆ ಹಲವಾರು ಜಿಲ್ಲೆಗಳಲ್ಲಿ ಅಕ್ರಮವಾಗಿ ಪಿಸ್ತೂಲು ಮಾರಾಟ ಮಾಡುತ್ತಿದ್ದ ವಿಶ್ವನಾಥ ಕರಡಿಗುಡ್ಡ ಅಲಿಯಾಸ್ ಟಿಪ್ಯಾನನ್ನು ಹುಬ್ಬಳ್ಳಿ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ. ಟಿಪ್ಯಾನ ಜೊತೆಗೆ ಆತನ ಗ್ಯಾಂಗಿನಲ್ಲಿದ್ದ ಹಲವಾರು ಕ್ರಿಮಿನಲ್‌ಗಳೂ ಈಗ ಜೈಲು ಸೇರಿದ್ದಾರೆ.

ಪೊಲೀಸರಿಗೆ ಮಾಹಿತಿದಾರನಾಗಿದ್ದವನೇ ಓರ್ವ ದೊಡ್ಡ ಕ್ರಿಮಿನಲ್ ಆಗಿದ್ದ ಎಂದರೆ ಇಲ್ಲಿಯ ಪೊಲೀಸರ ಕಾರ್ಯದಕ್ಷತೆ ಎಂತಹದ್ದಿರಬೇಕೆಂದು ಸುಲಭವಾಗಿ ಊಹಿಸಬಹುದು! ಅದಕ್ಕೆ ಕಾರಣ ಟಿಪ್ಯಾನ ಅವ್ಯವಹಾರದಿಂದ ಬರುತ್ತಿದ್ದ ಆಮದನಿಯಲ್ಲಿ ಪೊಲೀಸರಿಗೂ ಪಾಲಿತ್ತು ಎಂಬುದು ಬಹಿರಂಗ ಸತ್ಯ!



ಜೈಲೇ ಕ್ರಿಮಿನಲ್‌ಗಳ ಶಾಲೆ

ಹುಬ್ಬಳ್ಳಿಯಲ್ಲಿರುವ ಸಬ್‌ಜೈಲು ಮತ್ತು ಧಾರವಾಡದಲ್ಲಿರುವ ಜಿಲ್ಲಾ ಕಾರಾಗೃಹ ಇವತ್ತು ಕ್ರಿಮಿನಲ್‌ಗಳನ್ನು ತಯಾರು ಮಾಡುವ ಅಡ್ಡೆಗಳಾಗಿಬಿಟ್ಟಿವೆ. ಒಂದು ವರ್ಷದ ಹಿಂದೆ ಹುಬ್ಬಳ್ಳಿಯ ಸಬ್‌ಜೈಲಿನಲ್ಲಿ ರೌಡಿ ಪಲ್ಲಿ ಹತ್ಯೆಯ ಆರೋಪಿಗಳು ಇತರೆ ಕೈದಿಗಳ ಜೊತೆಗೂಡಿ ದಂಗೆ ಎದ್ದು ಇಡೀ ಜೈಲನ್ನೇ ಧ್ವಂಸ ಮಾಡಿ ಪರಾರಿ ಆಗಲು ಯತ್ನಿಸಿದ್ದರು. ಅದೇರೀತಿ ಧಾರವಾಡ ಜಿಲ್ಲಾ ಕಾರಾಗೃಹವೂ ಇವತ್ತು ಮಹಾಪಾತಕಿ ಹೆಬ್ಬೆಟ್ ಮಂಜನ ಕಾರ್ಯಕ್ಷೇತ್ರವಾಗಿದೆ. ಜೈಲಿನಲ್ಲಿರುವ ಇತರರನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಪಳಗಿಸುವ ಮಂಜ ಅವರನ್ನು ಜಾಮೀನು ಕೊಡಿಸಿ ಕಳಿಸುವ ವ್ಯವಸ್ಥೆ ಮಾಡುತ್ತಾನಲ್ಲದೆ, ಅವರನ್ನೆಲ್ಲ ತನ್ನ ದಂಧೆಗೆ ಉಪಯೋಗಿಸಿಕೊಂಡು ಜೈಲಿನಿಂದಲೇ ತನ್ನ ಕ್ರಿಮಿನಲ್ ದಂಧೆಯನ್ನು ರಿಮೋಟ್ ಕಂಟ್ರೋಲ್ ಮಾಡುತ್ತಿದ್ದಾನೆ. ಇಂತಹ ಮಂಜನಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಜೈಲಿನ ಸಿಬ್ಬಂದಿಯೇ ಒದಗಿಸುತ್ತಿದೆ. ಧಾರವಾಡ ಕಾರಾಗೃಹದ ಮೇಲೆ ಪೊಲೀಸರು ರೇಡ್ ಮಾಡಿ ದಾಗೆಲ್ಲಾ ಮೊಬೈಲ್, ಗಾಂಜಾ, ಮಾದಕ ವಸ್ತುಗಳು, ಮಾರಕಾಸ್ತ್ರಗಳು ಸಿಕ್ಕಿವೆ. ಆದರೂ ಕಾರಾಗೃಹದ ಸಿಬ್ಬಂದಿ ಮೇಲೆ ಯಾರೂ ಕ್ರಮ ಕೈಗೊಂಡಿಲ್ಲ.

ಇವತ್ತು ಶಸ್ತ್ರಾಸ್ತ್ರ ಕಳ್ಳ ಸಾಗಣೆ ಪ್ರಕರಣದಲ್ಲಿ ಮೊದಲನೇ ಆರೋಪಿ ಆಗಿರುವ ಟಿಪ್ಯಾ ಈ ದಂಧೆಯನ್ನು ಕಲಿತದ್ದೇ ಹೆಬ್ಬೆಟ್ ಮಂಜನಿಂದ. ಈ ಹಿಂದೆ ದರೋಡೆ, ಸರಗಳ್ಳತನ, ಕಳವು, ಖೋಟಾನೋಟು ಸರಬರಾಜು ಇತ್ಯಾದಿ ಕೇಸುಗಳಲ್ಲಿ ಸಿಲುಕಿಕೊಂಡಿದ್ದ ಟಿಪ್ಯಾನನ್ನು ಮೂರು ವರ್ಷಗಳ ಕಾಲ ಧಾರವಾಡದ ಜೈಲಿನಲ್ಲಿ ಬಂಧಿಸಿಡಲಾಗಿತ್ತು, ಅದೇ ಹೊತ್ತಿಗೆ ಮೊಂಬ ಗ್ರಾಮದವನಾದ ಕಲ್ಲಪ್ಪ ಕಳವಾಯಿ ಎಂಬಾತನೂ ಜೈಲಿನಲ್ಲಿದ್ದ. ಈತ ಹುಬ್ಬಳ್ಳಿಯ ವಿದ್ಯಾನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕೊಲೆ ಮಾಡಿದ್ದಕ್ಕೆ ಅವನನ್ನು ಬಂಧಿಸಲಾಗಿತ್ತು, ಅಷ್ಟೇ ಅಲ್ಲದೆ, ಕಾರವಾರದ ಮಂಜುನಾಥ ಹರಿಕಂತ, ಹುಬ್ಬಳ್ಳಿಯ ಹೇಮಂತನಗರದ ಪ್ರವೀಣ ಕೆಂಗಡಿ ಎಂಬ ಇಬ್ಬರು ಕ್ರಿಮಿನಲ್‌ಗಳೂ ಅದೇ ಹೊತ್ತಿಗೆ ಜೈಲುಪಾಲಾಗಿದ್ದರು. ಇವರೆಲ್ಲರೂ ಜೈಲಿನಲ್ಲೇ ಹೆಬ್ಬೆಟ್ ಮಂಜನಿಂದ ಅಕ್ರಮ ಶಸ್ತ್ರಾಸ್ತ್ರಗಳ ಮಾರಾಟದ ಬಗ್ಗೆ 'ಮಾರ್ಗದರ್ಶನ' ಪಡೆದರು.

ಕ್ರಿಮಿನಲ್‌ಗಳ ಪೊಲಿಟಿಕಲ್ ಲಿಂಕ್

ಟಿಪ್ಯಾನಿಗೆ ಬಿಜೆಪಿ ಪಕ್ಷದೊಂದಿಗೆ ಗೆಳೆತನ ಇದೆ. ಹಾಗೆಯೇ ಕೊಲೆಗಡುಕ ಕಲ್ಲಪ್ಪ ದಳವಾಯಿಗೆ ಜೆಡಿಎಸ್ ಪಕ್ಷದೊಂದಿಗೆ ಲಿಂಕ್‌ಗಳಿವೆ. ಎಪಿಎಂಸಿ ಸದಸ್ಯನಾಗಿರುವ ಶಿವಾನಂದ ಶಾರಿಗಾರನ ಸಹೋದರ ಹನುಮಂತ ಶಾರಿಗಾರನ ಜೊತೆ ಕಲ್ಲಪ್ಪ ದಳವಾಯಿ ರಿಯಲ್ ಎಸ್ಟೇಟ್ ದಂಧೆಯನ್ನು ನಡೆಸುತ್ತಿದ್ದಾನೆ. ಹುಬ್ಬಳ್ಳಿ ತಾಲೂಕಿನ ಹಳ್ಳಿಗಳಲ್ಲಿ ವ್ಯಾಜ್ಯವಿರುವ ಹೊಲಗಳನ್ನು ಗುರುತು ಹಚ್ಚಿ ಅವುಗಳನ್ನು ಕಡಿಮೆ ರೇಟಿಗೆ ಖರೀದಿಸಿ ಆನಂತರ ಹೆಚ್ಚಿನ ದರಕ್ಕೆ ಮಾರುವ ಈ ದಂಧೆ ಕಳೆದ ನಾಲ್ಕು ವರ್ಷಗಳಿಂದ ನಡೆಯುತ್ತಿದೆ. ಇದರ ಪರಿಣಾಮವಾಗಿಯೇ ಈ ಹಿಂದೆ ಕೈಯಲ್ಲಿ ಚಿಕ್ಕಾಸೂ ಇಲ್ಲದಿದ್ದ ಶಿವಾನಂದ ಶಾರಿಗಾರ ಇವತ್ತು ಕೋಟಿ ಲೆಕ್ಕದಲ್ಲಿ ತೂಗುತ್ತಿದ್ದಾನೆ. ಅಷ್ಟೇ ಅಲ್ಲ, ಮುಂಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಥವಾ ಕಾಂಗ್ರೆಸ್ ಪಕ್ಷದಿಂದ ನವಲಗುಂದ ಕ್ಷೇತ್ರಕ್ಕೆ ಟಿಕೆಟ್ ಪಡೆದು ವಿಧಾನಸೌಧದ ಮೆಟ್ಟಿಲನ್ನು ಹತ್ತುವ ಕನಸು ಕಾಣುತ್ತಿದ್ದಾನೆ.

ಈಗ ಟಿಪ್ಯಾನೊಂದಿಗೆ ಬಂಧನಕ್ಕೊಳಗಾಗಿರುವ ಹುಬ್ಬಳ್ಳಿಯ ರಾಮನಗರದ ಸಂತೋಷ ಚಲವಾದಿ ಎಂಬಾತನಿಗೆ ಬಿಜೆಪಿಯ ಸಖ್ಯ ಇದೆ. ಈ ಹಿಂದೆ ಕಾಂಗ್ರೆಸ್ ಮುಖಂಡ ಗುರುನಾಥ ಗಾಣದಾಳ ಎಂಬುವವರನ್ನು ಸಂತೋಷ್ ಚಲವಾದಿ ಕೊಲೆ ಮಾಡಿದ್ದಕ್ಕೆ ಆತನನ್ನು ಅರೆಸ್ಟ್ ಮಾಡಲಾಗಿತ್ತು. ಹುಬ್ಬಳ್ಳಿಯ ಹೊಸೂರಿನ ಯುವತಿ ಶ್ರುತಿಯನ್ನು ಅಪಹರಿಸಿಕೊಂಡು ಹೋಗಿ ಮದುವೆಯಾಗಿದ್ದ ಸಂತೋಷ್ ಕೊಲೆ ಆರೋಪದಲ್ಲಿ ಖುಲಾಸೆಗೊಂಡು ಬಂದ ನಂತರ ಟಿಪ್ಯಾನ ಶಸ್ತ್ರಾಸ್ತ್ರ ಗ್ಯಾಂಗಿನ ಭಾಗವಾಗಿದ್ದ. ಈತ ಕೊಲೆ ಮಾಡಿದ್ದ ಗಾಣದಾಳ ಅವರ ಕುಟುಂಬದ ಸದಸ್ಯರು ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡಿರುವುದರಿಂದ ಕೊಲೆಗಾರ ಸಂತೋಷ್ ಬಿಜೆಪಿಯೊಂದಿಗೆ ಗುರುತಿಸಿಕೊಂಡಿದ್ದಾನೆ.



ಅಕ್ರಮ ಪಿಸ್ತೂಲ್ ಹಾಗೂ ನಕಲಿ ನೋಟು

ಪಶ್ಚಿಮ ಬಂಗಾಳದ, ಹೌರಾದಿಂದ ಕೇವಲ ಹತ್ತು ಸಾವಿರ ರೂಪಾಯಿಗೆ ಸಿಗುವ ಪಿಸ್ತೂಲುಗಳು ಮಾರಾಟವಾಗುವುದು ಒಂದರಿಂದ ಒಂದೂವರೇ ಲಕ್ಷ ರೂಪಾಯಿಗಳಿಗೆ. ಜೊತೆಗೆ ಒಂದು ಅಸಲಿ ನೋಟು, ಎರಡು ನಕಲಿ ನೋಟು ನೀಡುವ. ಈ ಮರ್ಮವನ್ನು ಹೇಳಿಕೊಟ್ಟದ್ದೇ ಹೆಬ್ಬೆಟ್ ಮಂಜ. ಅದರಲ್ಲಿ ತನ್ನ ಪಾಲನ್ನು ಜೈಲಿನಲ್ಲಿ ಇದ್ದುಕೊಂಡೇ ಪಡೆಯುತ್ತಿದ್ದಾನೆ. ದೊಡ್ಡಮೊ[…] ಪೊಲೀಸರ ಮಾಹಿತಿದಾರನಾಗಿ ಕೆಲಸ ಮಾಡುತ್ತಿದ್ದ ಟಿಪ[…] ಪೊಲೀಸರು ಹಾಕುತ್ತಿದ್ದ ಪುಡಿಗಾಸು ಬೇಡವಾಗಿ[…] ಮತ್ತೊಂದೆಡೆ ಇದೇ ಪೊಲೀಸರು ಯಾವ್ಯಾವುದ[…] ಪ್ರಕರಣದಲ್ಲಿ ಬಂಧಿಸಿ ಜೈಲಿಗೆ ಅಟ್ಟುವುದು ತಪ್ಪುತ್ತಿ[…] ಇದರಿಂದ ಬೇಸರಗೊಂಡಿದ್ದ ಟಿಪ್ಯಾಗೇ ಜೈಲಿನಲ್ಲಿ ಹೆ[…] ಮಂಜನ ಈ ಹೊಸ ಕಸುಬು ಇಷ್ಟವಾಗಿತ್ತು.

ಜೈಲಿನಲ್ಲಿದ್ದ ಟಿಪ್ಯಾ ಹೊರಬಂದ ಕೂಡಲೇ ಹುಬ್ಬ[…] ಗಣೇಶನಗರದ ಪ್ರಶಾಂತ ಬಡಿಗೇರ, ಹೇಮಂತನಗ[…] ಪ್ರವೀಣ ಅಂಗಡಿ ಜೊತೆಗೂಡಿ ಪಿಸ್ತೂಲು ಖರೀ[…] ಮಾರಾಟದಲ್ಲಿ ತೊಡಗಿದ್ದ. ಇದರೊಂದಿಗೇ ತರು[…] ಖೋಟಾನೋಟು ಚಲಾವಣೆಗೊಳಿಸಲು ಸಂಗ[…] ಕಾಲೋನಿಯ ರಾಕೇಶ ಬದ್ದಿ, ಜೆ ಅಡ್ಡಾದ ಕು[…] ಹಬೀಬನನ್ನು ನೇಮಿಸಿಕೊಂಡಿದ್ದ. ಪ.ಬಂಗಾಳದ ಹೌ[…] ಜಿನ್ನಾ ಎಂಬುವವನಿಂದ ತಿಂಗಳಿಗೆ ಒಮ್ಮೆ 4-5 ಪಿಸ್[…] ಖರೀದಿಸುತ್ತಿದ್ದ ಟಿಪ್ಯಾ ಅದನ್ನು ಕೊಲೆ ಆರೋಪ[…] ಸಿಲುಕಿಕೊಂಡಿದ್ದ ಕುಖ್ಯಾತ ರೌಡಿಗಳಾದ ಮೊರಬ ಗ್ರಾ[…] ಕಲ್ಲಪ್ಪ ದಳವಾಯಿ, ರಾಮನಗರದ ಸಂತೋಷ ಚಲವಾ[…] ವ[…] ಇದಲ್ಲದೇ ಇದೇ ತಂಡದ[…] ಕಾರವಾರದ ಮಂಜುನಾಥ, ರಾಮದುರ್[…] ಪ್ರಶಾಂತ, ಬೆಂಗಳೂರಿನ ರಘು ಮೂ[…] ಯಾರ್‍ಯಾರಿಗೆ ಮಾರಿದ್ದಾರೆ ಅನ್ನುವುದರ[…] ಟಿಪ್ಯಾನೇ ಬಾಯಿ ಬಿಡಬೇಕು.

ಗ್ಯಾಂಗ್ ವಿರುದ್ಧ ಕೆಲಸ ಮಾಡಿದಾತ ಖತಂ

ಈ ಗುಂಪಿನಲ್ಲಿದ್ದ ಪ್ರವಿ[…] ಹಿರೇಹಾಳಮಠ ಎನ್ನುವವನು "[…] ಸರಿಯಾಗಿ ಹಂಚಿಕೆ ಆಗಬೇಕು. ಇಲ್ಲವೇ ಪೊಲೀ[…] ತಿಳಿಸುತ್ತೇನೆ" ಅಂದಿದ್ದೇ ತಡ, ಅವನಿಗೇ ಟಿಪ್ಯಾ ಗ್ಯಾ[…] ಕಂಠಮಟ್ಟ ಕುಡಿಸಿ ಕಾರವಾರ ರಸ್ತೆಯಲ್ಲಿರುವ ರೇ[…] ಹಾಳ ಕೋಳಿ ಫಾರಂ ಹತ್ತಿರ ಕರೆದೊಯ್ದು ಕೊಲೆ ಮಾ[…] ಕೊನೆಗೆ ಸುಟ್ಟು ಹಾಕಿಬಿಟ್ಟಿತು. ಅಲ್ಲಿಗೆ ದೋಸ್ತಿ ಖತಂ. […] ಟಿಪ್ಯಾ ಪ್ರಶಾಂತ್ ಲಕ್ಷ್ಮಣ್, ಯಲ್ಲಪ್ಪ ಅಂಗಡಿ, ರಾ[…] ರಾಜಪ್ಪ ಕುಶಾಲ್ ಮೋಹನ್‌ಸಾ, ಹಬೀಬ್ ಜೈ[…] ಪಾಲಾಗಿದ್ದಾರೆ. ಇವರು ಈಗ ಪೊಲೀಸರ ಕೈಗೆ ಸಿ[…] ಹೋಗದಿದ್ದರೆ ದೊಡ್ಡ ಅನಾಹುತಕಾರಿ ಕ್ರಿಮಿನಲ್‌ಗ[…] ಬೆಳೆದುಬಿಡುತ್ತಿದ್ದರು.

• ವರದಿಗ[…]



ಅಂಬರೀಷ್‌ಗೆ ಅರವತ್ತು

▶11

ಮಾಡ್ತಳೆ. ಮಗನೂ ತಾಯಿನ ಲವ್ ಮಾಡ್ತನೆ. ಆದರೆ ಆ ಪ್ರೇಮದ ಗಡಿನ ಬಹಳ ಎಚ್ಚರದಿಂದ ಶೂಟ್ ಮಾಡಿದ್ರು ಪುಟ್ಟಣ್ಣ, ನೋಡೋ ಪ್ರೇಕ್ಷಕರಿಗೆ ಯಾವುದೇ ಅಶ್ಲೀಲ ಭಾವನೆ ಬಾರದಂಗೆ ತಗಿಯೋದು ಅಷ್ಟು ಸುಲಭ ಅಲ್ಲ. ಆ ಹಾಡಿನ ದೃಶ್ಯದಲ್ಲಿ ನಾನು ಮಾಡಿದ ಆಕ್ಟಿಂಗ್‌ಅನ್ನು ಇಲ್ಲಿ ಈಗ ಮಾಡಿ ತೋರುಸ್ತಿದ್ದೆ. ಆದ್ರೆ ಇಲ್ಲಿ ಹೆಣ್ಣುಮಗಳವುಳೆ ಬೇಡಬಿಡಿ.

ಈಗ ನನಗೆ ಜಾಸ್ತಿ ಕೆಲಸ ಮಾಡಕ್ಯಾಗಲ್ಲ, ನನಗೆ ಆಕ್ಟಿಂಗ್ ಬರಲ್ಲ, ನನಗೆ ಪಾತ್ರ ಬೇಡ ಅಂದ್ರೂ ಜನ ಕೇಳಲ್ಲ, "ನೀವು ಯಾವಾಗ್ಲಾದ್ರು ಬನ್ನಿ ಸಾರ್" ಅಂತರೆ. ಏನು ಮಾಡದು. 'ಶ್ರೀಮಂಜುನಾಥ' ಅನ್ನೊ ಸಿನಿಮಾ ಡೈರೆಕ್ಟರ್ ರಾಘವೇಂದ್ರ ರಾವ್ "ಸುಮಲತಾ ಜೊತೆ ನೀವು ಆಕ್ಟ್ ಮಾಡಿ" ಅಂತ ಗಂಟುಬಿದ್ರು. ತಪ್ಪಿಸಿಗಳಕ್ಕೆ ಅಂತ ಏನೇನೊ ಮಾಡಿದೆ, ಆಗಲಿಲ್ಲ, ಕೊನೆಗೆ ಅವರನ್ನ ಊಟಕ್ಕೆ ಕರದು, ಒಳ್ಳೆ ಊಟ ಹಾಕಿ, ಮಾಡಿಮೇಕ್ಕೆ ಕರಕಂಡೋಗಿ "ನಿಮ್ಮ ಕಾಲಿಗೆ ಬೀಳ್ತೀನಿ. ನನ್ನನ್ನ ಈ ಸಿನಿಮಾದಿಂದ ಕೈಬಿಡಿ. ನನ್ನಿಂದ ನಿಮಗೆ ತೊಂದ್ರೆ ಆಗದು ಬೇಡ" ಅಂದೆ. ಅದಕ್ಕವುರು "ಏಮಿ ಪ್ರಾಬ್ಲಮ್ಮು? ಮೀರು ಶೂಟಿಂಗ್ ವಸ್ತಾರು, ಪೋತಾರ ಅಂತೆ ತಾನೆ. ನಾಕೇಮು ಪ್ರಾಬ್ಲಂ?" ಅಂದ್ರು. ಅದಕ್ಕೆ ನಾನು "ಶೂಟಿಂಗ್‌ಕು ವಸ್ತಾನು, ಪೋತಾನು ಸರಿ. ನಾನು ಯಪ್ಪುಡು ವಸ್ತಾನು, ಯಪ್ಪುಡು ಪೋತಾನು ಅದೇ ತಾನೇ ಪ್ರಾಬ್ಲಂ" ಅಂದೆ. ಆದ್ರು ಪಾಪ ನನ್ನ ಸಮಯಕ್ಕೆ ಹೊಂದಿಕಂಡು ಶೂಟಿಂಗ್ ಮುಗಿಸಿದ್ರು. ಈಗ್ಲೂ ನನ್ನನ್ನ ಚಿತ್ರಕ್ಕೆ ತಗಳೋರು ನನ್ನ ಟೈಮಿಗೆ ಹೊಂದಿಕೊಂಡು ಶೂಟ್ ಮಾಡ್ತರೆ ಪಾಪ.

* ನೀವು ರಾಜಕಾರಣಕ್ಕೆ ಬಂದದ್ದರ ಬಗ್ಗೆ ಹೇಳಿ ಸಾರ್.


ಅದ್ಕಲ್ಲ ಹಳೆ ಕತೆ. ಮುಖ್ಯವಾಗಿ ನಾನು ಮತ್ತು ಮಾದೇಗೌಡರು ತುಂಬ ಕ್ಲೋಸಾಗಿದ್ವೊ. ಆಗ ಅವುರು ಬಂದು "ನೀನು ಮಂಡ್ಯದ ಎಂ.ಪಿ. ಕ್ಯಾಂಡೇಟ್ ಆಗಬೇಕು" ಅಂದ್ರು. ನಾನು "ಅದ್ಯಲ್ಲ ಆಗಲ್ಲ, ದುಡ್ಡು ಇಲ್ಲ" ಅಂದೆ. ಆಗವುರು "ಪಾರ್ಟಿ ಫಂಡಿಂದ ಬರುತ್ತೆ, ನಾನೊಂದಿಷ್ಟು ಮಾಡಿಕೊಡ್ತಿನಿ. ನೀನು ಸುಮ್ಮನೆ ನಿಂತಕೊ" ಅಂದ್ರು. "ಸರಿ, ನಾನು ಕ್ಯಾಂಡೇಟಾದ್ರೆ ನೀನು ಏನು ಮಾಡ್ತಿಯಾ" ಅಂತ ಕೇಳಿದೆ. "ನೀನು ನಾಮಿನೇಷನ್ ಹಾಕಿ ಹೋಗು. ನಾನು ನಿನ್ನನ್ನ ಗೆಲ್ಲಿಸಿಕೊಂಡು ಬತ್ತಿನಿ" ಅಂದ್ರು. ಅಂಗಂತ ಹೇಳಿ ಹೋದೋರು ಅವ್ರುರೇ ಕ್ಯಾಂಡೇಟಾದ್ರು. ಆಗ ನನ್ನ ಮನೆಗೆ ಜನತಾದಳದ ಘಟಾನುಘಟಿ ಲೀಡ್ರು ಬಂದು ಟಿಕೆಟ್ ಕೊಟ್ರು. ಗೆದ್ದೆ, ಆದ್ರೆ 15 ತಿಂಗಳಾದ ಮೇಲೆ ಸರ್ಕಾರ ಉರುಳಿಬಿದ್ದಾಗ ವಾಪಸ್ಸು ಬಂದು ಕಾಂಗ್ರೆಸ್ ಸೇರಿಕಂಡೆ.

* ನೀವು ಸಕ್ರಿಯವಾಗಿ ರಾಜಕಾರಣದಲ್ಲಿ ತೊಡಗಿಸಿಕೊಬೇಕಾಗಿದೆ. ಕರ್ನಾಟಕದಲ್ಲಿ ಜನಕ್ಕೆ ನಿಮ್ಮಂತ ಲೀಡ್ರು ಬೇಕಾಗಿದೆ...

ರಾಜಕಾರಣ ಅಷ್ಟು ಸುಲಭ ಅಲ್ಲ. ಈಗ ಮೊ[…] ತರ ಇಲ್ಲ. ಜನ ರಾಜಕಾರಣಿಗಳು ಅಂದ್ರೆ ಸಾಕು, ಬಾಯ[…] ಬಂದಂಗೆ ಬೈತರೆ. ಆದ್ರಿಂದ ಪಾರ್ಟ್ ಟೈಂ ರಾಜಕಾರಣ[…] ಒಳ್ಳೆದು ಅಂತ ನನ್ನ ಭಾವನೆ.

ಇವತ್ತು ಜನ ಎಮ್ಮೆಲ್ಲೆ ಆಗಕ್ಕೆ, ಮಂತ್ರಿ ಆ[…] ಭಾಳ ಕಷ್ಟ ಪಡ್ತರೆ. ಲಾಬಿ ಮಾಡ್ತರೆ. ಆದ್ರೆ ನಾ[…] ಕೇಂದ್ರದ ಮಂತ್ರಿಯಾದೆ. ಆದ್ರೆ ಎಷ್ಟೆ ಸಲೀಸಾಗಿ […] ಪದವಿನೂ ಬಿಟ್ಟೆ. ನನಗೆ ರಾಜಕಾರಣದಿಂದ ಏ[…] ಆಗಬೇಕಾಗಿಲ್ಲ. ಆಸ್ತಿ ಬೇಡ, ಹಣ ಬೇಡ, ಇರೊ […] ಮಗನ್ನ ಓದಿಸಿ ಅವುನ್ನ ಮುಂದೆತಂದು ಮರಿಯಾದಿಯ[…] ಬದುಕಿದ್ರೆ ಸಾಕಾಗ್ಯದೆ.


ಯಾಕಂದ್ರೆ ಮೊದಲಿನ ಎನರ್ಜಿ ಈಗಿಲ್ಲ. ಇ[…] ಸಾಕು ಅನ್ನುಸ್ತದೆ. ಕಾಫಿ ಕುಡುದ್ರಾ? ಹೊರಡಿ ವ[…] ಇಷ್ಟು ಹೇಳಿದ್ರೂ ಇಲ್ಲೆ ಕುಂತಿದ್ರೆ ಬಾಗಿಲವರಿಗೂ ಬಂ[…] ಕಳಿಸಿ ಕೊಡಬೇಕಾಯ್ತದೆ!



ಚನ್ನಗಿರಿ: ಜಾತಿ ಧ್ರುವೀಕರಣದಲ್ಲಿ ಗೆಲುವು ಯಾರಿಗೆ?

ಪಟೇಲರ ನಿರ್ಗಮನದ ನಂತರ ಪ್ರತಿ ಚುನಾವಣೆ ಬಂದಾಗ ಯಾರಿಗೆ ತಮ್ಮ ಮತ ನೀಡಬೇಕು ಎನ್ನುವ ಚಿಂತೆ ಕ್ಷೇತ್ರದ ಮತದಾರರನ್ನು ಕಾಡುತ್ತದೆ. ಅದಕ್ಕೆ ಮುಖ್ಯ ಕಾರಣ ಚನ್ನಗಿರಿ ವಿಧಾನಸಭಾ ಕ್ಷೇತ್ರ ಈಗ ಜಾತಿ ರಾಜಕಾರಣದ ಸಂಕಟದಲ್ಲಿ ಸೊರಗುತ್ತಿರುವುದು. ಪಟೇಲರು ಬದುಕಿರುವವರೆಗೂ ಮತದಾರರಲ್ಲಿ ಲಿಂಗಾಯತರು, ದಲಿತರು, ಹಿಂದುಳಿದವರು ಎಂಬ ಜಾತಿ ಆಧಾರಿತ ವಿಂಗಡನೆ ಪ್ರಧಾನವಾಗದೇ ರಾಜಕೀಯ ಪಕ್ಷ ಮತ್ತು ಸ್ಪರ್ಧಿಸುವ ವ್ಯಕ್ತಿ ಪ್ರಧಾನವಾಗಿರುತ್ತಿತ್ತು. ಆದರೀಗ ಇಲ್ಲಿ ಜಾತಿರಾಜಕಾರಣವೇ ಪ್ರಮುಖವಾಗಿಬಿಟ್ಟಿದೆ.

ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲರ ಮರಣದ ನಂತರ ಅವರು ಪ್ರತಿನಿಧಿಸುತ್ತಿದ್ದ ಚನ್ನಗಿರಿ ವಿಧಾನಸಭಾ ಕ್ಷೇತ್ರ ಅಕ್ಷರಶಃ ಅನಾಥವಾಗಿದೆ. ಪಟೇಲರು ಅಧಿಕಾರದಲ್ಲಿದ್ದಷ್ಟು ದಿನ ಅವರು ಚನ್ನಗಿರಿ ಅಭಿವೃದ್ಧಿಯತ್ತ ಗಮನ ಹರಿಸದಿದ್ದರೂ ಕ್ಷೇತ್ರದ ಮತದಾರರಿಗೆ ಆಪ್ತರಾಗಿದ್ದರು, ಕ್ಷೇತ್ರದ ಪ್ರತಿ ಮನೆಯ ಮುದುಕ, ಮುದುಕಿಯರನ್ನು ಹೆಸರಿಡಿದು ಮಾತನಾಡಿಸುವಷ್ಟು ಆಪ್ತ ಸಂಬಂಧಗಳನ್ನು ಹೊಂದಿದ್ದರು. ಶಾಸಕರಾಗಿ, ಸಂಸದರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿದ್ದಾಗಲೂ ಪಟೇಲರು ತಮ್ಮ ನಡೆ, ನುಡಿ, ಸರಳತೆಗೆ ಎಂದೂ ಅಧಿಕಾರದ ಬಿಂಕು ತಾಕಿಸಿಕೊಂಡಿರಲಿಲ್ಲ. ಅವರ ಸುದೀರ್ಘ ರಾಜಕಾರಣದ ಅವಧಿಯಲ್ಲಿ ಎಂದೂ ಪಟಾಲಂಗಳನ್ನು ಕಟ್ಟಿಕೊಂಡಿರಲಿಲ್ಲ. ಮಧ್ಯವರ್ತಿಗಳನ್ನು ಇಟ್ಟುಕೊಂಡಿರಲಿಲ್ಲ. ಪಟೇಲರೊಂದಿಗೆ ಚನ್ನಗಿರಿಯ ಮತದಾರರಿಗೂ ಅಷ್ಟೇ ಸಲಿಗೆ-ಸಲುಗೆಯಿತ್ತು. ಎಲ್ಲವೂ ನೇರಾನೇರ.



ಆದರೀಗ ಪಟೇಲರಿಲ್ಲ. ಅವರ ನಿರ್ಗಮನದ ನಂತರ ಪ್ರತಿ ಚುನಾವಣೆ ಬಂದಾಗ ಯಾರಿಗೆ ತಮ್ಮ ಮತ ನೀಡಬೇಕು ಎನ್ನುವ ಚಿಂತೆ ಕ್ಷೇತ್ರದ ಮತದಾರರನ್ನು ಕಾಡುತ್ತದೆ. ಅದಕ್ಕೆ ಮುಖ್ಯ ಕಾರಣ ಚನ್ನಗಿರಿ ವಿಧಾನಸಭಾ ಕ್ಷೇತ್ರ ಈಗ ಜಾತಿರಾಜಕಾರಣದ ಸಂಕಟದಲ್ಲಿ ಸೊರಗುತ್ತಿರುವುದು.

ಪಟೇಲರು ಬದುಕಿರುವವರೆಗೂ ಮತದಾರರಲ್ಲಿ ಲಿಂಗಾಯತರು, ದಲಿತರು, ಹಿಂದುಳಿದವರು ಎಂಬ ಜಾತಿ ಆಧಾರಿತ ವಿಂಗಡನೆ ಪ್ರಧಾನವಾಗದೇ ರಾಜಕೀಯ ಪಕ್ಷ ಮತ್ತು ಸ್ಪರ್ಧಿಸುವ ವ್ಯಕ್ತಿ ಪ್ರಧಾನವಾಗಿರುತ್ತಿತ್ತು. ಆದರೀಗ ಇಲ್ಲಿ ಜಾತಿರಾಜಕಾರಣವೇ ಪ್ರಮುಖವಾಗಿಬಿಟ್ಟಿದೆ.



ಮಹಿಮನ ಮಹಿಮೆ

ಪಟೇಲರು ಹೋದನಂತರ ಸಹಜವಾಗಿಯೇ ಮತದಾರರು ಅವರ ಪುತ್ರ ಮಹಿಮನತ್ತ ನೋಡಿದರು. ಈತ ತಂದೆಯ ಬಳುವಳಿಕೆಯ ರಾಜಕಾರಣವನ್ನು ಮುಂದುವರೆಸುತ್ತಾನೆ ಎಂಬ ಭರವಸೆ ಇಟ್ಟೆ ಇಲ್ಲಿನ ಜನ ಆತನನ್ನು ಚುನಾವಣೆಯಲ್ಲಿ ಶಾಸಕನಾಗಿ ಮಾಡಿದರು. ಆದರೆ ಮಹಿಮ ಮಾಡಿದ್ದು ಏನನ್ನು?

ಆರಂಭದಲ್ಲಿ ಎಲ್ಲವೂ ಸರಿಯಿತ್ತು. ಆದರೆ ಬರುಬರುತ್ತ ಅರಸರ ಕುದುರೆ ಕತ್ತೆಯಾಯಿತು ಎಂಬಂತೆ ಮಹಿಮನ ನಡೆಗಳೆಲ್ಲ ತಂದೆಯ ರಾಜಕಾರಣದಿಂದ ದೂರವಾಗಲಾರಂಭಿಸಿತು. ಇತ್ತ ಮಹಿಮ ಕ್ಷೇತ್ರದ ಅಭಿವೃದ್ಧಿ ಬಗ್ಗೆಯೂ ಗಮನ ನೀಡಲಿಲ್ಲ, ಅತ್ತ ಮತದಾರರನ್ನೂ ಹತ್ತಿರ ಮಾಡಿಕೊಳ್ಳಲಿಲ್ಲ, ಪ್ರಜೆಗಳಿಗಿಂತಲೂ ಕಲ್ಕಿ ಭಗವಾನ್ ಎಂಬ ಢೋಂಗಿ ಸ್ವಾಮಿಯನ್ನು ಆರಾಧಿಸಿದ ಮಹಿಮಾ ಜನರು ತನ್ನ ಮೇಲಿಟ್ಟಿದ್ದ ಭರವಸೆಯನ್ನೆಲ್ಲಾ ಮಣ್ಣುಮಾಡಿಬಿಟ್ಟ.

ಆನಂತರ ಚನ್ನಗಿರಿ ಮತದಾರರು ಆಯ್ಕೆ ಮಾಡಿ ಕೊಂಡಿದ್ದು ಕಾಂಗ್ರೆಸ್‌ನ ವಡ್ನಾಳು ರಾಜಣ್ಣ ಎಂಬ ಅಡಿಕೆ ದಲ್ಲಾಳಿಯನ್ನು. ರಾಜಣ್ಣ ಶಾಸಕನಾದ ನಂತರವಾದರೂ ಚನ್ನಗಿರಿಗೆ ನೆಮ್ಮದಿ ಸಿಕ್ಕೀತು ಎಂಬ ಆಸೆಯೂ ರಾಜಣ್ಣನ ಸರ್ವಾಧಿಕಾರಿ ವರ್ತನೆಯಿಂದ ಮಣ್ಣುಪಾಲಾಯಿತು.


ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ನಡುವಿನ ಸಮ್ಮಿಶ್ರ 'ಕೋ-ಜಾ' ಸರಕಾರ ಅಂತ್ಯಗೊಂಡ ನಂತರ ಇಲ್ಲಿನ ಪರಿಸ್ಥಿತಿ ಮತ್ತಷ್ಟು ಕೆಟ್ಟಿತು. ಆದಾದ ನಂತರದ 2008ರ ಚುನಾವಣೆಯೇ ಚನ್ನಗಿರಿಯಲ್ಲಿ ಜಾತಿ ಆಧಾರಿತ ವಿಂಗಡನೆಗೆ ಮುಖ್ಯ ಕಾರಣವಾಯಿತು.

ಮಾಡಾಳು ವಿರೂಪಾಕ್ಷಪ್ಪನ ಎಂಟ್ರಿ

ದೇವೇಗೌಡರೊಂದಿಗೆ ಜಗಳ ಕಾದು ಜೆಡಿಎಸ್ ಪಕ್ಷವನ್ನು ತೊರೆದ ಮಹಿಮ 'ಸುವರ್ಣಯುಗ' ಎಂಬ ಪಾರ್ಟಿ ಕಟ್ಟಿ ಅದರ ಏಕೈಕ ಅಭ್ಯರ್ಥಿಯಾಗಿ ಸ್ಪರ್ಧಿಸಿದ. ಸಾಲದಕ್ಕೆ ಸೂಳೆಕೆರೆ ಏರಿ ಮೇಲೆ ಭಗವಂತನ ಧ್ಯಾನ ಮಾಡಲು ತಪಸ್ಸಿಗೆ ಕುಂತ. ಕಾಂಗ್ರೆಸ್‌ನ ವಡ್ನಾಳು ರಾಜಣ್ಣನ ಸರ್ವಾಧಿಕಾರಿ ಶಾಸಕತ್ವವೂ ಮತದಾರನಿಗೂ ಸಾಕುಸಾಕಾಗಿತ್ತು, ಆಗ ಉದ್ಭವಿಸಿದ್ದೇ ಮಾಡಾಳು ವಿರೂಪಾಕ್ಷಪ್ಪ. ಹಿರೇಮಳಲಿ ಗ್ರಾಮ ಪಂಚಾಯತಿ ಅಧ್ಯಕ್ಷನಾಗಿ, ಜಿಲ್ಲಾ ಪಂಚಾಯ್ತಿ ಸದಸ್ಯನಾಗಿ ಅಲ್ಲಿಯತನಕ ಎಲ್ಲ ಅಧಿಕಾರವನ್ನು ಕಾಂಗ್ರೆಸ್ ಪಕ್ಷದವನಾಗಿ ಅನುಭವಿಸಿದ್ದ ಮಾಡಾಳು ವಿರೂಪಾಕ್ಷಪ್ಪ ಶಾಸಕನಾಗುವ ಕನಸೊತ್ತೇ ಭಾರತೀಯ ಜನತಾ ಪಾರ್ಟಿಗೆ ಕುಪ್ಪಳಿಸಿಬಿಟ್ಟ.



ಅದೇ ಹೊತ್ತಿಗೆ ತಾನು ಲಿಂಗಾಯತ ನಾಯಕನೆಂದೂ, ತನಗೆ ಒಕ್ಕಲಿಗರಾದ ದೇವೇಗೌಡ ಮತ್ತು ಅವರ ಪುತ್ರ ಕುಮಾರಸ್ವಾಮಿಯಿಂದ ಮೋಸವಾಯಿತೆಂದೂ ಯಡಿಯೂರಪ್ಪ ಎಲ್ಲೆಡೆ ಕೂಗು ಹಾಕಲಾರಂಭಿಸಿದ. ರಾಜ್ಯದ ಹಲವಾರು ಕಡೆ ಯಡ್ಡಿ ಪರವಾಗಿ ಲಿಂಗಾಯತರು ಒಗ್ಗಟ್ಟಾಗ ಲಾರಂಭಿಸಿದರು. ಆ ಹವಾ ಚನ್ನಗಿರಿಯನ್ನೂ ನುಂಗಿ ಹಾಕಿತು.



ಅಲ್ಲಿಯತನಕ ಜಿಲ್ಲಾ ಪಂಚಾಯತಿಯನ್ನು ದಾಟಿ ಬರಲಾಗದ ಮಾಡಾಳು ವಿರೂಪಾಕ್ಷಪ್ಪ ಬಿಜೆಪಿಯಲ್ಲಿ ಸಾಧು ವೀರಶೈವನೆಂದೇ ಹೆಸರು ನೋಂದಾಯಿಸಿ ಪಕ್ಷದ ಟಿಕೆಟ್ ಪಡೆದ. ಮಾಡಾಳು ವಿರೂಪಾಕ್ಷಪ್ಪ ಮತ್ತು ಕಾಂಗ್ರೆಸ್‌ನ ವಡ್ನಾಳು ರಾಜಣ್ಣ ಇಬ್ಬರೂ ಸಾದು ಲಿಂಗಾಯತರು. 'ಸುವರ್ಣ ಯುಗ' ಪಕ್ಷದಿಂದ ಸ್ಪರ್ಧಿಸಿದ್ದ ಮಹಿಮ ಪಟೇಲ್ ಬಣಜಿಗ ಲಿಂಗಾಯತ. ಇವರೆಲ್ಲರ ನಡುವೆ ಜೆಡಿಎಸ್ ಪಕ್ಷದಿಂದ ವದಿಗೆರೆ ರಮೇಶ ಎಂಬಾತನೂ ಚುನಾವಣಾ ಕಣದಲ್ಲಿದ್ದ. ಇತರರೆಲ್ಲರೂ ಲಿಂಗಾಯತರಾಗಿದ್ದರೆ ಈ ವದಿಗೆರೆ ರಮೇಶ ಮಾತ್ರ ಹಿಂದುಳಿದ ನಾಯಕ ಸಮುದಾಯದವನು.

ಜಾತಿರಾಜಕಾರಣ

ಕೊನೆಗೂ ಮಹಿಮನ ತಪಸ್ಸಿನ ಮಹಿಮೆಗೆ ಮತದಾರ ಸೊಪ್ಪು ಹಾಕಲಿಲ್ಲ, ಆತ ನಂಬಿದ್ದ ಕಲ್ಕಿ ಕೂಡ ಕೈಕೊಟ್ಟ. ವಡ್ನಾಳು ರಾಜಣ್ಣ ಮಕಾಡೆ ಮಲಗಿದ. ಜೆಡಿಎಸ್‌ನ ವದಿಗೆರೆ ರಮೇಶ ಸೋತರೂ ಮಾಡಾಳು ವಿರೂಪಾಕ್ಷಪ್ಪನಿಗೆ ನೀರಿಳಿಸುವಂತೆ ಸ್ಪರ್ಧೆ ಒಡ್ಡಿದ. ಬಹಳಷ್ಟು ಲಿಂಗಾಯತರು ಯಡ್ಡಿಯ ಕಾರಣಕ್ಕೆ ಬಿಜೆಪಿಯನ್ನೇ ಬೆಂಬಲಿಸಬೇಕೆನ್ನುವ ನಿರ್ಧಾರಕ್ಕೆ ಬಂದಿದ್ದರಿಂದ ವಿರೂಪಾಕ್ಷಪ್ಪ ಜೆಡಿಎಸ್‌ನ ರಮೇಶ್‌ಗಿಂತ ಕೇವಲ 8000 ಚಿಲ್ಲರೆ ಹೆಚ್ಚು ಮತಗಳನ್ನು ಪಡೆದು ಗೆದ್ದು ಬಿಟ್ಟ.

ಮಾಡಾಳು ವಿರೂಪಾಕ್ಷಪ್ಪ ಗೆದ್ದ ಕ್ಷಣದಿಂದ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಗತಿಯೇ ಬದಲಾಗಿಹೋಯಿತು. ಕ್ಷೇತ್ರದಲ್ಲಿ ಜಾತಿರಾಜಕಾರಣ ಭುಗಿಲೆದ್ದಿತು. "ಲಿಂಗಾಯತರೇ ನನ್ನ ಗೆಲುವಿಗೆ ಕಾರಣ, ಯಡಿಯೂರಪ್ಪನೇ ನನ್ನ ನಾಯಕ" ಎಂದು ವಿರೂಪಾಕ್ಷಪ್ಪ ಬಹಿರಂಗವಾಗಿ ಸಾರುತ್ತಿರುವುದು ಚನ್ನಗಿರಿಯ ಮಾನವನ್ನ ಮೂರು ಕಾಸಿಗೆ ಹರಾಜಿಗೆ ಹಾಕಿದಂತಾಗಿದೆ.

ಒಂದೆಡೆ ವಿರೂಪಾಕ್ಷಪ್ಪ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿದ್ದರೆ ಇನ್ನೊಂದೆಡೆ ಕಾಮಗಾರಿಗಳ ಹೆಸರಲ್ಲಿ ಬರಪೂರ ಕಮೀಷನ್ ವಸೂಲಿ ಮಾಡುತ್ತಿದ್ದಾನೆ. ವಿರೂಪಾಕ್ಷಪ್ಪನ ಹಿರಿಯ ಮಗ ಮಲ್ಲಿಕಾರ್ಜುನ ಸ್ವತಃ ಗುತ್ತಿಗೆದಾರನಾಗಿದ್ದು ಗ್ರಾಮ ಪಂಚಾಯತಿಗಳ ಸಣ್ಣ ಕಾಮಗಾರಿಗಳನ್ನೂ ಬೇರೆಯವರಿಗೆ ಬಿಡದೆ ತಾನೇ ಬೇನಾಮಿ ಹೆಸರಲ್ಲಿ ಮಾಡಿಸುತ್ತಿದ್ದಾನೆ. ಚನ್ನಗಿರಿ ಮತ್ತು ನಲ್ಲೂರು ಪಟ್ಟಣಗಳಲ್ಲಿ ರಸ್ತೆ ದೀಪ, ಕುಡಿಯುವ ನೀರು ಇತ್ಯಾದಿ ಸವಲತ್ತುಗಳು ಸಿಗುತ್ತಿದ್ದರೂ ಕ್ಷೇತ್ರದ ಗ್ರಾಮೀಣ ಪ್ರದೇಶಗಳ ರಸ್ತೆಗಳು ಅದ್ವಾನ ಎದ್ದು ಹೋಗಿದೆ. ಆದರೆ ದಾಖಲೆಗಳಲ್ಲಿ ಮಾತ್ರ ಎಲ್ಲ ಕೆಲಸಗಳು ನಡೆದಿವೆ.


ವಡ್ನಾಳ್ ರಾಜಣ್ಣ

ಕಳೆದ ಚುನಾವಣೆ ಸಂದರ್ಭದಲ್ಲಿ ದುಡ್ಡಿಗಾಗಿ ಪರದಾಡಿದ್ದ ವಿರೂಪಾಕ್ಷಪ್ಪ ಮುಂಬರುವ ಚುನಾವಣೆಗೆ ಅದೆಷ್ಟು ಕೋಟಿ ಆದೀತು ಎನ್ನುವ ಅಹಂಕಾರವನ್ನು ಮೆರೆಯುತ್ತಿರುವ ಮತದಾರರನ್ನು ಕಂಗೆಡಿಸಿಬಿಟ್ಟಿದೆ. ಸಾದು ಲಿಂಗಾಯತರೂ ಕುಲಸ್ಥ ಶಾಸಕನ ತಿನ್ನಾಟಕ್ಕೆ ಬೇಸರ ಪಡುವಂತಾಗಿದೆ.

ಹಾಗೆ ನೋಡಿದರೆ ಶಾಸಕ ವಿರೂಪಾಕ್ಷಪ್ಪನಿಗಿಂತ ಆತನ ಮಗ ಮಲ್ಲಿಕಾರ್ಜುನನದ್ದೇ ಕ್ಷೇತ್ರದಲ್ಲಿ ಕಾರುಬಾರು. ಎಷ್ಟರಮಟ್ಟಿಗೆಂದರೆ ವಿರೂಪಾಕ್ಷಪ್ಪ ಡಮ್ಮಿ ಶಾಸಕನಾಗಿ ಆತನ ಮಗನೇ ಶಾಸಕನಾಗಿ ಜನರಿಗೆ ಕಾಣಿಸುತ್ತಿದ್ದಾನೆ. ಇದೆಲ್ಲದರ ಮಧ್ಯೆ ಸರ್ಕಾರದ ಆಯಕಟ್ಟಿನ ಜಾಗಗಳಲ್ಲಿ ತನ್ನ ಸ್ವಜಾತಿ ಲಿಂಗಾಯತರನ್ನೇ ವಿರೂಪಾಕ್ಷಪ್ಪ ನೇಮಿಸಿಕೊಂಡಿದ್ದಾನೆ. ಪರಿಣಾಮವಾಗಿ ಚನ್ನಗಿರಿಗೆ ತಹಶೀಲ್ದಾರನಾಗಿ ವಕ್ಕರಿಸಿಕೊಂಡಿರುವ ರೇವಣಸಿದ್ದಪ್ಪನೆಂಬ ಲಿಂಗಾಯತ ಇವತ್ತು ತನ್ನ ಜವಾಬ್ದಾರಿಗಳನ್ನು ಮರೆತು ಶಾಸಕನ ಅನಧಿಕೃತ ಸೇವಕನಂತೆ ವರ್ತಿಸುತ್ತಿದ್ದಾನೆ.

ಯಾರು ದಿಕ್ಕು?

ಪರಿಸ್ಥಿತಿ ಹೀಗಿರುವಾಗ ಚನ್ನಗಿರಿಗೆ ಯಾರು ದಿಕ್ಕು ಎಂಬ ಚಿಂತೆ ಜನರನ್ನು ಕಾಡುತ್ತಿದೆ.

ಈಗ ಮಹಿಮ ಪಟೇಲ್ ಕೂಡ ಕಾಂಗ್ರೆಸ್ ಸೇರಿರುವುದರಿಂದ ಮುಂದಿನ ಚುನಾವಣೆಯಲ್ಲಿ ಯಾರಿಗೆ ಪಕ್ಷದ ಟಿಕೆಟ್ ಎಂಬುದರ ಬಗ್ಗೆ ವಡ್ನಾಳು ರಾಜಣ್ಣ ಮತ್ತು ಮಹಿಮ ನಡುವೆ ಸಮರ ಶುರುವಾಗಿದೆ. ವಡ್ನಾಳು ರಾಜಣ್ಣ ಈಗ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿರುವುದರಿಂದ ಆತನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕರೂ ಚುನಾವಣೆ ನಡೆಸುವುದು ಕಷ್ಟಕರ. ಅದೇ ಹೊತ್ತಿಗೆ ಮಹಿಮನ ಬಗ್ಗೆ ಮತ್ತೆ ಮತದಾರರಲ್ಲಿ ಭರವಸೆ ಮೂಡುವುದೂ ಕಷ್ಟ. ತನ್ನ ತಂದೆಯ ಬಗ್ಗೆ ಜನರಲ್ಲಿರುವ ಪ್ರೀತಿಯನ್ನು ಮತಗಳಾಗಿ ಪರಿವರ್ತಿಸಿಕೊಳ್ಳುವ ಜಾಣತನ ಮಹಿಮನಿಗಿಲ್ಲ.

ಲಿಂಗಾಯತರಿಗೇ ಗೆಲುವು?

ಒಂದು ಅಚ್ಚರಿಯ ಸಂಗತಿಯೆಂದರೆ ದೇಶಕ್ಕೆ ಸ್ವಾತಂತ್ರ ಬಂದನಂತರದ ಅಷ್ಟೂ ಚುನಾವಣೆಯಲ್ಲೂ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸ್ಪರ್ಧಿಸುತ್ತಲೇ ಬಂದಿದ್ದರೂ ಚನ್ನಗಿರಿ ವಿಧಾನಸಭಾ ಕ್ಷೇತ್ರ ಪ್ರತಿ ಬಾರಿ ಲಿಂಗಾಯತರನ್ನೇ ಗೆಲ್ಲಿಸುತ್ತಾ ಬಂದಿದೆ.

ಇಲ್ಲಿ ಲಿಂಗಾಯತರು ಹೆಚ್ಚುಸಂಖ್ಯೆಯಲ್ಲಿದ್ದರೂ ನಾಯಕರ ಮತಗಳೇ 35 ಸಾವಿರದಷ್ಟಿವೆ. ಇದಲ್ಲದೆ ಉಪ್ಪಾರರು, ಮುಸ್ಲಿಮರು, ಕುರುಬರು ಅಂತೆಲ್ಲ ಇತರ ಸಮುದಾಯಗಳ ಮತಗಳನ್ನು ಸೇರಿಸಿದರೆ ಇಲ್ಲಿ ಲಿಂಗಾಯತರಿಗಿಂತ ಇತರರ ಸಂಖ್ಯೆಯೇ ಹೆಚ್ಚಾಗುತ್ತದೆ. ಇಷ್ಟೆಲ್ಲ ಇದ್ದರೂ ಜೆ.ಎಚ್.ಪಟೇಲರು ಇಲ್ಲಿಂದ ಸತತವಾಗಿ ಗೆದ್ದು ಬಂದಿದ್ದಕ್ಕೆ ಕಾರಣ ಇಲ್ಲಿನ ದಲಿತರು, ಅಲ್ಪಸಂಖ್ಯಾತರು ಮತ್ತು ಇತರೆ ಹಿಂದುಳಿದ ವರ್ಗಗಳು ತಮ್ಮ ಜಾತ್ಯತೀತ ಮನೋಭಾವವನ್ನು ಮೆರೆದದ್ದು.

ಲಿಂಗಾಯತೇತರ ಐಕ್ಯತೆ?

ಈಗ ರಾಜ್ಯದಲ್ಲಾಗಿರುವಂತೆ ಚನ್ನಗಿರಿಯಲ್ಲೂ ಪರಿಸ್ಥಿತಿ ಬದಲಾಗಿದೆ. ಯಡಿಯೂರಪ್ಪನ ಭ್ರಷ್ಟಾಚಾರ, ಅಧಿಕಾರದ ದಾಹ, ತಿಕ್ಕಲುತನಗಳು ಜನರಲ್ಲಿ ರೇಜಿಗೆ ಹುಟ್ಟಿಸಿದೆ. ಅದೇರೀತಿ ಮಾಡಾಳು ವಿರೂಪಾಕ್ಷಪ್ಪನ ಅಹಂಕಾರ, ಸ್ವಜಾತಿ ಪ್ರೀತಿ ಮತ್ತು ನುಂಗಾಟಗಳು ಚನ್ನಗಿರಿ ಮತದಾರರಲ್ಲಿ ಅಸಹನೆ ಉಂಟುಮಾಡಿದೆ.


ಇದೇ ಹೊತ್ತಿನಲ್ಲಿ ಕಾಂಗ್ರೆಸ್‌ನಲ್ಲಿ ವಡ್ನಾಳು ರಾಜಣ್ಣ ಮತ್ತು ಮಹಿಮ ನಡುವೆ ಮೂಲ-ವಲಸಿಗ ಎಂಬ ಕಚ್ಚಾಟ ಶುರುವಾಗಿದೆ. ಇವರಿಬ್ಬರಿಗೆ ಒಬ್ಬರನ್ನೊಬ್ಬರು ಕಂಡರಾಗುವುದಿಲ್ಲ, ಇವರಿಬ್ಬರಲ್ಲಿ ಯಾರಿಗೇ ಕಾಂಗ್ರೆಸ್ ಟಿಕೆಟ್ ನೀಡಿದರೂ ವಿರೋಧಿ ಗುಂಪು ಪಕ್ಷದ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡುವುದು ಗ್ಯಾರಂಟಿ ಎಂಬಂತಾಗಿದೆ.

ಮುಂದಿನ ಬಾರಿಯೂ ಜೆಡಿಎಸ್‌ನಿಂದ ವದಿಗೆರೆ ರಮೇಶನಿಗೇ ಟಿಕೆಟು ಸಿಗುವ ಸಾಧ್ಯತೆ ಹೆಚ್ಚಾಗಿದೆ. ಕಳೆದ ಚುನಾವಣೆಯಲ್ಲಿ 28 ಸಾವಿರ ಮತಗಳನ್ನು ಪಡೆದಿದ್ದ ರಮೇಶ ಈಗಾಗಲೇ ತಮ್ಮ ಚುನಾವಣಾ ಪ್ರಚಾರವನ್ನು ಶುರುಮಾಡಿದ್ದಾರೆ. ಮಾಡಾಳು ವಿರೂಪಾಕ್ಷಪ್ಪ ವಡ್ನಾಳು ರಾಜಣ್ಣ ಮತ್ತು ಮಹಿಮ - ಈ ಮೂವರೂ ಲಿಂಗಾಯತ ಸಮುದಾಯದವರಾಗಿರುವುದೇ ವದಿಗೆರೆ ರಮೇಶನಿಗೆ ಪೂರಕವಾಗುವ ಸಾಧ್ಯತೆಗಳಿವೆ.

ಬರುವ ಚುನಾವಣೆಯಲ್ಲಿ ಮತದಾರರು ಇಲ್ಲಿಯತನಕ ಲಿಂಗಾಯತರನ್ನು ಗೆಲ್ಲಿಸಿದ್ದು ಸಾಕು, ನಾಯಕ ಸಮುದಾಯದ ವದಿಗೆರೆ ರಮೇಶನನ್ನು ಒಂದು ಸಲ ಗೆಲ್ಲಿಸಿ ನೋಡುವ ಎಂಬ ನಿರ್ಧಾರಕ್ಕೆ ಬಂದರೆ ಇಲ್ಲಿನ ಚಿತ್ರಣವೇ ಬದಲಾಗುತ್ತದೆ.

ಅದಕ್ಕೆ ಲಿಂಗಾಯತೇತರ ಸಮುದಾಯಗಳು ಮನಸ್ಸು ಮಾಡಬೇಕಷ್ಟೇ.

• ಟಿ.ಎನ್.ಷಣ್ಮುಖ



ತಲ್ಲಣಿಸದಿರು ಮನವೇ

●●●

ಶಿವಪ್ರಕಾಶನಿಗೆ ಈ ಮುಂಚೆ ಕನಸುಗಳು ಬೀಳುವುದೇ ಅಪರೂಪವಾಗಿತ್ತು. ಕಳೆದ ಒಂದು ವರ್ಷದಿಂದ ಕನಸುಗಳು ಅವನ ನಿದ್ದೆಯನ್ನೇ ಗುತ್ತಿಗೆ ಹಿಡಿದಂತೆ ಬೀಳುತ್ತಿವೆ. ತೀರಾ ಅಪರೂಪಕ್ಕೊಮ್ಮೆ ಒಳ್ಳೆಯ ಕನಸುಗಳನ್ನು ಬಿಟ್ಟರೆ ಬಹುತೇಕವಾಗಿ ಸಾವು-ನೋವುಗಳಿಗೆ ಸಂಬಂಧಿಸಿದ ಕನಸುಗಳೇ.. ಅದರಲ್ಲೂ ತನ್ನ ಕುಟುಂಬದವರೇ ಹೀಗೆ ಮತ್ತೆ ಮತ್ತೆ ಕನಸಿನಲ್ಲಿ ಸಾಯುವುದಿತ್ತು. ಒಂದು ಬಾರಿ ಸ್ವತಃ ಶಿವಪ್ರಕಾಶ ತನ್ನ ಸಾವನ್ನು ಅದಕ್ಕೆ ಸಿಗಬಹುದಾದ ಪ್ರತಿಕ್ರಿಯೆಯನ್ನು ಕೂಡಾ ಕನಸಿನಲ್ಲಿ ಕಂಡಿದ್ದಾನೆ.


●●●

ಹೀಗೆ ಕಥೆಯೊಂದು ಕನಸಾಗಿ ಆ ಪರಿ ಕಾಡುತ್ತದೆ ಎಂದು ಮೊದಲೇ ತಿಳಿದಿದ್ದರೆ ಲೇಖಕ ಶಿವಪ್ರಕಾಶ ಆ ಕಥೆಯನ್ನೇ ಬರೆಯುತ್ತಿರಲಿಲ್ಲ. ಹೌದು. ಆ ಕಥೆ ಅವನನ್ನು ಮತ್ತೆ ಮತ್ತೆ ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ ಜೊತೆಗಿರುವವರು ಕೂಡಾ ಹೈರಾಣಾಗುವಂತೆ ಅಮೂರ್ತವಾಗಿ ಅವನ ಬೆನ್ನಿಗೆ ಬಿದ್ದು ಕಾಡುತ್ತಿದೆ. ಅಂಗ್ಲಭಾಷೆಯ ಅಧ್ಯಾಪಕನಾದ ಶಿವಪ್ರಕಾಶ ತರಗತಿಯಲ್ಲಿ ಪಾಠ ಮಾಡುವಾಗ ಆ ಕಥೆಯ ಯಾವುದೋ ಒಂದು ಎಳೆ ನೆನಪಾಗಿ ಇಣುಕಿಕೊಂಡರೂ ಸಾಕು ವಿಚಲಿತನಾದಂತೆ ತೋರುತ್ತಿದ್ದ. ಏನೋ ಹೇಳಲು ಹೊರಟು, ಏನೋ ಹೇಳುತ್ತಿದ್ದ. ವಿದ್ಯಾರ್ಥಿಗಳು ತಮ್ಮಲ್ಲಿಯೇ ಗುಸುಗುಸು ಎನ್ನುತ್ತಿರುವುದನ್ನು ಕಂಡು ಮತ್ತೆ ವಾಸ್ತವಕ್ಕೆ ಮರಳುತ್ತಿದ್ದ. ಧಾರವಾಡದ ಖಾಸಗಿ ಕಾಲೇಜೊಂದರಲ್ಲಿ ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಅಂಗ್ಲಭಾಷೆಯ ಅಧ್ಯಾಪಕನಾಗಿ ಕೆಲಸ ಮಾಡಿದ ಶಿವಪ್ರಕಾಶ, ಇಲ್ಲಿಯವರೆಗೆ ನೂರಾರು ಕಥೆಗಳನ್ನು ಬರೆದು, ಹತ್ತಾರು ಪುಸ್ತಕಗಳನ್ನು ಪಡೆದುಕೊಂಡರೂ ಕೀರ್ತಿ ಶನಿಯ ಅರಿವಿನಿಂದ ಹೊರಗುಳಿದಿರಲಿಲ್ಲ. ಹಾಗಾಗಿಯೇ ಪ್ರಶಸ್ತಿ ಘೋಷಣೆಯಾದ ದಿನದಿಂದ ಒಂದು ವಾರದವರೆಗೆ ಮೊಬೈಲನ್ನು ಸ್ವಿಚ್ ಆಫ್ ಮಾಡಿ ಇಡುವ ಇವನ ಮನಃಸ್ಥಿತಿಯನ್ನು ಗೆಳೆಯರೆಲ್ಲರೂ ಛೇಡಿಸುತ್ತಿದ್ದರು. ತನ್ನ ಒಂದು ಕಥೆ ತನ್ನನ್ನು ಆ ಹಂತಕ್ಕೆ ಕರೆದೊಯ್ಯಬಹುದು ಎಂದು ಆತ ಎಣಿಸಿರಲೇ ಇಲ್ಲ. ಪಾಠ ಮಾಡುವ ವೇಳೆಯಲ್ಲಿ ರಸ್ತೆ ಮೇಲೆ ಯಾವುದೋ ಒಂದು ವಾಹನ ವಿಕಾರವಾಗಿ ಹಾರ್ನ್ ಮಾಡಿದರೂ ಸಾಕು ಶಿವಪ್ರಕಾಶ ಒಂದುಕ್ಷಣ ತತ್ತರಿಸಿ ಹೋದವನಂತೆ ತೋರುತ್ತಿದ್ದ. ಅದೊಂದು ದಿನ ಹೆಮಿಂಗ್ವೇ ಕಾದಂಬರಿಯನ್ನು ಪಾಠ ಮಾಡುವ ಗಳಿಗೆಯಲ್ಲಿ ಆತ ತನ್ನನ್ನೇ ತಾನು ಮರೆತು, ಆ ಕಾದಂಬರಿಯ ಸನ್ನಿವೇಶವೊಂದನ್ನು ಅತ್ಯಂತ ಭಾವಪರವಶನಾಗಿ ಚರ್ಚಿಸುತ್ತಿದ್ದಾಗ ಕಾಲೇಜಿನ ಎದುರಿನ ರಸ್ತೆಯಲ್ಲಿ ವಾಹನವೊಂದು ಜೋರಾಗಿ ಚೊಂಯ್.. ಎಂದು ಬ್ರೇಕ್ ಹಾಕಿದ ಸದ್ದಿಗೆ ಕೈಯಲ್ಲಿ ಹಿಡಿದಿದ್ದ ಕಾದಂಬರಿಯನ್ನೇ ಬಿಟ್ಟಿದ್ದ. ಎರಡೂ ಕೈಗಳನ್ನು ಬಲವಾಗಿ ಕಿವಿಗೆ ಮುಚ್ಚಿದ್ದ. ಅವನ ತುಟಿಗಳು ಅದುರುತ್ತಿದ್ದವು. ವಿದ್ಯಾರ್ಥಿಗಳು ಆ ರೂಪದಲ್ಲಿ ತರಗತಿಯೊಳಗೆ ಹಿಂದೆಂದೂ ಶಿವಪ್ರಕಾಶನನ್ನು ಕಂಡಿರಲಿಲ್ಲ. ಇಡೀ ಕಾಲೇಜಿನಲ್ಲಿಯೇ ಒಳ್ಳೆಯ ಅಧ್ಯಾಪಕ ಎಂದು ಹೆಸರು ಗಳಿಸಿದ ಶಿವಪ್ರಕಾಶ ಈಗೀಗ ಅದೇಕೋ ಕೊಂಚ ಮಾನಸಿಕವಾಗಿ ವಿಚಲಿತನಾದಂತೆ ತೋರುತ್ತಿದ್ದ. ಏನೋ ಮಾಡಲು ಹೊರಟು ಇನ್ನೇನೋ ಮಾಡುತ್ತಿದ್ದ. ಜೊತೆಗಿದ್ದವರನ್ನು ಅಲ್ಲಿಯೇ ಬಿಟ್ಟು ನಡೆದುಬಿಡುತ್ತಿದ್ದ. ಆಮೇಲೆ ನೆನಪಾಗಿ ಛೇ..! ಎಂದು ಅವರನ್ನು ಹುಡುಕುತ್ತಿದ್ದ. ಕ್ಷಮೆ ಕೇಳುತ್ತಿದ್ದ. ಒಂದು ಬಾರಿಯಂತೂ ಹೊಟೇಲ್ ಒಂದರಲ್ಲಿ ತನ್ನ ಸಹ ಅಧ್ಯಾಪಕರೊಂದಿಗೆ ಚಹಾ ಕುಡಿಯಲೆಂದು ತೆರಳಿದವನು ಅದೇನೋ ಒಂದು ಫೋನ್‌ಕಾಲ್ ರಿಸೀವ್ ಮಾಡಲೆಂದು ಹೋದವನು ಸೀದಾ ಸ್ಟಾಫ್ ರೂಮಿಗೆ ಬಂದು ತಲುಪಿದ್ದ. ಇನ್ನೊಂದು ವಿಚಿತ್ರವೆಂದರೆ ಹಾಗೆ ಎಲ್ಲರನ್ನು ಚಹಾ ಕುಡಿಯಲು ಕರೆದುಕೊಂಡು ಹೋದವನೇ ಅವನಾಗಿತ್ತು. ಎಷ್ಟೋ ಹೊತ್ತಿನ ಮೇಲೆ ಅವನಿಗೆ ನೆನಪಾಗಿ ಪಶ್ಚಾತ್ತಾಪ ಪಟ್ಟಿದ್ದ.

ದೀಪಾವಳಿ ಹಬ್ಬಕ್ಕೆಂದು ಊರಿನಿಂದ ಬಂದಿದ್ದ ತನ್ನ ತಂದೆಯನ್ನು ಬಸ್ ಹತ್ತಿಸಲು ತೆರಳಿದ್ದ ಶಿವಪ್ರಕಾಶ ಯಾವುದೋ ಒಂದು ಬೇರೆ ಊರಿನ ಬಸ್ ಹತ್ತಿಸಿ 'ಊರಿಗೆ ಹೋದಮೇಲೆ ಫೋನ್ ಮಾಡು' ಎನ್ನುತ್ತಿರುವಾಗ ಕಂಡಕ್ಟರ್ ಎಲ್ಲಿಗೆ ಎಂದು ಕೇಳಿದ್ದೇ ತಡ, 'ಮಾರಾಯರೇ ಇದು ಜಮಖಂಡಿಗೆ ಹೋಗೂದಿಲ್ಲ, ಬೋರ್ಡ್ ನೋಡ ಬಾರದಾ..?' ಎಂದಾಗ ಶಿವಪ್ರಕಾಶ ನಾಲಿಗೆ ಕಚ್ಚಿ ತನ್ನ ಕೈಯಿಂದ ನೆತ್ತಿಯ ಹಿಂಬದಿಯನ್ನು ಚಚ್ಚಿಕೊಂಡಿದ್ದ. ಅವನ ತಂದೆಯೂ ಮಗನ ಈ ಅವಸ್ಥೆಯನ್ನು ಕಂಡು ಕನಿಕರ ಪಟ್ಟಿದ್ದರು. ಸದಾ ತುಂಬಾ ಅಲರ್ಟ್ ಆಗಿರುವ ಶಿವಪ್ರಕಾಶ ಹೀಗೆ ಮಹಾನ್ ಮರೆಗುಳಿಯಾಗಿರುವುದು, ಸದಾ ಏನೋ ಧ್ಯಾನಿಸುವಂತಿರುವ ಸ್ಥಿತಿಯನ್ನು ಕಂಡು ಅವನ ಕುಟುಂಬದವರಿಗೆಲ್ಲಾ ಅಚ್ಚರಿಯಾಗಿದೆ. ಹೆಂಡತಿ ಪ್ರಮೀಳಾ ಗಂಡನ ಆ ಬಗೆಯ ವರ್ತನೆಯನ್ನು ಕಂಡಾಗಲೊಮ್ಮೆ 'ಅತಿಯಾಗಿ ಓದಿದರೆ, ಬರೀತಾ ಕೂತರೆ ಇನ್ನೇನಾಗಬೇಕ..? ನಿಮ್ಮನ್ನ ಮದುವೆಯಾದ ಹೊಸತರಲ್ಲಿಯೇ ನಮ್ಮ ತಂದೆ ನಿಮಗೆ ಈ ಮಾತ ಹೇಳಿದ್ದರು' ಅಂತಿದ್ದಳು. ಶಿವಪ್ರಕಾಶ ಆಕೆಯ ಮಾತನ್ನು ಕೇಳಿ ಮುಗುಳ್ನಗುವುದನ್ನು ಬಿಟ್ಟು ಬೇರೆ ಏನನ್ನೂ ಮಾತನಾಡುತ್ತಿರಲಿಲ್ಲ. ಈಗೀಗ ಮಕ್ಕಳಾದ ನವೀನ ಮತ್ತು ರೂಪಾ ಇಬ್ಬರೂ ಶಿವಪ್ರಕಾಶನನ್ನು ತಮಾಷೆ ಮಾಡಲು ಶುರು ಮಾಡಿದ್ದಾರೆ. ಡೈನಿಂಗ್ ಟೇಬಲಲ್ಲಿ ಏನೇನು ಇದೆ ಎನ್ನುವುದನ್ನು ಅವನ ಊಟ ಮುಗಿಯುವವರೆಗೂ ನೆನಪು ಮಾಡುತ್ತಿರಬೇಕು. ಅನೇಕ ಬಾರಿ ರೈಸ್ ಊಟ ಮಾಡದೇ ಕೈ ತೊಳೆದು ಆಮೇಲೆ ಮತ್ತೆ ಅನ್ನ ಸಾರು ಊಟ ಮಾಡಿದ ದಿನಗಳಿವೆ.. ಮಗಳು ರೂಪಾ 'ಮಮ್ಮೀ, ಪಪ್ಪಾ ಏನೋ ಯೋಚನೆಯಲ್ಲೇ ಇರ್ತಾರೆ. ನೋಡು ಮತ್ತೆ ನಿನಗೆ ಗೊತ್ತಾಗದ ಹಾಗೆ ಎಲ್ಲಾದರೂ ಒಂದು ಸೆಟಪ್ ಮಾಡಿರಬಹುದು' ಎಂದಾಗ 'ಹಂಗ ಮಾಡಿ ಅಲ್ಲೆ ಉಳಿದರೆ ನನಗೂ ಸಾಕಾಗ್ಯೆತಿ' ಎಂದು ಆತನ ಹೆಂಡತಿ ಅಂದಾಗ ಶಿವಪ್ರಕಾಶ 'ಇವಳೊಬ್ಬಳನ್ನೇ ನನಗೆ ಸರಿಯಾಗಿ ನೆನಪಿಡಲಿಕ್ಕೆ ಆಗ್ತಾ ಇಲ್ಲ, ಇನ್ಯಾವ ಸೆಟಪ್ ಕರ್ಮ..?' ಅನ್ನುತ್ತಾ ಮೊಸರು-ಅನ್ನ ಊಟ ಮಾಡದೇ ಕೈ ತೊಳೆದು ಎದ್ದಾಗಿತ್ತು.

****

ಆ ದಿನ ಸ್ನೇಹಿತನ ಮಗಳ ಮದುವೆ. ದಾವಣಗೆರೆಗೆ ತೆರಳುವುದಿತ್ತು, ಇಡೀ ಫ್ಯಾಮಿಲಿ ಬರಬೇಕು ಎಂದು ಆತ ಕರೆದಿದ್ದ. ಪಿ.ಜಿ.ಯಲ್ಲಿ ಇಬ್ಬರೂ ಕ್ಲಾಸಮೇಟ್ಸ ಹೀಗಾಗಿ ಮದುವೆಯನ್ನಂತೂ ತಪ್ಪಿಸುವಂತಿಲ್ಲ. ಎಲ್ಲರಿಗಿಂತಲೂ ಬೇಗ ಎದ್ದು ಸ್ನಾನ ಮಾಡಿ ರೆಡಿಯಾದ ಶಿವಪ್ರಕಾಶ ಹೆಂಡತಿ ಮತ್ತು ಮಕ್ಕಳನ್ನೂ ಎಬ್ಬಿಸಿದ. ತಾನು ಬರುವುದಿಲ್ಲ ಎಂದು ಮಗಳ ಹಟ. ಆಕೆಗೆ ದಾವಣಗೆರೆಯಲ್ಲಿ ಬಟ್ಟೆ ಇಸಿದುಕೊಡುವ ಮಾತು ಕೊಟ್ಟು ರೆಡಿ ಮಾಡಲಾಯಿತು. ಮಗನದೂ ಅದೇ ರಾಗ. ತನಗೆ ಈ ಮದುವೆಗಿದುವೆ ಎಲ್ಲಾ ಬೋರಿಂಗ್ ನೀವು ಹೋಗಿ ಬನ್ನಿ ಅಂತ ಖಂಡಿತವಾಗಿ ಆತ ಹೇಳಿದ. ಅವನು ಬರದಿದ್ದರೆ ಕಾರ್ ಡ್ರೈವಿಂಗ್ ಮಾಡಿಕೊಂಡು ಹೋಗುವುದು ಶಿವಪ್ರಕಾಶಗೆ ಕಷ್ಟ. ತನ್ನ ಪರೀಕ್ಷೆ ಬೇರೆ ಹತ್ತಿರ ಬಂತು ತಾನು ಬರೋದಿಲ್ಲ ಎಂದು ಮಗ ಒಂದೇ ರಾಗ ತೆಗೆದ. ಎಂದಿನಂತೆ ಹೆಂಡತಿ ಕೂಡಾ ಮಗನನ್ನೇ ಬೆಂಬಲಿಸಿದಳು. ಒಬ್ಬ ಡ್ರೈವರನ್ನು ಕರಕೊಂಡು ಹೋದರಾಯ್ತು ಅಂತ ತೀರ್ಮಾನಿಸಿದರು. 'ನಿಮಗೆ ಎಷ್ಟು ಹೊತ್ತಾದರೂ ಟೈಮ್ ಸಾಲುವದಿಲ್ಲ ಬೇಗಬೇಗ ರೆಡಿಯಾಗಿ ಅಕ್ಷತೆ ಟೈಮಲ್ಲಿ ಅಲ್ಲಿರಬೇಕು' ಎಂದು ಶಿವಪ್ರಕಾಶ ಗಡಿಬಿಡಿ ಮಾಡುತ್ತಿರುವಾಗಲೇ ಹೆಂಡತಿ ಹೊರಬಂದಳು. ಶಿವಪ್ರಕಾಶ ಗಲಿಬಿಲಿಗೊಂಡ. ಹೆಂಡತಿ ಪ್ರಮೀಳಾ ಎಂದೂ ಚೂಡಿದಾರ್ ಹಾಕಿದವಳಲ್ಲ, ಅಂದು ಅದೇನೋ.. ಆಕೆ ಮಗಳ ಚೂಡಿದಾರ್ ಧರಿಸಿದ್ದಳು. ಮಗಳು ಅಮ್ಮನ ಸೀರೆ ತೊಟ್ಟಿದ್ದಳು. 'ಇದೇನಿದು.. ಈ ವಯಸ್ಸಲ್ಲಿ ನೀನು ಚೂಡಿದಾರ್..?' ಅಂದಾಗ ಪ್ರಮೀಳಾ 'ನೀವೂ ಜೀನ್ಸ್ ಪ್ಯಾಂಟ್ ಹಾಗೂ ಟೀ ಶರ್ಟ್ ಹಾಕೊಳ್ಳರಿ. ಯಾರು ಬೇಡ ಅಂತಾರೆ' ಅಂದಾಗ ಶಿವಪ್ರಕಾಶ ನಗುತ್ತಾ 'ನೀನೇ ಮದುವಿ ಹುಡುಗಿ ಆಗಿಯಲ್ಲೇ..? ಬನ್ನಿ ಬನ್ನಿ ಬೇಗ ಕಾರ್ ಹತ್ತಿ ಮತ್ತೆ ತಡ ಮಾಡೂದು ಬೇಡ' ಎನ್ನುತ್ತಿರುವಂತೆ ಎಲ್ಲರೂ ಕಾರ್ ಹತ್ತಿದರು. ಇವರನ್ನು ಬೀಳ್ಕೊಡಲು ಮಗ ನವೀನ ಮನೆಯ ಮೇಲಿನ ಬಾಲ್ಕನಿಯಲ್ಲಿ ನಿಂತಿದ್ದ. ಕಾರ್ ಸ್ಟಾರ್ಟ್ ಆಗುತ್ತಿರುವಂತೆ ಒಂದು ಸಾರಿ ಭೂಮಿ ಅಲ್ಲಾಡಿದಂತಾಯ್ತು. ಡ್ರೈವರ್ 'ಸರ್ ಭೂಕಂಪ.. ಭೂಕಂಪ' ಅನ್ನುವುದರೊಳಗೆ ಮನೆ ನೆಲಸಮವಾಗಿತ್ತು. ಮಗ ನವೀನ ಆ ಕಟ್ಟಡದ ಅವಶೇಷಗಳ ಅಡಿ ಸಿಕ್ಕು ನರಳುತ್ತಿದ್ದ. ತಕ್ಷಣವೇ ಶಿವಪ್ರಕಾಶ ಕಾರಿನ ಬಾಗಿಲು ತೆಗೆದು ಧಾವಿಸಿ ಕೆಳಗಿಳಿದ... ಸುತ್ತಲೂ ಕತ್ತಲು ಮುಸುಕಿದೆ. ದೇವರ ಕೋಣೆಯ ಜೀರೋ ಬಲ್ಬು ಕೂಡಾ ಕಣ್ಣು ಮುಚ್ಚಿದೆ. ಆಗಲೇ ಆತನಿಗೆ ವಿದ್ಯುತ್ ಇಲ್ಲ ಎನ್ನುವುದು ಖಾತ್ರಿಯಾಯಿತು. ಶಿವಪ್ರಕಾಶ ಹೆದರಿ ಪೂರ್ತಿ ಹುಸಿಹುಸಿಯಾಗಿದ್ದ. ಹೊರಗಡೆ ನಾಯಿಗಳು ಬೊಗಳುವ ಸದ್ದು. ಸಮಯ ಆಗ ರಾತ್ರಿ ಎರಡು ಗಂಟೆ ಎದ್ದು ನೀರು ಕುಡಿದು 'ಛೀ ದರಿದ್ರ ಕನಸು' ಎಂದು ಗೊಣಗಿ ಮತ್ತೆ ಮಲಗಿದ.



ಕತೆ

● ಡಾ. ಎಸ್.ಬಿ.ಜೋಗುರ

****

ಶಿವಪ್ರಕಾಶನಿಗೆ ಈಗೀಗ ಏಕಾಗ್ರತೆಯಿಂದ ಕೆಲಸ ಮಾಡಲಾಗುತ್ತಿಲ್ಲ. ಏನೋ ಒಂದು ಬಗೆಯ ಮಾನಸಿಕ ಕಿರಿಕಿರಿ ಬೆನ್ನಿಗೆ ಬಿದ್ದ ಅನುಭವ. ಕಾಲೇಜಿನಲ್ಲಿ ವಿದ್ಯಾರ್ಥಿಗಳೊಂದಿಗೂ ಈಗ ಮುಂಚಿನಂತೆ ಅಂತರಕ್ರಿಯೆಯಲ್ಲಿ ತೊಡಗುತ್ತಿಲ್ಲ. ಏನೋ ಯೋಚನೆ. ಯಾವುದೋ ನೆನಪು.. ಇದ್ದಕ್ಕಿದ್ದಂತೆ ಕಳೆದುಹೋಗಿಬಿಡುವ ಅನುಭವ ಅವನನ್ನು ಬಾಧಿಸುತಿತ್ತು. ಅವನನ್ನು ನಂಬಿ ಈಗ ಯಾವ ಕೆಲಸವನ್ನೂ ಮಾಡುವಂತಿಲ್ಲ. ಮತ್ತೆ ಮತ್ತೆ ಅದೇ ಕನಸು.. ಅದೇ ಅಪಘಾತ. ಅದೇ ಬಗೆಯ ರಸ್ತೆ. ರಕ್ತ ಆದರೆ ಅಲ್ಲಿರುವ ಮುಖಗಳು ಮಾತ್ರ ಮಸುಕು ಮಸುಕು. ಕೆಲ ಬಾರಿ ತನ್ನ ಮಗ.. ಮಗಳು ಆ ಅಪಘಾತದಲ್ಲಿ ಸಿಲುಕಿದ ದೃಶ್ಯಗಳು ಕನಸಿನಲ್ಲಿ ತೇಲಿ ಬಂದಿರುವುದಿದೆ. ಶಿವಪ್ರಕಾಶನ ಮಗ ಮತ್ತು ಮಗಳು ಇಬ್ಬರೂ ಇಂಜಿನಿಯರಿಂಗಲ್ಲಿ ಓದುತ್ತಿದ್ದಾರೆ. ಮಗ ಈಗ ಕೊನೆಯ ಸೆಮ್‌ನಲ್ಲಿದ್ದರೆ, ಮಗಳು ಎರಡನೆಯ ಸೆಮ್‌ನಲ್ಲಿ ಓದುತ್ತಿದ್ದಳು. ಅವರಂತೂ ತಮ್ಮ ತಂದೆಯ ಇತ್ತೀಚಿನ ವರ್ತನೆಗಳನ್ನು ಕಂಡು ಈ ಕತೆಗಾರರು, ಸಾಹಿತಿಗಳೇ ಹೀಗೆ ಎಂದು ಶರಾ ಎಳೆದು ಬಿಟ್ಟಾಗಿದೆ. ಶಿವಪ್ರಕಾಶ ಇಲ್ಲಿಯವರೆಗೆ ನೂರಾರು ಕಥೆಗಳನ್ನು ಬರೆದಿದ್ದರೂ ಯಾವ ಕಥೆಯ ಪಾತ್ರಗಳೂ ಇಷ್ಟು ಗಾಢವಾಗಿ ಅವನನ್ನು ಬೆನ್ನಟ್ಟಿರಲಿಲ್ಲ. ಕಲಘಟಗಿ ರಸ್ತೆಯ ಆ ಬೈಪಾಸ್‌ನಲ್ಲಿ ತಲೆ ಎತ್ತಿದ ಆ ಅಪಘಾತದ ಕಥೆ ಮಾತ್ರ ಅವನನ್ನು ಮತ್ತೆ ಮತ್ತೆ ಕ್ಷಣಹೊತ್ತು ವಿಚಲಿತಗೊಳಿಸುವಷ್ಟು ಆಪ್ತವಾಗುವುದಿತ್ತು. ಶಿವಪ್ರಕಾಶನ ದೈನಂದಿನ ಬದುಕಿನ ಒಟ್ಟು ವ್ಯವಹಾರಗಳಲ್ಲಿ ಚೂರುಪಾರು ಆ ಕಥೆಯ ಸನ್ನಿವೇಶ, ಪಾತ್ರ, ಸಂಭಾಷಣೆ ಇಣುಕುತ್ತಿದ್ದವು. ಆತ ಅವೆಲ್ಲವುಗಳಿಂದ ತಪ್ಪಿಸಿಕೊಳ್ಳಲೆತ್ನಿಸಿದಷ್ಟೂ ಅವು ಗಾಢವಾಗುತ್ತಿದ್ದವು. ಅದು ಏಕೆ ಹಾಗೆ..? ಎನ್ನುವ ಪ್ರಶ್ನೆ ಶಿವಪ್ರಕಾಶನನ್ನು ಮತ್ತೆ ಮತ್ತೆ ಕಾಡುತ್ತಿತ್ತು. ಶಿವಪ್ರಕಾಶ ತನ್ನ ಕಾರನ್ನು ಡ್ರೈವ್ ಮಾಡುವಾಗಲಂತೂ ಆ ಅಪಘಾತದ ಕಥೆಯೊಳಗಿನ ತಿರುವುಗಳು ಮತ್ತು ಆ ಅಪಘಾತದ ದೃಶ್ಯ ತನ್ನ ಕಣ್ಣೆದುರಿಗಿನ ರಸ್ತೆಯ ಮೇಲೆ ಇದ್ದಕ್ಕಿದ್ದಂತೆ ಒಂದು ಸಿನಿಮಾ ದೃಶ್ಯದಂತೆ ಚಕ್ಕನೇ ಮೂಡಿ ಮಾಯವಾಗಿಬಿಡುತಿದ್ದವು. ಹೀಗೆ ಚಕ್ಕನೆ ಮೂಡಿ ಮಾಯವಾಗುವ ಮನಸಿನ ಮಾಯಾಲೋಕ ಎರಡು ಬಾರಿ ಶಿವಪ್ರಕಾಶನನ್ನು ದೊಡ್ಡ ಅಪಘಾತದಿಂದ ತಪ್ಪಿಸಿದ್ದವು. ಈಗೀಗ ದೂರದ ಸ್ಥಳಗಳಿಗೆ ತೆರಳುವುದಿದ್ದರೆ ಒಬ್ಬ ಡ್ರೈವರನನ್ನು ಗೊತ್ತುಪಡಿಸಿಕೊಂಡೇ ಆತ ಹೊರಡುತ್ತಿದ್ದ. ಶಿವಪ್ರಕಾಶ ಮನೆಯಲ್ಲಿ ತಾನು ತುಂಬಾ ಅಲರ್ಟ್ ಆಗಿ ಡ್ರೈವಿಂಗ್ ಮಾಡುತ್ತೇನೆ ಎಂದಾಗಲೆಲ್ಲಾ ಹೆಂಡತಿ ಪ್ರಮೀಳಾ 'ನೋಡಿದಿನಲ್ಲಾ, ಹಾವೇರಿ ಕ್ರಾಸ್ ಬಳಿ ಕೂದಲೆಳೆ ಅಂತರದಲ್ಲಿ ನಾವೆಲ್ಲಾ ಬಚಾವಾದದ್ದು' ಎಂದಾಗ ಅವನಿಗೆ ಮರು ಮಾತನಾಡಲಾಗುತ್ತಿಲ್ಲ.

ಸ್ಟಾಫ್ ರೂಮಲ್ಲಿ ಒಬ್ಬನೆ ಕುಳಿತಿರುವಾಗ ತನ್ನ 'ಅಪಘಾತ' ಎಂಬ ಕಥೆಯನ್ನು ನೆನಪು ಮಾಡಿಕೊಂಡು ಎಲ್ಲ ಕಥೆಗಳೂ ಒಂದೊಮ್ಮೆ ಕತೆಗಾರನನ್ನು ಹೀಗೆಯೇ ಬೆನ್ನಿಗೆ ಬಿದ್ದರೆ ಅವನ ಮನಃಸ್ಥಿತಿ ಹೇಗಿರಬೇಡ ಎಂದು ಯೋಚಿಸಿ ಒಬ್ಬನೇ ನಗುತ್ತಾ ಕುಳಿತಿರುವ ವೇಳೆಯಲ್ಲಿ ಪ್ರಿನ್ಸಿಪಾಲ್ ವೇಣುಗೋಪಾಲ್ 'ಶಿವಪ್ರಕಾಶ, ನಿಮ್ಮ ಪೀರಿಯಡ್ ಇದೆಯಂತಲ್ಲ.. ಹುಡುಗರು ಕೇಳ ಬಂದಿದ್ದರು' ಅಂದಾಗ ಶಿವಪ್ರಕಾಶ ಗಡಬಡಿಸಿ 'ಓ ಸಾರಿ ಸರ್, ಮರೆತು ಬಿಟ್ಟಿದ್ದೆ' ಎನ್ನುತ್ತ ತರಗತಿಗೆ ನಡೆದ. ಇತ್ತೀಚಿನ ದಿನಗಳಲ್ಲಿ ಶಿವಪ್ರಕಾಶ ಮತ್ತೆ ಕತೆ ಬರೆಯಲೇ ಇಲ್ಲ. ಬರೆಯಬೇಕೆಂದು ಕುಳಿತಾಗಲೆಲ್ಲಾ ಮತ್ತದೇ ಕಲಘಟಗಿ ಬೈಪಾಸ್ ಹೈವೇ.. ರಸ್ತೆಯ ತಿರುವು.. ಅಪಘಾತ.. ರಕ್ತ.. ಪೋಲಿಸು ಹೀಗೆ ಇನ್ನೂ ಏನೇನೋ ನೆನಪಾಗಿ ಬರೆಯಬೇಕೆಂದು ಹೊರಟ ಕತೆ ತುಂಡು ತುಂಡಾಗುತ್ತಿತ್ತು.

ಶಿವಪ್ರಕಾಶನ ಆ 'ಅಪಘಾತ' ಕಥೆಯಲ್ಲಿ ಮದುವೆಯಾದ ಮೊದಲ ದಿನವೇ ಕಲಘಟಗಿ ಕ್ರಾಸನ ಅಪಘಾತದಲ್ಲಿ ಹುಡುಗ-ಹುಡುಗಿ ಇಬ್ಬರೂ ಇಲ್ಲವಾಗುತ್ತಾರೆ. ಜೊತೆಗಿರುವ ಹುಡುಗನ ತಂದೆ-ತಾಯಿ ಬದುಕಿ ಉಳಿದಿರುತ್ತಾರೆ. ಒಬ್ಬನೆ ಮಗನ ಸಾವು ಕಣ್ಣಾರೆ ಕಂಡ ಹೆತ್ತವರ ಆಕ್ರಂದನಗಳು ಕತೆಗಾರ ಶಿವಪ್ರಕಾಶನ ಮನದ ಮೂಲೆಯಲ್ಲಿ ಅಮೂರ್ತವಾಗಿ ಉಳಿದುಬಿಟ್ಟಿದ್ದವು. ಹೇಗಾದರೂ ಮಾಡಿ ಅದನ್ನು ಮರೆಯಲೇಬೇಕು ಎಂದು ಪ್ರಯತ್ನಿಸುತ್ತಿರುವಾಗಲೇ ಅಪಘಾತದ ಸುದ್ದಿಯ ಚಿತ್ರಣಗಳು ಟಿ.ವಿ ಇಲ್ಲವೇ ಪತ್ರಿಕೆಯಲ್ಲಿ ಬಂದದ್ದೇ ಮತ್ತೆ ಆ ಕಥೆಯ ಪಾತ್ರಗಳು ಜೀವಂತವಾಗಿ ಕಾಡುತ್ತಿದ್ದವು. ಈಗೀಗ ಶಿವಪ್ರಕಾಶನಿಗೆ ತಾನು ಒಬ್ಬ ಮನೋವೈದ್ಯರನ್ನು ಭೇಟಿಯಾಗುವ ಅವಶ್ಯಕತೆಯಿದೆ ಎಂದೆನಿಸುತ್ತಿದೆ. ಆ ದಿಶೆಯಲ್ಲಿ ಆದಾಗಲೇ ಆತ ಡಾಕ್ಟರ್ ಪ್ರದೀಪಕುಮಾರ ಅವರ ಭೇಟಿಗಾಗಿ ಸಮಯವನ್ನು ನಿಗದಿಪಡಿಸಿಕೊಂಡಿದ್ದಾನೆ.


ಶಿವಪ್ರಕಾಶನಿಗೆ ಈ ಮುಂಚೆ ಕನಸುಗಳು ಬೀಳುವುದೇ ಅಪರೂಪವಾಗಿತ್ತು, ಕಳೆದ ಒಂದು ವರ್ಷದಿಂದ ಕನಸುಗಳು ಅವನ ನಿದ್ದೆಯನ್ನೇ ಗುತ್ತಿಗೆ ಹಿಡಿದಂತೆ ಬೀಳುತ್ತಿವೆ. ತೀರಾ ಅಪರೂಪಕ್ಕೊಮ್ಮೆ ಒಳ್ಳೆಯ ಕನಸುಗಳನ್ನು ಬಿಟ್ಟರೆ ಬಹುತೇಕವಾಗಿ ಸಾವು-ನೋವುಗಳಿಗೆ ಸಂಬಂಧಿಸಿದ ಕನಸುಗಳೇ. ಅದರಲ್ಲೂ ತನ್ನ ಕುಟುಂಬದವರೇ ಹೀಗೆ ಮತ್ತೆ ಮ[illegible] ಕನಸಿನಲ್ಲಿ ಸಾಯುವುದಿತ್ತು. ಒಂದು ಬಾರಿ ಸ್ವತಃ ಶಿವಪ್ರಕಾ[illegible] ತನ್ನ ಸಾವನ್ನು, ಅದಕ್ಕೆ ಸಿಗಬಹುದಾದ ಪ್ರತಿಕ್ರಿಯೆಯನ್ನು ಕೂಡಾ ಕನಸಿನಲ್ಲಿ ಕಂಡಿದ್ದಾನೆ. ಮರುದಿನ ತಾನು ಕನಸಿ[illegible]

ಸತ್ತೆ.. ಯಾಕೆ ಸತ್ತೆ ಎನ್ನುವ ಪ್ರಶ್ನೆಗಳಿಗೆ ಉತ್ತರಗಳನ್ನು ...ಕಲೆತ್ನಿಸಿ ಸೋತಿದ್ದ. ಕೊನೆಗೆ ಕನಸಿನಲ್ಲಿಯ ಸಾವು ...ಷ್ಯವನ್ನು ಹೆಚ್ಚಿಸುತ್ತದೆ ಎನ್ನುವ ತನ್ನ ಅವ್ವನ ಮಾತನ್ನು ...ಎ ನಿಟ್ಟುಸಿರುಬಿಟ್ಟಿದ್ದ. ಕತೆಯೊಂದು ಕನಸಾಗಿ ಈ ...ಕಾಡುತ್ತದೆ ಎಂದು ಆತ ಕನಸುಮನಸಿನಲ್ಲಿಯೂ ...ಚಿಸಿರಲಿಲ್ಲ. ಹೀಗೆ ಬೆಂಬಿಡದೇ ಕಾಡುತ್ತಿರುವ ಆ ...ಯ ಪಾತ್ರಗಳು.. ಸನ್ನಿವೇಶಗಳು.. ಇವನ್ನಾಧರಿಸಿದ ...ನ್ನು ಕುರಿತೇ ಒಂದು ಕತೆ ಬರೆಯಬೇಕೆಂದು ಹೊರಟ ...ಕಾಶನಿಗೆ ಬೀಳುವ ಬಹುತೇಕ ಕನಸುಗಳಲ್ಲಿಯ ಆರಂಭ ...ತ್ತ ಅಂತ್ಯಗಳೆರಡೂ ಅಸ್ಪಷ್ಟವಾಗಿರುತ್ತಿದ್ದುದೇ ಆತ ಕತೆ ...ಯುವಲ್ಲಿ ಒಂದು ಬಹುದೊಡ್ಡ ತೊಡಕಾಗಿತ್ತು.

* * * * *

...ಧಾರವಾಡದ ಕೆಲಗೇರಿ ರಸ್ತೆಯಲ್ಲಿರುವ ಡಾ. ಪ್ರದೀಪ ...ಮಾನಸೋಲ್ಲಾಸ ಆಸ್ಪತ್ರೆ ಈಗೀಗ ತುಂಬಾ ಗಿಜಬಿಜಿ. ...ಡಾಕ್ಟರೇ ಶಿವಪ್ರಕಾಶನ ಮುಂದೆ ಹಿಂದೆಂದಿಗಿಂತಲೂ ...ನಗರಗಳಲ್ಲಿ ಮನೋರೋಗಿಗಳ ಪ್ರಮಾಣ ತುಂಬಾ ...ಗುತ್ತಿದೆ ಎಂದು ಹೇಳಿದರು.. ಮಹಾನಗರಗಳಲ್ಲಿ ...ಹತ್ತು ಜನರಲ್ಲಿ ಒಬ್ಬಾತ ಒಂದಲ್ಲ ಒಂದು ...ರೋಗದಿಂದ ಬಳಲುತ್ತಿದ್ದಾರೆಂದು ದೆಹಲಿ ಮೂಲದ ...ಪತ್ರಿಕೆಯೊಂದನ್ನು ಉಲ್ಲೇಖಿಸಿ ಹೇಳಿದರು. ಶಿವಪ್ರಕಾಶ ...ಕೇಂದ್ರಿತ ವಿದ್ಯಾರ್ಥಿಯಂತೆ ಅತ್ಯಂತ ಏಕಾಗ್ರತೆಯಿಂದ ...ರ್ ಹೇಳುವುದನ್ನೆಲ್ಲಾ ಕಣ್ಣಗಲಿಸಿ ಕೇಳುತ್ತಿದ್ದ. ಡಾಕ್ಟರ್ ...ತನ್ನ ವಿಷಯವನ್ನು ಪ್ರಸ್ತಾಪಿಸುವುದು ಎಲ್ಲಿಂದ..? ...ಈಗೀಗ ನಿದ್ದೆ ಸರಿಯಾಗಿ ಬೀಳುವುದಿಲ್ಲ ಎಂದೋ.. ...ಬರೀ ಕೆಟ್ಟಕೆಟ್ಟ ಕನಸುಗಳು ಬೀಳುತ್ತವೆ ಎಂದೋ.. ಅಪಘಾತದ ಕನಸುಗಳೇ ಯಾಕೆ ಬೀಳುತ್ತವೆ ...ಮೋ..? ಹೀಗೆ ಹತ್ತಾರು ಪ್ರಶ್ನೆಗಳು ನಾ ಮುಂದು.. ...ಮುಂದು ಎಂದು ಆತನ ಮನದ ಮೊನೆಯ ಕೊನೆಯ ...ಿ ನಿಂತಿದ್ದವು. ಶಿವಪ್ರಕಾಶ ಆಂಗ್ಲಭಾಷಾ ಅಧ್ಯಾಪಕ ...ಎ ತಿಳಿದದ್ದೇ ಡಾಕ್ಟರ್ ಮನುಷ್ಯನ ಮನಸಿನ ವಿವಿಧ ...ಮುಗಳನ್ನು.. ಸಿಗ್ಮಂಡ್ ಫ್ರಾ ್ಯಡ್‌ನ ಕನಸುಗಳ ...ಷಣೆಯನ್ನು ತುಂಬಾ ರೋಚಕವಾಗಿ ಹೇಳಿದರು. ...ಮೂಲಕ ತಾನು ಮನಃಶಾಸ್ತ್ರವನ್ನು ತುಂಬಾ ಆಳವಾಗಿ ...ಬುವೆ ಎನ್ನುವುದನ್ನು ಸಾಬೀತುಪಡಿಸುವುದು ಅವರ ...ಶವಾಗಿತ್ತು.

...ಈಗ ನಿಮ್ಮ ವಿಷಯಕ್ಕೆ ...ಣ. ಹೇಳಿ ಏನು ...ಸ್ಯೆ..?' ಎಂದಾಗ ಅತ್ಯಂತ ...ಕಾಗಿ ಶಿವಪ್ರಕಾಶ ತಾನು ...ಕಥೆ, ಅಪಘಾತ, ...ಾಸ್ ರಸ್ತೆ, ಕಲಘಟಗಿ ... ಇವೆಲ್ಲವೂ ಕನಸಿನಲ್ಲಿ ...ಂದು ರೂಪದಲ್ಲಿ ಬಂದು ...್ನ ಕಾಡುವ ಬಗ್ಗೆ ಆ ...ನಲ್ಲಿ ತನಗೆ ಆಪ್ತರಾದವರೊಬ್ಬರು ...ಯುವ ಬಗ್ಗೆ ಡಾಕ್ಟರ್ ಎದುರು ಹೇಳಿಕೊಂಡ.



...ೀ ಹೇಳುತ್ತಲೇ 'ಕೆಲಬಾರಿ ಹಗಲು ಹೊತ್ತಿನಲ್ಲಿಯೂ ...ಗೆಯ ಮೂರ್ನಾಲ್ಕು ರಸ್ತೆಗಳು ಕೂಡುವ ತಿರುವು ...್ನ ಕಂಡ ತಕ್ಷಣ ನನ್ನ ಕಥೆಯೊಳಗಿನ ಪ್ರತಿಮೆಗಳು.. ...ೇಶಗಳು ನೆನಪಾಗುತ್ತವೆ. ಒಂದು ಬಾರಿಯಂತೂ ...ಲೆಯ ಅಂತರದಲ್ಲಿ ನನ್ನದೇ ಕಾರು ಅಪಘಾತದಿಂದ ...ಾವ್ ಆದದ್ದಿದೆ. ಇದೆಲ್ಲಾ ಏನು..? ಯಾಕೆ ಹೀಗೆ..? ...ನ ಪ್ರಶ್ನೆ ನನ್ನನ್ನು ಅನೇಕ ಬಾರಿ ಕಾಡಿದೆ. ಒಂದು ...ಯಂತೂ ತರಗತಿಯಲ್ಲಿ ನಾನು ಪಾಠ ಮಾಡುವ ...ರಸ್ತೆಯಲ್ಲಿ ಯಾವದೋ ಒಂದು ವಾಹನ ಚೊಂಯ್.. ...ಏ ತೀಕ್ಷ್ಣವಾಗಿ ಬ್ರೇಕ್ ಹಾಕಿದ್ದೇ ನಾನು ಪ್ರಜ್ಞಾತೀತನಾಗಿ ...ಲ್ಲಿಯ ಪುಸ್ತಕವನ್ನೇ ಬಿಟ್ಟೆ' ಎಂದು ಹೇಳಿ ಕಣ್ಣುಮುಚ್ಚಿ ...ಿ. ಒಂದು ದೀರ್ಘವಾದ ಉಸಿರು.. ನಿಟ್ಟುಸಿರು.. ...ರ್ ಪ್ರದೀಪ ಶಿವಪ್ರಕಾಶ ಹೇಳಿದ್ದನ್ನು ಮತ್ತು ಅವನ ...ದಲ್ಲಿಯ ಹಾವಭಾವವನ್ನು ಅತ್ಯಂತ ಸೂಕ್ಷ್ಮವಾಗಿ ...ಿಸಿದ. ಅವಶ್ಯಕ ಎನಿಸಿದ್ದನ್ನು ಎದುರಲ್ಲಿರುವ ...್ ಹೆಡ್‌ನಲ್ಲಿ ನೋಟ್ ಮಾಡಿಕೊಂಡಿದ್ದ. ಶಿವಪ್ರಕಾಶ ...ಕಥೆಯನ್ನೆಲ್ಲಾ ಕೇಳಿ ಮುಗಿಸಿದ ಮೇಲೆ ಡಾಕ್ಟರ್ ...ಕೈಯಲ್ಲಿಯ ಪೆನ್ನನ್ನು ಹಾಗೇ ಕೈಬಿಟ್ಟು ಹಿಂದೆ ...ಆರಾಮ ಕುರ್ಚಿಯ ಮೇಲೆ ಕುಳಿತು ತಿರುಗುತ್ತಿರುವ ...ನ್ನು ದಿಟ್ಟಿಸುತ್ತಾ ಏನನ್ನೋ ಯೋಚಿಸುತ್ತಿದ್ದ. ನಂತರ ...ಪ್ರಕಾಶನೆಡೆಗೆ ನೋಡಿ 'ಹೀಗೆ ನಿಮಗೆ ಕನಸು ...ವುದು, ಡ್ರೈವಿಂಗ್ ಮಾಡುವಾಗ ಭಯವಾಗುವುದು ...ವಾಗಿನಿಂದ ಶುರುವಾಗಿದೆ..?'

...ಹೆಚ್ಚೂಕಡಿಮೆ ಒಂದು ವರ್ಷ ಆಗಿರಬೇಕು.'

...ಖಚಿತವಾಗಿ ದಿನ.. ತಿಂಗಳು.. ಏನಾದರೂ..'

...ಇದೇ ದಿನ ಅಂತ ಗೊತ್ತಿಲ್ಲ, ಕಳೆದ ಫೆಬ್ರವರಿ ... ಅಂತ ಗೊತ್ತಿದೆ.'

'ನಥಿಂಗ್ ಟು ವರಿ ಪ್ರೊಫೆಸರ್, ಇದು ನಗರಗಳಲ್ಲಿ ಈಗ ಮಾಮೂಲು.. ನೀವು ಫೋಬಿಯಾ ಅಂತ ಕೇಳಿದ್ದಿರಾ..?'

'ಹೌದು ಕೇಳಿರುವೆ.'

'ಅದೇ ಇದು. **A fear becomes phobia when an object or a situation is so dreaded that an individual goes to almost any length to avoid it.** ಬೇಸಿಕಲೀ ಹೇಳಬೇಕಂದ್ರೆ ಬಹುಶಃ ನಿಮಗೆ ಕಂಫರ್ಟ್ ಆಗಿ ಕಾರ್ ಡ್ರೈವಿಂಗ್ ಮಾಡಲಾಗಲಿಕ್ಕಿಲ್ಲ, ಇಜ್ ಇಟ್ ರೈಟ್..?' ಅಂತ ಕೇಳುತ್ತಿರುವಂತೆ ಶಿವಪ್ರಕಾಶ 'ಹೌದು ಹೌದು.. ಈಗಂತೂ ಭಯ ಇನ್ನೂ ಜಾಸ್ತಿ.'

'ಅದನ್ನೇ ನಾನೂ ಹೇಳ್ತಾ ಇರೋದು. ಈ ಸ್ಥಿತಿಯನ್ನು ನಾವು ಮನೋವಿಜ್ಞಾನದಲ್ಲಿ ಅಮಾಕ್ಸೋ ಫೋಬಿಯಾ ಎನ್ನುತ್ತೇವೆ. ಅಂದರೆ **fear of automobiles** ಅಂತ. ನೀವು ಹೇಳುವುದನ್ನೆಲ್ಲಾ ಕೇಳಿದರೆ ಇದರ ಜೊತೆಗೆ ನಿಮ್ಮಲ್ಲಿ ಸೋಶಿಯಲ್ ಫೋಬಿಯಾದ ಕೆಲ ಲಕ್ಷಣಗಳೂ ಇವೆ ಎನಿಸುತ್ತದೆ. ಇಲ್ಲಿ ನೀವು ಬರೆದಿರೋ ಆ ಕಥೆ ಒಂದು ನೆಪಮಾತ್ರ. ಹೆದರಬೇಡಿ, ಏನೂ ಆಗಲ್ಲ, ತಕ್ಷಣದಿಂದಲೇ ಟ್ರೀಟಮೆಂಟ್ ಶುರು. ಸದ್ಯಕ್ಕೆ ಈ ಮಾತ್ರೆಗಳನ್ನು ದಿನಕ್ಕೆ ಎರಡರಂತೆ ತಗೊಳ್ಳಿ. ಒಂದು ವಾರ ಬಿಟ್ಟು ಬನ್ನಿ. ಕೂಲಾಗಿ ಡ್ರೈವ್ ಮಾಡಿ. ಏನೂ ಆಗಲ್ಲ ಹೆದರಿಕೋಬೇಡಿ. ಸಿಟಿಯೊಳಗೆ ಸರ್ಕಲ್ ಇರೋ ಜಾಗೆಯಲ್ಲಿ ಕಾರ್ ಓಡಿಸುವಾಗ ಭಯ ಬೇಡ. ಆರಾಮಾಗೆ ಓಡಿಸಿ. ಒಂದು ವಾರ ಕಳೀಲಿ.. ಮುಂದಿನ ಸೋಮವಾರ ಬನ್ನಿ' ಎನ್ನುತ್ತ ಮಾತ್ರೆ ಚೀಟಿಯನ್ನು ಶಿವಪ್ರಕಾಶನ ಕೈಗಿಟ್ಟರು.

****

ಡಾಕ್ಟರ್ ಸಲಹೆಯಂತೆ ದಿನಾಲು ಬೆಳಗ್ಗೆ ಒಂದು ಸುತ್ತು ಮತ್ತು ಸಿಟಿಯಲ್ಲಿ ಮೂರು ರಸ್ತೆ ಸೇರುವ ಸರ್ಕಲ್‌ಗಳಲ್ಲಿ ಕಾರ್ ಓಡಿಸತೊಡಗಿದ. ಡ್ರೈವ್ ಮಾಡುವಾಗ ತುಂಬಾ ಅಲರ್ಟ್ ಆಗಿರುತ್ತಿದ್ದ. ರಸ್ತೆಯನ್ನು ಬಿಟ್ಟರೆ ಯಾವುದನ್ನೂ ಗಮನಿಸುತ್ತಿರಲಿಲ್ಲ. ಮೊದಲಿನ ಹಾಗೆ ಹೆದರಿಕೆಯಾಗಲೀ, ಆ ಬಗೆಯ ಅಪಘಾತದ ಕನಸುಗಳಾಗಲೀ ಅವನನ್ನು ಕಾಡಲಿಲ್ಲ. ಶಿವಪ್ರಕಾಶ ಈಗ ತುಸು ಗೆಲುವಾಗಿದ್ದ ಎನ್ನುವುದನ್ನು ಅವನ ಮನೆಯವರೆಲ್ಲರೂ ಗುರುತಿಸಿದರು. ಆ ದಿನ ರವಿವಾರ ಹೀಗೇ ಒಂದೆರಡು ಸುತ್ತು ಕಾರನ್ನು ಓಡಿಸಿ, ಮನೆಯ ಕಾಂಪೌಂಡಲ್ಲಿ ಅದನ್ನು ಹಚ್ಚುವಾಗ ಗೇಟಿಗೆ ಕಾರು ತಾಗಿ ಅದರ ಮುಂಭಾಗ ಕೊಂಚ ವಿಕಾರವಾಯಿತು. ಅತ್ಯಂತ ಕಾಳಜಿಯಿಂದ ಇಲ್ಲಿಯವರೆಗೆ ಒಂದೇ ಒಂದು ಗೆರೆ ಕೂಡ ಕಾರ್ ಮೇಲೆ ಮೂಡದಂತೆ ಎಚ್ಚರಿಕೆ ವಹಿಸಿದ್ದ ಶಿವಪ್ರಕಾಶನಿಗೆ ಆ ದಿನದ ಘಟನೆಯಿಂದ ತುಂಬಾ ಬೇಜಾರಾಯಿತು. ಇಡೀ ದಿನ ಅದೇ ಯೋಚನೆ ತಲೆ ಸುತ್ತಿದಂತಿತ್ತು. ಮನಸು ಗಟ್ಟಿ ಮಾಡಿಕೊಂಡ. ಹೆದರಿದರೆ ಇನ್ನೂ ಕಷ್ಟ. ತಾನು ಆ ಅಮಾಕ್ಸೊ ಫೋಬಿಯಾದಿಂದ ಹೊರಬರಲೇಬೇಕು ಎಂದೆಲ್ಲಾ ಯೋಚಿಸಿ ಆ ದಿನ ಬೆಳಗ್ಗೆ ಡ್ರೈವ್‌ಗೆಂದು ಹುಬ್ಬಳ್ಳಿ ಧಾರವಾಡ ಬೈಪಾಸ್ ಕಡೆ ಕಲಘಟಗಿ ರಸ್ತೆಯ ಮೇಲೆ ಹೋದ. ಮನೆಯಲ್ಲಿ ಹಾಗೆಂದು ಹೇಳಿರಲಿಲ್ಲ, ಅದೇನಾಗುತ್ತೋ ನೋಡೋಣ ಎಂದು ಹೊರಟಿದ್ದ. ಸೀಟ್ ಬೆಲ್ಟ್ ಧರಿಸಿ ತುಂಬಾ ಫ್ರೀ ಆಗಿ ಡ್ರೈವಿಂಗ್ ಮಾಡತೊಡಗಿದ. ಕಾರು ರಸ್ತೆಯನ್ನು ಹಾಗೇ ನುಂಗುತ್ತಲೇ ಇತ್ತು. ನುಗ್ಗಿಕೇರಿ ಕ್ರಾಸ್ ದಾಟುವವರೆಗೂ ಎಲ್ಲವೂ ವ್ಯವಸ್ಥಿತವಾಗಿಯೇ ಇತ್ತು. ಬೈಪಾಸ್ ಹತ್ತಿರ ಬರುತ್ತಿದ್ದಂತೆ ಅದೇನಾಯಿತೋ ಏನೋ.. ಶಿವಪ್ರಕಾಶ ಕಾರಲ್ಲಿ ಎ.ಸಿ. ಇದ್ದರೂ ವಿಪರೀತ ಬೆವರತೊಡಗಿದ. ಅವನಿಗೆ ಇದ್ದಕ್ಕಿದ್ದಂತೆ ತನ್ನ ಕಥೆಯ ಪ್ರತಿಮೆಗಳು.. ಸನ್ನಿವೇಶಗಳು.. ನಿಚ್ಚಳವಾಗಿ ನೆನಪಾಗತೊಡಗಿದವು. ಮನಸನ್ನು ಬೇಡ ಬೇಡ ಎಂದು ತಡೆದರೂ ಅದು ಕಥೆಯೊಳಗಿನ ಅಪಘಾತದ ಜಾಗ, ಜಜ್ಜಿ ಹೋದ ಕಾರು, ಹೆತ್ತವರ ಆಕ್ರಂದನ, ಗಿಡಕ್ಕೆ ಜಜ್ಜಿದ ಟ್ರಕ್, ಚೆಲ್ಲಿದ ರಕ್ತ ಎಲ್ಲವೂ ನೆನಪಾಗಿ ತಟ್ಟನೇ ವಾಸ್ತವಕ್ಕೆ ಬರುವುದರೊಳಗಾಗಿ ಎಡಬದಿಯ ತಿರುವಿನಿಂದ ಜೋರಾಗಿ ಬಂದ ಟ್ರಕ್ಕೊಂದು 'ಏಯ್..!' ಎಂದು ಶಿವಪ್ರಕಾಶ ಚೀರುವುದರೊಳಗೆ ಆತನ ಕಾರನ್ನು ಜೋರಾಗಿ ಅಪ್ಪಳಿಸಿಯೇ ಬಿಟ್ಟಿತು. ಕಾರು ಆ ಹೊಡೆತಕ್ಕೆ ರಸ್ತೆಯ ಅಂಚಿನ ಹತ್ತಾರು ಆಳದ ತಗ್ಗಿಗೆ ಮುಖ ಕೆಳಗಾಗಿ ಅಂಗಾತ ಬಿದ್ದುಕೊಂಡಿತು. ಜನರೆಲ್ಲಾ ಓಡಿಬಂದರು. ಡ್ರೈವರ್ ಬದಿಯ ಬಾಗಿಲ ಸಂದಿಯಿಂದ ರಕ್ತ ಹನಿಹನಿಯಾಗಿ ಜಿನುಗುತ್ತಿತ್ತು. ✤

ಕಠಾರಿವೀರ ಪ್ರತಿಭಟನಾಕಾರರ ಮನಸ್ಥಿತಿ ಕನಿಕರ ಹುಟ್ಟಿಸುತ್ತದೆ

ಒಂದು ಪತ್ರ

ಇಂದಿಗೆ ಸರಿಸುಮಾರು 25 ವರ್ಷಗಳ ಹಿಂದೆ, ನವರಾತ್ರಿ ಹಬ್ಬವೆಂದರೆ ಸಾಕು, ಪುರಾಣದ ದೇವಾನುದೇವತೆಗಳೆಲ್ಲ ಧರೆಗಿಳಿದು ಬೀದಿಬೀದಿಗಳಲ್ಲಿ ಕಾಣಿಸಿಕೊಳ್ಳುವ ಒಂದು ದಿನ ಮಂಗಳೂರಿನ ಕಂಕನಾಡಿ ರಸ್ತೆಯಲ್ಲಿ ಈಶ್ವರ ಮತ್ತು ಪಾರ್ವತಿ ಪ್ರತ್ಯಕ್ಷರಾಗಿದ್ದರು. ಆಧುನಿಕ ಕಾಲದ ಅಮರಪ್ರೇಮಿಗಳಂತೆ ಪಾರ್ವತಿಯನ್ನು ಮುಂದಿನ ರಾಡ್‌ನಲ್ಲಿ ಕೂರಿಸಿಕೊಂಡು ಈಶ್ವರ ವೇಗವಾಗಿ ಸೈಕಲ್ ಹೊಡೆಯುತ್ತಿದ್ದ ಪರಿಗೆ ರಸ್ತೆ ಬದಿಯಲ್ಲಿದ್ದ ನೋಡುಗರೆಲ್ಲ ಬಿದ್ದು ಬಿದ್ದು ನಗುತ್ತಿದ್ದರು. ಕಲಾವಿದರ ಕಲ್ಪನಾ ಸಾಮರ್ಥ್ಯ ಮತ್ತು ಕರಾವಳಿ ಜನತೆಯ ವಿಶಾಲ ಮನೋಭಾವದ ಒಂದು ಅದ್ಭುತ ರೂಪಕದಂತಿತ್ತು ಆ ದೃಶ್ಯ. ಒಂದು ವೇಷವನ್ನು ವೇಷವಾಗಿಯೇ ನೋಡುವ, ನೋಡಿ ಸಂಭ್ರಮಿಸುವ ಹೃದಯವಂತಿಕೆ ಹೊಂದಿದ್ದ ಜನತೆಗೆ ಪಾರ್ವತಿಯನ್ನು ಈಶ್ವರ ಹೀಗೆ ಸೈಕಲ್ಲಿನಲ್ಲಿ ಕೂರಿಸಿಕೊಂಡು ಸಾಗುತ್ತಿದ್ದುದು ದೇವರ ಅವಹೇಳನವಾಗಿ ಕಂಡಿರಲಿಲ್ಲ. ಅಷ್ಟರಮಟ್ಟಿಗೆ ದೇವರು ಮತ್ತು ದೇವರ ವೇಷದ ನಡುವಣ ವ್ಯತ್ಯಾಸವನ್ನು ಗುರುತಿಸುವ ವಿವೇಚನಾಶಕ್ತಿಯನ್ನು ಅವರು ಹೊಂದಿದ್ದರು. ಇತರ ಮತೀಯರ ಆಚರಣೆಗಳನ್ನು ಸಹಿಸಿಕೊಳ್ಳುವುದು ಮಾತ್ರವಲ್ಲ, ಅವನ್ನು ಗೌರವಿಸುವ, ಅವುಗಳಲ್ಲಿ ತಾವೂ ಪಾಲ್ಗೊಂಡು ಸಂಭ್ರಮಿಸುವ ದೊಡ್ಡಗುಣವನ್ನು ಹೊಂದಿದ್ದರು. ಹಾಗಾಗಿಯೇ ಕರಾವಳಿಯ ಹಬ್ಬ ಹರಿದಿನಗಳೆಂದರೆ, ವರ್ಣಮಯ, ವೈವಿಧ್ಯಮಯ ಸಂಭ್ರಮದ ಪ್ರತೀಕವಾಗಿತ್ತು; ಒಳಗಿನವರು ಹೆಮ್ಮೆ ಪಡುವಂತಿತ್ತು, ಹೊರಗಿನವರು ಮತ್ಸರ ಪಡುವಂತಿತ್ತು.



ಆದರೆ ಎಂಭತ್ತರ ದಶಕದ ಕೊನೆಯ ಭಾಗದ ಬಾಬ್ರಿ ಮಸೀದಿ - ರಾಮಜನ್ಮಭೂಮಿ ಕೋಲಾಹಲ ತೀವ್ರಗೊಳ್ಳುತ್ತಲೇ ಕರಾವಳಿಯ ಸಾಮಾಜಿಕ ಸಾಂಸ್ಕೃತಿಕ ಚರ್ಯೆಯಲ್ಲಿ ಆತಂಕಕಾರಿ ಬದಲಾವಣೆ ಆರಂಭವಾಯಿತು. ದಳಗಳು, ವೇದಿಕೆಗಳು, ಪರಿಷತ್ತುಗಳು, ಸೇನೆಗಳು ಹೀಗೆ ನಾನಾ ಹೆಸರಿನ ಸ್ವಯಂಘೋಷಿತ ಸನಾತನ ಸಂಸ್ಕೃತಿ ರಕ್ಷಣಾ ಗ್ಯಾಂಗುಗಳೆಲ್ಲ ಅಖಾಡಕ್ಕೆ ಇಳಿದು, ಇಡೀ ಕರಾವಳಿಯ ಸಾಂಸ್ಕೃತಿಕ ಆಡಳಿತವನ್ನು ಕೈವಶಮಾಡಿಕೊಂಡು, ಒಂದು ರೀತಿಯ ಭೀತ ಸ್ಥಿತಿಯನ್ನು ನಿರ್ಮಿಸಿಬಿಟ್ಟವು. ನವರಾತ್ರಿಯಲ್ಲಿ ದೇವತೆಗಳ ವೇಷ ಹಾಕಕೂಡದು ಎಂದು ಕಟ್ಟಪ್ಪಣೆ ಹೊರಡಿಸಿದ್ದು ಮಾತ್ರವಲ್ಲ, ಈ ಆಜ್ಞೆಯನ್ನು ಮೀರಿದವರಿಗೆ 'ಪರಿಸ್ಥಿತಿ ನೆಟ್ಟಗಿರಲಿಕ್ಕಿಲ್ಲ' ಎಂಬ ಧಮಕಿಯನ್ನೂ ಹಾಕಲಾಯಿತು. ಚಿತ್ರಕಲಾವಿದರಿಗೆ ಸಾಧ್ಯತೆಯ ಲೋಕವನ್ನೇ ತೆರೆದಿಟ್ಟ ಗಣೇಶನನ್ನು ಸೃಜನಶೀಲ ಗಾಳಿಪಟವಾಗಿಸಿ ಹಾರಿಬಿಟ್ಟರೆ, ದೇವರ ಅವಹೇಳನ ಎಂದು ಬೆದರಿಸಿ ಅದನ್ನು ಬಾನಿನಿಂದ ಇಳಿಸಲಾಯಿತು. ಏಸುವನ್ನು ಕುರಿತ ಯಕ್ಷಗಾನ ಆಡಕೂಡದು ಎಂದು ಬೆದರಿಸಿ ಕೊನೆಯ ಕ್ಷಣದಲ್ಲಿ ಪ್ರದರ್ಶನ ರದ್ದುಗೊಳಿಸುವಂತೆ ಮಾಡಲಾಯಿತು, ಗಣೇಶನನ್ನು ಮನಬಂದಂತೆಲ್ಲ ಚಿತ್ರಿಸಕೂಡದು ಅದು ಒಂದೇ ರೀತಿಯಲ್ಲಿ ಹೀಗೆಯೇ ಇರಬೇಕು ಎಂದು ಚಿತ್ರಕಲಾವಿದರಿಗೆ ನಿರ್ದೇಶನ ನೀಡಲಾಯಿತು. ಹೀಗೆ ಒಟ್ಟಾರೆಯಾಗಿ ವೈವಿಧ್ಯವನ್ನೇ ಉಸಿರಾಗಿದ್ದ ಕರಾವಳಿಯ ಸಂಸ್ಕೃತಿಯ ಬುಡಕ್ಕೇ ಕೊಡಲಿ ಏಟು ಹಾಕಲಾಯಿತು. ಎಲ್ಲೆಡೆ ಏಕರೂಪಿ ಸಂಸ್ಕೃತಿಗೆ ಒತ್ತು, ಬಹುತ್ವಕ್ಕೆ ವಿದಾಯ. ಧಾರ್ಮಿಕ ಕಾರ್ಯಕ್ರಮಗಳೆಂದರೆ ಅಲ್ಲಿ ವೇದಿಕೆ, ಬ್ಯಾನರ್ ಕೊನೆಗೆ ಕುರ್ಚಿಯೂ ಕಡ್ಡಾಯವಾಗಿ ಕೇಸರಿ ಬಣ್ಣದ್ದು; ನೋಡಿದವರಿಗೆ ಅಲ್ಲಿನ ಏಕ ಬಣ್ಣದಿಂದಲೇ ಮನಸು ರೋಗಗ್ರಸ್ತವಾಗುವ ಸ್ಥಿತಿ!

'ಕಠಾರಿವೀರ ಸುರಸುಂದರಾಂಗಿ' ಚಿತ್ರದ ವಿರುದ್ಧ ಸ್ವಾಮೀಜಿಯೊಬ್ಬರ ನೇತೃತ್ವದಲ್ಲಿ ಭಜರಂಗದಳ, ವಿಶ್ವ ಹಿಂದೂ ಪರಿಷತ್, ಶ್ರೀರಾಮ ಸೇನೆ ಮೊದಲಾದ ಸಂಘಟನೆಗಳು ಬೀದಿಗಿಳಿದು ದಾಂಧಲೆ ಮಾಡಿದ್ದು ಕರಾವಳಿಯಲ್ಲಿ ಸೃಷ್ಟಿಯಾಗಿರುವ ಈ ಅಸಹಿಷ್ಣುತೆಯ ಸಂಸ್ಕೃತಿ ಮತ್ತು ನೈತಿಕ ಪೊಲೀಸ್‌ಗಿರಿ ಇನ್ನೊಂದು ಮಜಲನ್ನು ಪ್ರವೇಶಿಸಿರುವ ಸಂಕೇತ. ಪುರಾಣ ಎಂಬುದರ ಅರ್ಥವನ್ನು ಗ್ರಹಿಸುವಷ್ಟು ಸಾಮರ್ಥ್ಯವನ್ನೂ ವ್ಯವಧಾನವನ್ನೂ ಹೊಂದಿರದ ಈ ಮಂದಿಗೆ ದೇವತೆಗಳು ಹೀಗೆಯೇ ಇದ್ದರೆಂದು ಹೇಳಿದವರಾರೋ, ದೇವತೆಗಳ ಮಾನ ರಕ್ಷಣೆಯ ಗುತ್ತಿಗೆಯನ್ನು ಈ ಮಂದಿಗೆ ವಹಿಸಿಕೊಟ್ಟವರಾರೋ ಒಂದೂ ತಿಳಿಯದು. ಒಂದು ಕತೆಯನ್ನು ಕತೆಯಾಗಿ ನೋಡಲಾಗದ, ಸಿನಿಮಾವನ್ನು ಸಿನಿಮಾವನ್ನಾಗಿಯಷ್ಟೇ ನೋಡಿ ನಕ್ಕು ಹಗುರಾಗಲಾಗದ ಇವರ ಮನಸ್ಥಿತಿ ಬಗ್ಗೆ ನಿಜಕ್ಕೂ ಕನಿಕರವೆನಿಸುತ್ತದೆ.


ಸದರಿ ಚಿತ್ರದ ವಿವಾದದ ಸಂದರ್ಭದಲ್ಲಿ ವಾಹಿನಿಯೊಂದು ನಡೆಸಿದ ಚರ್ಚೆಯಲ್ಲಿ ಚಿತ್ರದ ನಿರ್ಮಾಪಕ, ಓರ್ವ ಚಿತ್ರಕತೆಗಾರ ಮತ್ತಿಬ್ಬರು ಕಾವಿಧಾರಿಗಳು ಭಾಗವಹಿಸಿದ್ದರು. ತಾನು ಎಲ್ಲವನ್ನೂ ತಿಳಿದುಕೊಂಡಿದ್ದೇನೆ ಎಂದು ತಪ್ಪಾಗಿ ತಿಳಿದುಕೊಂಡಿರುವ ಸರತೋಷ ಎಂಬ ಹೆಸರಿನ ಕಾವಿಧಾರಿಯೊಬ್ಬರು ಇಡೀ ಚರ್ಚೆಯನ್ನು ಹೈಜಾಕ್ ಮಾಡಿದರು. ಪುರಾಣವನ್ನು ಪುರಾಣ ಎಂದು ಒಪ್ಪಿಕೊಳ್ಳದ ಆ ಮನುಷ್ಯ ಅದನ್ನು ಚರಿತ್ರೆ, ಅದು ನಡೆದಂಥದು ಎಂದೆಲ್ಲ ವಿತಂಡವಾದವನ್ನು ಮಂಡಿಸುತ್ತಾ ಹೋದರು. ಸಾಲದೆಂಬಂತೆ 'ಹೀಗೆ ದೇವತೆಗಳನ್ನು ಅವಹೇಳನ ಮಾಡಿದವರು ದೇವತೆಗಳ ಕೋಪಕ್ಕೆ ಈಡಾಗುವುದರಲ್ಲಿ ಅನುಮಾನವಿಲ್ಲ' ಎಂದೂ ಎಚ್ಚರಿಸಿದರು. ಇದೇ ಸಂದರ್ಭದಲ್ಲಿ ದೂರವಾಣಿಯ ಮೂಲಕ ಚರ್ಚೆಯಲ್ಲಿ ಪಾಲ್ಗೊಂಡ ಶೀರೂರು ಶ್ರೀಗಳಂತೂ '(ಉಪೇಂದ್ರ) ಬ್ರಾಹ್ಮಣನಾಗಿಯೂ ಹೀಗೆ ಮಾಡುವುದಾ?' ಎಂದು ಜಾತಿ ರಾಜಕಾರಣವನ್ನು ಎಳೆತಂದುದೇ ಅಲ್ಲದೆ, 'ಹೇಗೆ ಪ್ರತಿಭಟಿಸಬೇಕೆಂದು ನಮಗೆ ಗೊತ್ತು' ಎಂದು ಅಪ್ಪಟ ಭಜರಂಗದಳದ ಕಾರ್ಯಕರ್ತನ ಮಾದರಿಯಲ್ಲಿ ಧಮಕಿ ಹಾಕಿದರು. ಸ್ವಾಮೀಜಿಯ ಧಮಕಿಯ ಮಾತುಗಳನ್ನು ಕೇಳುವಾಗ ಶ್ರೀರಾಮಸೇನೆಯ ಶರಣ್ ಪಂಪ್‌ವೆಲ್, ಮುತಾಲಿಕ್ ಮೊದಲಾದವರ ಮಾತಿನ ಧಾಟಿ ಬೇಡವೆಂದರೂ ನೆನಪಾಗುವಂತಿತ್ತು.

ಈ ಬಾರಿಯ ಕರ್ನಾಟಕ ಬಜೆಟ್ ಮಂಡನೆಗೆ ಕೊಂಚ ಪೂರ್ವದಲ್ಲಿ ತಮ್ಮ ಹಕ್ಕೊತ್ತಾಯವನ್ನು ಮಂಡಿಸಲು ಕಾವಿಧಾರಿಗಳ ದೊಡ್ಡ ಗುಂಪೊಂದು ಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದು, ಇದರಲ್ಲಿದ್ದವರೆಲ್ಲ ಅಸಲಿ ಸ್ವಾಮೀಜಿಗಳಲ್ಲ, ಕೆಲವು ಕಾವಿ ವೇಷಧಾರಿಗಳೂ ಇದ್ದರು ಎಂದು ಇತ್ತೀಚೆಗೆ ಸ್ವತಃ ಓರ್ವ ಮಠಾಧೀಶರೇ ಸುದ್ದಿಸ್ಫೋಟ ಮಾಡಿದ್ದಾರೆ. ಬಿಜೆಪಿ ಆಡಳಿತದ ಕರ್ನಾಟಕದಲ್ಲಿ ಮತಾಂಧಶಕ್ತಿಗಳು ಸಾಂವಿಧಾನಿಕ ಹಕ್ಕುಗಳು, ಕಾನೂನು, ನೀತಿ, ನಿಯಮಗಳಿಗೆಲ್ಲ ಸವಾಲೆಸೆಯುತ್ತಾ ವಿಜೃಂಭಿಸುತ್ತಿರುವ ಪರಿಯನ್ನು ನೋಡುವಾಗ ಯಾರು ನಿಜವಾದ ಸನ್ಯಾಸಿಗಳು, ಯಾರು ನಕಲಿ ಸನ್ಯಾಸಿಗಳು, ಯಾರು ಭಜರಂಗಿಗಳು, ಯಾರು ಶ್ರೀರಾಮಸೇನೆಯ ಕಾರ್ಯಕರ್ತರು ಒಂದೂ ತಿಳಿಯುತ್ತಿಲ್ಲ. ತಾವು ಹೇಳಿದ್ದೇ ಸತ್ಯ, ತಮ್ಮ ಅಪ್ಪಣೆಗಳಿಗೆ ಅನುಗುಣವಾಗಿ ಇತರರು ನಡೆದುಕೊಳ್ಳಬೇಕು ಎಂಬ ಇವರ ಸಾಮಾನ್ಯ ಅಜೆಂಡಾದ ಕಾರಣವಾಗಿ ಇವರನ್ನು ಪ್ರತ್ಯೇಕಿಸುವ ಗೆರೆಗಳೇ ತೆಳುವಾಗಿಬಿಟ್ಟಿವೆ. ಚಿತ್ರವೊಂದರ ಬಗ್ಗೆ ತೀರ್ಮಾನಿಸುವುದಕ್ಕೆಂದೇ ಕಾನೂನಿನ ಅಡಿಯಲ್ಲಿ ರಚಿತವಾದ ಸೆನ್ಸಾರ್ ಮಂಡಳಿ ಇದ್ದೂ ಅಂತಿಮ ತೀರ್ಪು ನೀಡುವ ಪ್ರೇಕ್ಷಕ ಬಳಗವೆಂಬ ಮಹಾಜನತೆಯಿದ್ದೂ ಜನರು ಏನನ್ನು ನೋಡಬೇಕು ಏನನ್ನು ನೋಡಕೂಡದು ಎಂದು ತೀರ್ಮಾನಿಸುವ ಹೊಣೆಯನ್ನು ತಾನೇ ಹೊತ್ತು ಓರ್ವ ಮಠಾಧೀಶರೇ ಕಾನೂನನ್ನು ಕೈಗೆತ್ತಿಕೊಳ್ಳುವ ಕೆಲಸಕ್ಕೆ ಮುಂದಾದ ಮೇಲೆ ಇನ್ನು ಉಳಿದುದಾದರೂ ಏನು?

- ಶ್ರೀನಿವಾಸ ಕಾರ್ಕಳ, ಮಂಗಳೂರು

ಕೊನೆ ಹೋಳಿಗೆ ಊಟ

ಮನೆಯ ಹಾಲ್‌ನಲ್ಲಿ ಒಂದು ಮಂಚದ ಮೇಲೆ ಲಂಕೇಶರನ್ನು ಮಲಗಿಸಿದ್ದರು. ಅವರ ಹತ್ತಿರ ಕೂತು ಅವರ ಹಣೆಯ ಮೇಲೆ ನನ್ನ ಕೈ ಇಟ್ಟೆ. ಅವರು ಕಣ್ಣು ಮುಚ್ಚಿ ಮಲಗಿದ್ದರು. ಮುಖ ಎಂದಿನಂತೆಯೇ ಇತ್ತು. ಯಾವ ನೋವಿನ ಛಾಯೆಯೂ ಇರಲಿಲ್ಲ. ಅವರು ಶಾಂತವಾಗಿ ಮಲಗಿದ್ದಾರೆ ಎನಿಸಿತು ಅವರನ್ನು ನೋಡಿದಾಗ.



42 ಹುಳಿಮಾವು ಮತ್ತು ನಾನು



• ಇಂದಿರಾ ಲಂಕೇಶ್

1999 ಅಂತ್ಯಗೊಂಡು ಹೊಸ ಶತಮಾನ ಪ್ರಾರಂಭ ವಾಗುತ್ತಿತ್ತು. ಪ್ರಪಂಚದೆಲ್ಲೆಡೆ ಎಲ್ಲರೂ ಹೊಸ ಶತಮಾನವನ್ನು ಸ್ವಾಗತಿಸುತ್ತಿರುವಾಗ ಲಂಕೇಶರು ಮಾತ್ರ ಯಾವ ಸಂಭ್ರಮವೂ ಇಲ್ಲದೆ ಸುಮ್ಮನಿದ್ದರು. ಲಂಕೇಶರ ದೈಹಿಕಶಕ್ತಿ ಕುಸಿದಿತ್ತು. ಹೊಸ ವರ್ಷವನ್ನು, ಯುಗವನ್ನು ಸ್ವಾಗತಿಸಲು ಎಂದಿನಂತೆ ಪಾರ್ಟಿ ಏರ್ಪಡಿಸುವ ಯೋಚನೆ ಯಾರ ತಲೆಯಲ್ಲೂ ಇರಲಿಲ್ಲ. ಲಂಕೇಶರು 1999ರ ಕೊನೆ ಸಂಜೆಯನ್ನು ತಮ್ಮ ಗೆಳೆಯರೊಂದಿಗೆ ಆಫೀಸಿನಲ್ಲಿ ಇಸ್ಪೀಟು ಆಡುತ್ತ ಕಳೆದರು. ಮಧ್ಯರಾತ್ರಿಯ ಆಗುವನಕ್ಕೆ ಕಾಯದೆ ಸುಮ್ಮನೆ ಮನೆಗೆ ಬಂದು ನಿದ್ರಿಸಿದರು.

ತಂಗಿಯ ಪ್ರಥಮ ಸಿನಿಮಾ, ಹುಟ್ಟಿದಹಬ್ಬ ಮತ್ತು ಹೊಸ ವರ್ಷಾಚರಣೆ ಎಂದು ಬೆಂಗಳೂರಿಗೆ ಬಂದಿದ್ದ ಗೌರಿ ಜನವರಿ ನಾಲ್ಕರಂದು ದೆಹಲಿಗೆ ಹೊರಟು ನಿಂತಳು. ಆಗ ಲಂಕೇಶರು "ದೆಹಲಿಯಲ್ಲಿ ಈಗ ತುಂಬಾ ಚಳಿ. ಈ ನನ್ನ ಸ್ವೆಟರ್ ತಗೊಂಡು ಹೋಗು" ಎಂದು ತಾವು ತೊಟ್ಟಿದ್ದ ಕೋಬಾಲ್ಟ್ ಬ್ಲೂ ಬಣ್ಣದ ಸ್ವೆಟರ್ ತೆಗೆದು ಕೊಡಲು ಮುಂದಾದರು. ಆಗ ಗೌರಿ "ನನ್ನ ಹತ್ತಿರ ಸಾಕಷ್ಟು ಸ್ವೆಟರ್ಸ್ ಇವೆ. ಇದು ನಿನ್ನ ಪ್ರೀತಿಯ ಸ್ವೆಟರ್. ನೀನೇ ಇಟ್ಟುಕೊ" ಎಂದಳು.

****

ಲಂಕೇಶರಿಗೆ ಬಿಸಿಬಿಸಿ ರೊಟ್ಟಿ ಮತ್ತು ಹೋಳಿಗೆ ಎಂದರೆ ಬಹಳ ಇಷ್ಟ. ಎಷ್ಟರಮಟ್ಟಿಗೆಂದರೆ ರೊಟ್ಟಿ ಮತ್ತು ಹೋಳಿಗೆಯನ್ನು ಹೆಂಚಿನಿಂದ ಸೀದಾ ಅವರ ತಟ್ಟೆಗೆ ಹಾಕಬೇಕಿತ್ತು. ರೊಟ್ಟಿ ಮತ್ತು ಎಣ್ಣೆಗಾಯಿ ಅವರಿಗೆ ಎಷ್ಟು ಪ್ರಿಯವಾಗಿತ್ತೋ ಅಷ್ಟೇ ಪ್ರಿಯವಾಗಿತ್ತು ಹೋಳಿಗೆಯೊಂದಿಗಿನ ಬಿಸಿತುಪ್ಪ. ಮಾವಿನ ಸೀಸನ್ ಬಂದರಂತೂ ಹೋಳಿಗೆಯೊಂದಿಗೆ ಸೀಕರಣೆ ಇರಲೇಬೇಕಿತ್ತು.

2000 ಜನವರಿ 14ರಂದು ಸಂಕ್ರಾಂತಿ ಹಬ್ಬ ಬಂತು. ಸಾಮಾನ್ಯವಾಗಿ ಸಂಕ್ರಾಂತಿ ಹಬ್ಬಕ್ಕೆ ಎಲ್ಲರ ಮನೆಯಲ್ಲಿ ಪೊಂಗಲ್ ಮಾಡುತ್ತಾರೆ. ಆದರೆ ನಮ್ಮ ಮನೆಯಲ್ಲಿ ಹಾಗಲ್ಲ. ಯಾವುದೇ ಹಬ್ಬ ಬಂದರೂ ಲಂಕೇಶರಿಗೆ ಇಷ್ಟವಾದ ಹೋಳಿಗೆಯನ್ನೇ ಮಾಡುತ್ತಿದ್ದೆ. ಅವತ್ತು ನಾನು ಮಾಡುತ್ತಿದ್ದ ಹೋಳಿಗೆಯ ಸುವಾಸನೆ ಲಂಕೇಶರ ರೂಮಿಗೂ ಮುಟ್ಟಿ ಅವರು ಖುಷಿಯಿಂದ "ಹಾ ಹೋಳಿಗೆ" ಎನ್ನುತ್ತಾ ರೂಮಿನಿಂದ ಇಳಿದು ಡೈನಿಂಗ್ ಟೇಬಲ್‌ಗೆ ಬಂದರು. ಅವರು ಹೋಳಿಗೆಗೆ ಕಾಯುತ್ತಿದ್ದಾರೆ ಎಂದು ನನಗೆ ಗೊತ್ತಿತ್ತು.

"ಇವತ್ತು ಶುಗರ್ ಎಷ್ಟಿದೆ? ಹೋಳಿಗೆ ತಿನ್ನಬಹುದಾ?" ಎಂದೆ. "ಎಲ್ಲಾ ಸರಿ ಇದೆ ಕಣೆ. ಹೋಳಿಗೆ ಕೊಡು" ಎಂದರು. ನಾನು ಒಂದಾದನಂತರ ಒಂದರಂತೆ ಅವರ ತಟ್ಟೆಗೆ ಬಿಸಿಬಿಸಿಯಾದ ಎರಡು ಹೋಳಿಗೆ ಹಾಕಿದೆ. ಅವನ್ನು ಅವರು ಸಂತೋಷದಿಂದ ತಿಂದ ನಂತರ "ಟಿಫನ್ ಬಾಕ್ಸ್‌ಗೂ ಒಂದೆರಡು ಹೋಳಿಗೆ ಹಾಕು" ಎಂದರು. ನಾನು "ಬೇಡ ಕಣ್ರಿ, ಶುಗರ್ ಜಾಸ್ತಿ ಆಗುತ್ತೆ" ಎಂದರೂ ಅವರು ಕೇಳಲಿಲ್ಲ. "ಹೋಳಿಗೆ ಕೊಡೆ" ಎಂದರು. ವಿಧಿ ಇಲ್ಲದೆ ಅವರ ಟಿಫನ್ ಬಾಕ್ಸ್‌ನಲ್ಲಿ ಒಂದು ಹೋಳಿಗೆ ಇಟ್ಟು ಕಳುಹಿಸಿದೆ.

ಲಂಕೇಶರು ತಮ್ಮ ಜೀವನದಲ್ಲಿ ತಿನ್ನುವ ಕೊನೆ ಹೋಳಿಗೆ ಅದು ಎಂದು ನಾನು ಕನಸು ಮನಸ್ಸಿನಲ್ಲೂ ಎನಿಸಿರಲಿಲ್ಲ.

****

ಸಂಕ್ರಾಂತಿ ಹಬ್ಬ ಬಂದುಹೋದ ಹತ್ತು ದಿನಗಳ ನಂತರ ನನ್ನ ಚಿಕ್ಕಮ್ಮನ ಮಗಳಾದ ಶಾಂತಾ ಮತ್ತು ಆಕೆಯ ಗಂಡ ಶಶಿಧರ ಗೋವಾಗೆ ಟ್ರಿಪ್ ಹೊರಟರು. ಅದಕ್ಕೂ ಮುನ್ನ ಅವರು ಬೇರೆಡೆಗೆ ಟ್ರಿಪ್ ಹೋದಾಗ ನಾನೂ ಅವರೊಂದಿಗೆ ಹೋಗುವ ಆಶಯ ವ್ಯಕ್ತಪಡಿಸಿದ್ದೆ. ಆದರೆ ಲಂಕೇಶರ ಆರೋಗ್ಯ ಕೆಟ್ಟಿದ್ದರಿಂದ ಅವರೊಂದಿಗೆ ಹೋಗುವುದನ್ನು ರದ್ದು ಮಾಡಿದ್ದೆ. ಈ ಬಾರಿ ಅವರೊಂದಿಗೆ ಹೋಗುವುದೋ ಬೇಡವೋ ಎಂದು ಯೋಚಿಸುತ್ತಿದ್ದೆ. ಆಗ ನಮ್ಮ ಮಗಳು ಬೇಬಿ "ಅಪ್ಪನ ಆರೋಗ್ಯ ಈಗ ಪರವಾಗಿಲ್ಲ. ನೀನು ಬಹಳ ದಿನಗಳಿಂದ ಗೋವಾ ನೋಡ ಬೇಕು ಅಂತ ಆಸೆ ಇಟ್ಟುಕೊಂಡಿದ್ದೀಯ. ಎರಡು ದಿನ ತಾನೇ? ಹೋಗಿ ಬಾ" ಎಂದಳು. ನಾನು ಎರಡು ಮನಸ್ಸಿನಲ್ಲಿಯೇ ಜನವರಿ 24ರಂದು ಗೋವಾಗೆ ಹೋದೆ.

****

ಜನವರಿ 23ರಂದು ಬೇಬಿ ತನ್ನ ಅಪ್ಪನ ಆಫೀಸಿಗೆ ಹೋದಳು. ಲಂಕೇಶರಿಗೆ ಸಣ್ಣದಾಗಿ ಜ್ವರ ಬಂದಿತ್ತು. ಅದನ್ನು ಗಮನಿಸಿದ ಬೇಬಿ "ಡಾಕ್ಟರ್ ಹತ್ತಿರ ಚೆಕ್‌ಅಪ್‌ಗೆ ಹೋಗಬೇಕು. ನಾಳೆ ಅಪಾಯಿಂಟ್‌ಮೆಂಟ್ ತಗೋತೀನಿ. ಫ್ರೀ ಮಾಡಿಕೊಂಡಿರು" ಎಂದಳು. ಆಗ ಲಂಕೇಶರು "ನಾಳೆ ಸೋಮವಾರ. ಪತ್ರಿಕೆ ಪ್ರಿಂಟಿಗೆ ಹೋಗುವ ದಿನ. ಅದಕ್ಕೆ ನಾಳೆ ಬೇಡ. ನಾಡಿದ್ದು ಹೋಗೋಣ" ಎಂದರು.

ಜನವರಿ 23 ಮತ್ತು 24ರಂದು ಎಂದಿನಂತೆ ಲಂಕೇಶರು ಪತ್ರಿಕೆಗೆ ತಮ್ಮ ಅಂಕಣಗಳನ್ನು ಬರೆದು ಮುಗಿಸಿದರು. ಜ್ವರ ಅವರನ್ನು ಸುಸ್ತು ಮಾಡಿತ್ತು. ಜನವರಿ 24ರಂದೇ ಅಜಿತು ಸಂಪಾದಕನಾಗಿದ್ದ 'ಆಲ್‌ರೌಂಡರ್' ಪತ್ರಿಕೆಯೂ ಅಚ್ಚಿಗೆ ಹೋಗಬೇಕಿತ್ತು. ಅಜಿತು ತನ್ನ ಕೆಲಸದಲ್ಲಿ ತೊಡಗಿದ್ದ. ಲಂಕೇಶರು ಮನೆಗೆ ಹೊರಟಾಗ ಅವರ ಕಾರ್‌ವರೆಗೂ ಅಜಿತು ಅವರೊಂದಿಗೆ ಹೋದ. ತಮ್ಮ ಮಗನ ಹೆಗಲ ಮೇಲೆ ಕೈಹಾಕಿದ ಲಂಕೇಶರು "I don't think I will come out alive this time" ಎಂದರು. ಮನೆಗೆ ಬಂದ ಲಂಕೇಶರು ಊಟ ಮಾಡುವಾಗ ನಾನು ಮನೆಯಲ್ಲಿಲ್ಲದ್ದನ್ನು ಗಮನಿಸಿ "ಅಮ್ಮ ಯಾವಾಗ ವಾಪಸ್ ಬರುತ್ತೆ" ಎಂದು ಅಡುಗೆ ಮಾಡುವ ಲತಾಳನ್ನು ಕೇಳಿದರು. ಆನಂತರ ಅವರು ತಮ್ಮ ರೂಮಿಗೆ ಹೋದರು. ಅವರು ಆಡಿದ ಕೊನೆ ಮಾತು ಅದಾಯಿತು...

****

ಜನವರಿ 24ರ ಸಂಜೆ ನಾನು, ಶಾಂತ ಮತ್ತು ಆಕೆಯ ಗಂಡ ಶಶಿಧರ, ಮೂವರೂ ಕಾರ್‌ನಲ್ಲಿ ಗೋವಾ ಸೇರಿದೆವು. ಮಾರನೆಯ ದಿನ ಬೆಳಗ್ಗೆ ಸುತ್ತಾಡಲು ಹೋಗೋಣವೆಂದು ನಾವೆಲ್ಲ ರೆಡಿಯಾಗಿ ಇನ್ನೇನು ಹೋಟೆಲ್‌ನಿಂದ ಹೊರಡಬೇಕು. ಆ ಕ್ಷಣ ಹೋಟೆಲ್ ರಿಸೆಪ್ಷನ್‌ಗೆ ಒಂದು ಕರೆ ಬಂತು. ಅದು ನಮ್ಮ ಮಗಳು ಬೇಬಿ ಮಾಡಿದ್ದ ಕರೆ. ಆಕೆ "ಅಪ್ಪನಿಗೆ ಸೀರಿಯಸ್ ಆಗಿದೆ. ಕೂಡಲೇ ಹೊರಟು ಬಾ" ಎಂದಳು.

ಬೇಬಿಯ ದನಿಯಲ್ಲಿದ್ದ ಗಾಬರಿಯನ್ನು ಗಮನಿಸಿದ ನನಗೆ ಅನುಮಾನ ಶುರುವಾಗಿ "ಅಪ್ಪನಿಗೆ ಏನಾಗಿದೆ? ಸರಿಯಾಗಿ ಹೇಳು" ಎಂದೆ. ಆಗ ಆಕೆ ಅಳಲು ಶುರುಮಾಡಿದಳು. ಆಕೆ ಅಳುತ್ತಿದ್ದದ್ದನ್ನು ಕೇಳಿದ ನನಗೆ ಲಂಕೇಶರಿಗೆ ಏನೋ ಆಗಿದೆ ಎಂದು ಅರಿವಾಗಿ ನಾನೂ ಅಳಲು ಶುರುಮಾಡಿದೆ. ಆಗ ನನ್ನ ತಂಗಿಯ ಗಂಡ ಶಶಿಧರ ಫೋನ್‌ಅನ್ನು ನನ್ನಿಂದ ಕಿತ್ತುಕೊಂಡ. ಆತ ಬೇಬಿಯೊಂದಿಗೆ ಮಾತನಾಡಿದ ನಂತರ "ನಾವೆಲ್ಲ ತಕ್ಷಣ ಬೆಂಗಳೂರಿಗೆ ಹೋಗಬೇಕು" ಎಂದ. ಆದರೆ ಕಾರ್‌ನಲ್ಲಿ ಬೆಂಗಳೂರಿಗೆ ವಾಪಸ್ ಬಂದರೆ ಲೇಟಾಗುತ್ತದೆ ಎಂದು ನಿರ್ಧರಿಸಿ ನಾವೆಲ್ಲ ಕಾರ್‌ಅನ್ನು ಅಲ್ಲಿಯೇ ಬಿಟ್ಟು ಏರೋಪ್ಲೇನ್ ಹತ್ತಿದೆವು.

ನನ್ನ ತಲೆ ಸಂಪೂರ್ಣವಾಗಿ ಖಾಲಿಯಾಗಿತ್ತು. ಏನೂ ತೋಚದವಳಂತೆ ಆಗಿದ್ದೆ. ಲಂಕೇಶರಿಗೆ ಏನಾಗಿದೆಯೋ ಎಂಬ ಯೋಚನೆ ನನ್ನನ್ನು ಕಾಡುತ್ತಿತ್ತು. ಅಳುತ್ತಲೇ ಇದ್ದೆ.

ನಾನು ಗೋವಾಗೆ ಬಂದಿದ್ದಕ್ಕೆ ನನ್ನನ್ನೇ ನಾನು ಸಾವಿರಾರು ಬಾರಿ ಶಪಿಸಿಕೊಳ್ಳುತ್ತಿದ್ದೆ. ಈ ಹೊತ್ತಿನಲ್ಲಿ ನಾನು ಯಾಕೆ ಗೋವಾಕ್ಕೆ ಹೋಗಬೇಕಿತ್ತು? ತೆಪ್ಪಗೆ ಮನೆಯಲ್ಲಿ ಇರಲು ಏನಾಗಿತ್ತು ನನಗೆ. ನನ್ನಂತಹ ಶನಿ ಈ ಜಗತ್ತಿನಲ್ಲೇ ಇನ್ನೊಬ್ಬಳು ಇರಲಿಕ್ಕಿಲ್ಲ ಎಂದು ನನ್ನನ್ನು ನಾನೇ ನಿಂದಿಸಿಕೊಳ್ಳುತ್ತಾ ಅಳುತ್ತಿದ್ದೆ. ನಾವಿದ್ದ ವಿಮಾನ ಯಾಕಿಷ್ಟು ಲೇಟ್ ಆಗುತ್ತಿದೆ, ಇನ್ನೂ ಯಾಕೆ ಬೆಂಗಳೂರು ಬಂದಿಲ್ಲ ಎಂದು ಚಡಪಡಿಸುತ್ತಿದ್ದೆ. ಕೊನೆಗೂ ನಾವೆಲ್ಲ ಬೆಂಗಳೂರು ತಲುಪಿದೆವು.

ವಿಮಾನ ನಿಲ್ದಾಣದ ಹೊರಗೆ ಲಂಕೇಶರ ಡ್ರೈವರ್ ರೇವಣ್ಣ ಎಸ್ಟೀಮ್ ಕಾರ್‌ನೊಂದಿಗೆ ನನಗಾಗಿ ಕಾಯುತ್ತಿದ್ದ. ಆತ ನನ್ನನ್ನು ಕಂಡಕೂಡಲೇ ಆ ಕಾರಿನ ಹಿಂದಿನ ಸೀಟಿನ ಬಾಗಿಲು ತೆರೆದ. ಆ ಕಾರು ನನ್ನ ಲಂಕೇಶರದು. ಅವರು ಪ್ರತಿದಿನ ಮನೆಯಿಂದ ಆಫೀಸಿಗೆ, ಆಫೀಸಿನಿಂದ ಮನೆಗೆ ಆ ಕಾರಿನಲ್ಲಿ ಮಲಗಿಕೊಂಡು ಹೋಗುತ್ತಿದ್ದರು. ಲಂಕೇಶರ ದಿಂಬು ಇನ್ನೂ ಆ ಕಾರಿನ ಹಿಂದಿನ ಸೀಟಿನಲ್ಲಿ ಇತ್ತು. ಅವರು ಕೂರುತ್ತಿದ್ದ, ಮಲಗುತ್ತಿದ್ದ ಜಾಗದಲ್ಲಿ ಕೂರಲು ನನ್ನಿಂದ ಸಾಧ್ಯವಾಗಲಿಲ್ಲ. ಅವರ ಪ್ರತಿನಿತ್ಯ ಉಪಯೋಗಿಸುತ್ತಿದ್ದ ದಿಂಬನ್ನು ಕಂಡಕೂಡಲೇ "ನಾನು ಅಲ್ಲಿ ಕೂರುವುದಿಲ್ಲ" ಎಂದು ಹೇಳಿದೆ.

ವಿಮಾನ ನಿಲ್ದಾಣಕ್ಕೆ ಭಾರತಿ ಗೌಡ ತನ್ನದೇ ಕಾರಿನಲ್ಲಿ ಬಂದಿದ್ದಳು. ಅವಳ ಕಾರಿನಲ್ಲಿ ನಾನು ನಮ್ಮ ಮನೆಗೆ ಬಂದೆ. ನಮ್ಮ ಮನೆಯನ್ನು ಪ್ರವೇಶಿಸಿದಾಗ ನನ್ನ ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಮನೆಯ ಹಾಲ್‌ನಲ್ಲಿ ಒಂದು ಮಂಚದ ಮೇಲೆ ಲಂಕೇಶರನ್ನು ಮಲಗಿಸಿದ್ದರು.

ಅವರ ಹತ್ತಿರ ಕೂತು ಅವರ ಹಣೆಯ ಮೇಲೆ ನನ್ನ ಕೈ ಇಟ್ಟೆ. ಅವರು ಕಣ್ಣು ಮುಚ್ಚಿ ಮಲಗಿದ್ದರು. ಮುಖ ಎಂದಿನಂತೆಯೇ ಇತ್ತು. ಯಾವ ನೋವಿನ ಛಾಯೆಯೂ ಇರಲಿಲ್ಲ. ಅವರು ಶಾಂತವಾಗಿ ಮಲಗಿದ್ದಾರೆ ಎನಿಸಿತು ಅವರನ್ನು ನೋಡಿದಾಗ.

ಅವರು ನಿಜವಾಗಿಯೂ ಹೋಗಿಬಿಟ್ಟಿದ್ದಾರೆ ಎಂದು ನನಗೆ ನಂಬಲಾಗಲಿಲ್ಲ. ಆದರೆ ಅವರ ದೇಹ ತಣ್ಣಗಾಗಿತ್ತು. ಅಳುವುದನ್ನು ಬಿಟ್ಟು ನನಗೆ ಬೇರೇನೂ ಉಳಿದಿರಲಿಲ್ಲ...


ಜನವರಿ 24ರ ರಾತ್ರಿ ನಿದ್ರೆ ಮಾಡಲು ಹೋದವರು ಶಾಶ್ವತವಾಗಿ ಮಲಗಿಬಿಟ್ಟರು.

ನಾನು ಇನ್ನೂ ಇಲ್ಲೇ ಇದ್ದೇನೆ. ಯಾವಾಗ ನಾನು ಹೋಗುತ್ತೇನೆ ಎಂಬುದರ ಬಗ್ಗೆ ನನ್ನಲ್ಲಿ ಉತ್ತರ ಇಲ್ಲ.

ನನ್ನ ಹುಳಿಮಾವು ಮಾತ್ರ ತನ್ನ ಪ್ರೀತಿಯ ಹುಳಿಮಾವಿನ ಮರದಡಿ ಚಿರನಿದ್ರೆಯಲ್ಲಿದ್ದಾರೆ...

(ಮುಗಿಯಿತು)

ಮಾಂಟೋನ ಪ್ರಾರ್ಥನೆ



ಹೇ ದೇವ! ಜಗತ್ಪಾಲಕನೇ! ದಯಾಮೂರ್ತಿಯೇ!
ಪಾಪಕೂಪದಲಿ ಮುಳುಗಿರುವ ಪಾಮರರು ನಾವು,
ನಿನ್ನ ಪಾದಪದ್ಮಗಳಿಗೆ ಸಾಷ್ಟಾಂಗವೆರಗಿ ಬೇಡುವೆವು:
ಪುಣ್ಯಾತ್ಮನಾಗಿದ್ದ ಗುಲಾಮ್ ಹಸನ್ ಮಾಂಟೋ
ಅವರ ಅನಿಷ್ಟ ಪುತ್ರ ಸದಾತ್ ಹಸನ್ ಮಾಂಟೋ

ಈತನಿಗೆ ಪರಿಮಳವೆಂದರೆ ಹೇವರಿಕೆ - ಸದಾ ಕೊಳಕಿನ ಬಯಕೆ;
ಈತ ಸೂರ್ಯದೇವನ ಪ್ರಕಾಶ ಪ್ರಸಾದದ ದ್ವೇಷಿ - ಅನವರತ ಕತ್ತಲಕೂಪದ ಆನಂದವಾಸಿ.
ಸಜ್ಜನ-ಶೀಲವಂತರಿಗೆ ಈತ ದುರ್ವಾಸಮುನಿ- ಬೆತ್ತಲಾಗಿರುವ ನಿರ್ಲಜ್ಜರ ಮೋಹದಲ್ಲಿ ಬಿದ್ದಿರುವ ಶಿಷ್ಯ. ಸಿಹಿಯಾದುದೆಲ್ಲಾ ಇವನಿಗೆ ಕಾಲು ಕಸ- ಕಹಿಯೇ ಇವನಿಗೆ ಪ್ರಾಣರಸ.
ಗರತಿಯರ ಸಂಗ ಇವನಿಗೆ ನರಕ-ಸೂಳೆಯರ ತೆಕ್ಕೆಯಲ್ಲಿ ಸ್ವರ್ಗದ ಪುಳಕ.
ಸ್ವಚ್ಛ ನಿರ್ಜರಿಣಿಯನ್ನು ಕಂಡು ಬೆಚ್ಚುವನಿವನು- ಮಡುಗಟ್ಟಿದ ಕೊಳಚೆಯಲ್ಲಿ ಸದಾ ಈಜುಪಟು.
ಲೋಕ ನಗುವಾಗ ಬಿಕ್ಕಿ ಅಳುವನೀತ- ಲೋಕ ಅಳುವಾಗ ಗಹಗಹಿಸಿ ನಗುವ ಪ್ರೇತ.
ಕಿರಾಕು ಮೆತ್ತಿದ ಮುಖಗಳು ಇವನನ್ನು ಸೆಳೆಯುವ ಚುಂಬಕ
ಬೆಚ್ಚಗೆ ಸವರುತ್ತ ಕಿರಾಕನ್ನು ತೊಳೆದು ನಿಜರೂಪ ತೋರುವುದೇ ಇವನ ಪ್ರಿಯ ಕಾಯಕ.

ದೇವಾ! ನಿನ್ನ ಕುರಿತು ಇವನಿಗಿಲ್ಲ ಇನಿತು ಭಕ್ತಿ!
ನಿನ್ನನ್ನು ಧಿಕ್ಕರಿಸಿದ ರಾಕ್ಷಸರಲ್ಲೇ ಇವನಿಗನುರಕ್ತಿ!

ಸ್ವಾಮಿ ದೇವನೇ! ಇವನೊಮ್ಮೆ ಲೋಕಕ್ಕೆ ಕಂಟಕ
ಪಾಶ ಬಿಗಿದು ಎಳೆದೊಯ್ಯೋ ಜಗದೋದ್ಧಾರಕ!

ಮೂಲ: ಸೌದತ್ ಹಸನ್ ಮಾಂಟೊ
ರೂಪಾಂತರ: ಕೆ.ಫಣಿರಾಜ್

ಚರ್ಮ ವ್ಯಾಖ್ಯೆ

"ಇಗೋ ಮಾಂಟೊ ಮಣ್ಣಾಗಿದ್ದಾನೆ
ಇಲ್ಲಿ
ಅವನೆದೆಯಲ್ಲಿ ಭದ್ರವಾಗಿರುವ ಕತೆ
ನೇಯುವ ಕುಸುರಿ ಕಲೆಯೂ
ಮಣ್ಣಾಗಿದೆ.
ಮಣ್ಣ ಹೊದ್ದು ಮಲಗಿರುವ ಮಾಂಟೊ
ಯೋಚಿಸುತ್ತಿದ್ದಾನೆ
ಕತೆಗಾರಿಕೆಯ ಸರದಾರನ್ಯಾರು-
ತಾನೋ! ದೇವರೋ!"

ಅನುವಾದ:
ಬಾಗೇಶ್ರೀ
ಮತ್ತು ಕೆ.ಫಣಿರಾಜ್

ಂಕೇಶತ್ರ ಇದ್ದೋರು ರಾಮುಲು ಹತ್ರ ಹೋದ್ರಂತೆ

ಭೂಮಿ ನೇಗಿಲು ಕೇಳುವ ಸಮಯ. ಆದರೆ ಊರ ಟ್ರ್ಯಾಕ್ಟರ್‌ಗಳು ಸದ್ದು ಮಾಡುತ್ತಿದ್ದವು. ನಿಜವಾದ ...ಮಿ ಪುತ್ರರು ಮಾತ್ರ ತಮ್ಮ ಸ್ವಂತ ನೇಗಿಲಿನಿಂದ ...ಮೆ ಮಾಡುತ್ತಿದ್ದರು. ಮುಂಗಾರು ಯತ್ಲೊ ಏನೊ ... ಆತಂಕ ಮನೆ ಮಾಡಿತ್ತು, ಇತ್ತ ರಾಜಕಾರಣದಲ್ಲೊ ...ದಿಬ್ಬರು ಯಾವ ಭರವಸೆಯೂ ಇಲ್ಲದೆ ...ಯುತ್ತಿರುವುದು ಉಗ್ರಿಯ ಅರಿವಿಗೆ ಬಂದು,

"...ಷಿಯ ಗೊತ್ತಾಯ್ತೆ ಮಾವ?" ಎಂದು ನಕ್ಕ. ಅವನ ನಗುವಿನಲ್ಲೇ ಸ್ವಾರಸ್ಯ ಗ್ರಹಿಸಿದ ಕಾಳಮಾವ,

"ಅದ್ಯಾವುದಪ್ಪ ವಸ ಸುದ್ದಿ?" ಎಂದ.

"ನಿನಿಗೆ ಗೊತ್ತಿರಂಗೆ ವಟ್ಟೆ ಮುದ್ದಣ್ಣ ಏನು ಮಾಡಿದ ...?"

"ಅದು ಹಳೆ ಸುದ್ದಿ ಅಲವೇನ್ಲ, ಅದ ತಗಂಡೇನು ...ತಿ ನೀನು."

"ಇರ್ಲಿ ಹೇಳು."

"ಹೇಳದಿನ್ನೇನು, ನಿನಿಗೂ ಗೊತ್ತಲವೆ. ಮನೆ ...ಗಿದ್ದಕಂಡು, ಪಾಲು ಕೇಳದಕಿಂತ ಮದ್ಲೆಯ ಮೂಲೇಲಿ ...ಪ್ಪ ಬೇಸಿಕಂಡು ತಿನ್ನಕ್ಕೆ ಸುರು ಮಾಡಿದ್ದೂ ಅಲ್ದೆ ...ಬಿನೆ ವಡದು ಬಚ್ಚಲುಮನೆ ಮಾಡಿಕಂಡಿದ್ದ."

"ಈಗ ಎಡೂರಪ್ಪನೂ ಅಂಗೇ ಮಾಡಿಕಂಡವುನೆ. ...ಲಿದ್ದಕಂಡೆ ಬ್ಯಾರೆ ಆಪೀಸು ಮಾಡಿಕಂಡವುನೆ. ಅವುನ ...ಕೆ ಬ್ಯಾರೆ, ಅವುನ ಯವಾರನೆ ಬ್ಯಾರೆ ಕಣಮಾವ. ಆ ...ಪಿವುಕೆ ಪಾಪ ಇವುನ್ನ ಇಟಗಳಂಗಿಲ್ಲ, ಸುಮ್ನಿರಂಗಿಲ್ಲ ...ಆಗ್ಯದೆ."

"ಹಾಲು ಹ್ವಡದ ಮ್ಯಾಲೆ, ಮನಸು ಹ್ವಡದ ಮ್ಯಾಲೆ ...ವಾಗದಿಲ್ಲ ಬುಡು."

"ಅದೇನೋ ನಿಜ. ಇನ್ನೇನಿದ್ರು ಎಡೂರಪ್ಪ ಬಿ.ಜೆ.ಪಿ. ...ದ್ದನೆ ಹೋರಾಡ್ತನೆ. ಯಲ್ಲಾರ ಜಾತಗನೂ ಬಿಚ್ಚತನೆ."

"ಬಿಚ್ಚಿದ್ರು ಅವೇನು ಅಲ್ಲಾಡದಿಲ್ಲ ಬುಡ್ಲ. ಕಿವಿ ಕಿತ್ತ ...ಗರಕನನ್ನ ಮಗನವು" ಎಂದ ಸೀರ.

"ಎಡೂರಪ್ಪೇನೋ ಕಾಂಗ್ರೆಸ್ಸಿಗೆ ಬತ್ತನೆ ಅಂತಿದ್ರಲ್ಲಾ" ...ಳು ಜುಮ್ಮಿ.

"ಅವುನ ಬಂದ್ರೂ ಇವುರು ಸೇರಸಬೇಕಲ್ಲ. ಅವುನ ...ಲೇನು ಒಪಿ ಕೇಸಿದವೆ. ಅವುನೊಂತರ ಸವುದ ... ಇದ್ದಂಗೆ. ಈ ಕಡೆ ವಲ್ದರೆ ಆ ಕಡೆ ಹರಕತ್ತದೆ, ಆ ... ವಲ್ದರೆ ಈ ಕಡೆ ಬಿಚ್ಚಗತ್ತದೆ. ಅಂಗಾಗ್ಯದ ಅವುನ ...

"ಸೋನಿಗಾಂಧಿ ಫೋಟಾ ತಗಂಡೋಗಿ ...ಕಂಡಿದ್ನಂತೆ ನಿಜವೆ?"

"ಏನೋ ಅಂಗಂದ್ರಪ್ಪ. ಜನಗಳೇನು ಡವಟು ಮಾಡಿದ್ರು ...ಸ್ತ್ರಿ ಸಿಬಿಐ ತನಿಖೆ ತಂಡ ಕೇಂದ್ರ ಸರಕಾರದ ಕೈಲಿದಂತೆ. ...ದ ಸೋನಿಗಾಂಧಿ ಫೋಟೋ ಹಾಯ್ಕಂಡ್ರೆ ಅವುಳು ...ಷಿ ತಡವಾಡಬವುದು. ಹಿಂಗೆ ಏನೇನೊ ...ಲೋಚನೆ ಮಾಡಿಕಂಡು ಆಫೀಸಲ್ಲಿ ಅವುಳ ಫೋಟಾ ...ದ್ದನಂತೆ. ಟಿವಿ ನನ್ನ ಮಗನವು ಅದ್ನೆ ದೊಡ್ಡ ಸುದ್ದಿ ...ದಿದವಂತೆ. ಅದ್ಕೆ ತಗದಾಕಿದನಂತೆ."

"ಜನ ಯಂಗೆ ಬದ್ಲಾಯ್ತರೆ ಅಂತ ಹೇಳಕ್ಕೆ ಬರದಿಲ್ಲ ಕಂಡ್ಯ."


"ಎಜ್ಜಾಕ್ಟ್ಲಿ ಕರಟ್ ದೊಡಪ್ಪ, ನೋಡು, ಲಂಕೇಶ್ ಜೊತೆ ಇದ್ದೋರ್ಯಲ್ಲ ಆ ಶ್ರೀರಾಮುಲು ಜೊತೆ ಸೇರಿಕಂಡಿದ್ದರಂತೆ" ಎಂದುಕೊಂಡು ವಾಟಿಸ್ಸೆ ಬಂದ.

"ಅದ್ಯಾರು ಸೇರಿಕಂಡಿದ್ದರೋ?"

"ಯಾರೊ ನನ್ನಂಗೆ ನಿನ್ನಂಗೆ ಇದ್ದ ಇಬ್ರು ಸೇರಿಕಂಡಿದ್ದರಂತೆ ಕಣೊ ಉಗ್ರಿ."

"ಅಲ್ಲಾ ಲಂಕೇಶ್ ಎಲ್ಲಿ, ರಾಮುಲು ಎಲ್ಲಿ? ಅದ್ಯಂಗೋಗಿ ಸೇರಿಕತ್ತರೊ?"

"ಲಂಕೇಶ್ ಇಲವಲ್ಲೋ ಈಗ ಅದ್ಕೆ ಹೋದ್ರು ಅತ್ತಗೆ."



"ಅಂಗರೆ ಇವುರು ಲಂಕೇಶ್ ಸಾಯಲಿ ಅಂತ ಕಾಯ್ಕಂಡಿದ್ದೊರು ಅನ್ನಂಗಾಯ್ತು."

"ಊ ಮತ್ತೆ, ಲಂಕೇಶನ ಸವಾಸದಿಂದ ಇವರು ನೆಟ್ಟಗಿರಬೇಕಿತ್ತು. ಕೆಟ್ಟ ಕೆಲಸ ಮಾಡಂಗಿರಲಿಲ್ಲ, ವ್ಯಭಿಚಾರಕ್ಕೆ ಪರಮಿಷನ್ನಿತ್ತೆ ವರತು ಭ್ರಷ್ಟ ಕೆಲಸಕ್ಕೆ, ಜಾತಿವಾದಕ್ಕೆ, ರಾಜಕಾರಣಿಗಳತ್ರ ಭಟ್ಟಂಗಿ ಕೆಲಸ ಮಾಡಕ್ಕೆ ಪರಮಿಷನ್ ಇರಲಿಲ್ಲವಂತೆ. ಪಾಪ ಈ ಮುಂಡೆಮಕ್ಕಳು ಕಷ್ಟಪಟ್ಟುಕಂಡು ಅದನ್ನೆಲ್ಲ ಅದಿಮಿಕಂಡು ಸುಮ್ಮನಿದ್ರು. ಯಾವಾಗ ಲಂಕೇಶ್ ತೀರಕಂಡನೊ. ಇವುರು ಹಗ್ಗ ಮೂಗುದಾರ ಹರಕಂಡ ಹೋಲಿ ದನಿನಂಗಾದ್ರು."

"ರಾಮುಲು ಅತ್ರಹೋದ್ರೆ ದುಡ್ಡು ಕೊಡ್ತನಂತೆ, ನಿಜವೆ?"

"ದುಡ್ಡಷ್ಟೇ ಅಲ್ಲ, ಯಲ್ಲಾನು ಕೊಡ್ತಾನಂತೆ ಕಣ್ರೊ. ಯಾಕೆ ಅಂದ್ರೆ ಅವುರು ಯಲ್ಲಾನು ದುಡ್ಡಿನಿಂದ್ಲೆ ಅಳದೋರು. ಅಂಗಾಗಿ ಅಲ್ಯಾವ ರಾಜಕಾರಣನೂ ಇಲ್ಲ, ತಲೆ ಮದ್ದೆಯಿಲ್ಲ ಮುಂಡೆವುಕೆ. ಅದ್ಕೆ ತಲೆಯಿದ್ದೊರ ಕೊಳ್ತಾಯಿದ್ದನಂತೆ."

"ಅವುನೇನೋ ಪಾದಯಾತ್ರೆ ಬತ್ತಾಯಿದ್ದನಂತಲ್ಲಾ."

"ಊ ಕಣಕ್ಕ, ನೀನು ಹೋಗಿ ಜಾಯಿನಾಗಬವುದಿತ್ತು, ನೋಡಾಗ್ಲೆ ಪ್ರೇಮನೆಂಡ್ತಿ ಇನ್ನೂ ಯಾರ್ಯಾರೊ ನೈಡೀತಾಯಿದ್ದರಂತೆ."

"ಪಾದಯಾತ್ರೆ ಯಾಕ್ ಮಾಡ್ತನ್ಲ?"

"ಅದವುನಿಗೂ ಸರಿಯಾಗಿ ಗೊತ್ತಿಲ್ಲ ದ್ವಡಪ್ಪ ಯಾವ್ದೊ ಹೇಳಿಕೊಟ್ಟವೆ. ಪಾಪ ನೈಡಿಯಕ್ಕೆ ಶುರುಮಾಡಿಬುಟ್ಟವನೆ. ಈಗ ಯಾಕಾದ್ರು ಇಂತ ಕೆಲಸಕ್ಕೆ ಕೈ ಹಾಕಿದ್ನೊ ಅನ್ನಂಗಾಗ್ಯದೆ."

"ಅಂತು ಅವುನೂ ಬಿಜೆಪಿಗೆ ವಡತ ಕೊಡ್ತನೆ."

"ಊಕಣೊ ಉಗ್ರಿ. ಅವುನ ರೆವಿನ್ಯೂ ಜಾಗದಲ್ಲಿ ಯಾರು ಗೆಲ್ತರೆ ಯಾರು ಸೋಲ್ತರೆ ಅಂತ ಹೇಳಕ್ಕೆ ಬರದಿಲ್ಲ, ಅವುಂದು ಒಂಥರಾ ದಿಕ್ಕು ತಪ್ಪಿದ ರಾಜಕಾರಣ. ಹೇಳಿಕೆ ಮಾತಿಗೆ ಹಂಡತಿ ಬಿಟ್ಕೊಂಡ ಪಜೀತಿ ಆಗ್ಯದೆ ಅವುಂದು."

"ಅಲ್ಲಾ, ಅವುನು ಗಣಿ ಲೂಟಿ ಮಾಡಿದೋನು, ಮೈಮ್ಯಾಲೆ ಐದಾರು ಕೇಸದೆ, ಅಂಥವತ್ರಕೆ ಲಂಕೇಶ್ ಜೊತೆ ಇದ್ದವು ಹೊಯ್ತವೆ ಅಂದ್ರೆ, ಅವಿನ್ನೆಂಥ ಗತಿಗೆಟ್ಟವು."

"ನನಿಗೂ ಅದೇ ಯೋಚನೆ ಕಣೊ ಉಗ್ರಿ. ಆ ರಾಮುಲು ಲೀಡ್ರು ಇನ್ನ ಜೈಲಲ್ಲವುನೆ. ಅವುನು ಹೊರಿಕೆ ಬಂದಾಗ ಇಬ್ರು ಜೋಡೆತ್ತಿನಂಗೆ ಜೊತೆ ಆಯ್ತರೆ. ಆಗ ಇವುರ ಕತೆ ಏನೂ ಅಂತ. ಅಂಗೇನಾರ ಮಾಡಬೇಕು ಅನ್ನದಾದ್ರೆ, ಎಡೂರಪ್ಪನ ಪ್ಯಾಂಟಿಗೆ ಕೈಹಾಕಿ, ಹಿಸಗತಾಯಿರೊ ಹಿರೇಮಠನ ಜೊತೆ ಸೇರಿಕಬವುದಿತ್ತು, ಬ್ಯಾಡ, ಸಂತೋಷ್ ಹೆಗಡೆ ಜೊತೆ ಸೇರಿಕಬವುದಿತ್ತು, ಅದೂ ಬ್ಯಾಡ ನೀವೆ, ಜನಗಳಿಗೆ ಹೇಳಿಕೊಂಡು ಹೋಗಬೇಕಾಗಿತ್ತು, ಯಂಗಿದ್ರು ಅಹಿಂದ ಸಂಸ್ಥಾಪಕರ ಜೊತೆ ನಾವು ಇದ್ದೊ ಅಂತಾರಲ್ಲಾ ನಾಚಿಗಾಗದಿಲವೆ ಇವುರಿಗೆ."

"ಜನ ಕೆಟ್ಟ ಮನುಸುರಿಗೂ ಬೈಲೆ ಕೊಡ್ತಾಯಿರದರಿಂದ ನಾಚಿಗಾಗದಿಲ್ಲ ಕಣೊ. ಕಾರೊಳಗಡೆ ಕುತಗಂಡು ಕಪ್ಪುಗ್ಲಾಜ ಏರಿಸಿಗಂಡ್ರೆ ಮುಗೀತು."

"ನಿಜ ಕಣೊ ಉಗ್ರಿ. ಮನುಷ್ಯ ಬಂಡಬಿದ್ದಾಂಗೂ ಬಂಡತನದಲ್ಲೇ ಉತ್ತರ ಕೊಡ್ತನೆ. ತಿಳಿಕಂಡಿರೊ ಜ್ಞಾನೆಲ್ಲಾ ಉತ್ತರ ಕೊಡಕ್ಕೆ ಬಳಸ್ತನೆ. ಜಾಸ್ತಿ ಓದಿಕಂಡಂಗೂ" ಮುಂಡೆ ಮಕ್ಕಳು ಕೆಟು ಕ್ಯರ ಹಿಡದೋಯ್ತಾ ಅವ್ರುರೆ. ಸಣ್ಣೊಂಥೊರ ಸ್ವಾಭಿಮಾನನೂ ಇವುರತ್ರ ಇಲ್ಲ" ಎಂದ ವಾಟಿಸ್ಸೆ.

"ಅದಿಮಿಕಂಡು ಕುತಗಳ್ಳ ಕಂಡಿದ್ದಿನಿ" ಎಂದಳು ಜುಮ್ಮಿ. ಶಾಕ್ ಆದ ವಾಟಿಸ್ಸೆ"

"ಯಾಕಕ್ಕ ಅಂಗಂತೀ?"

"ನಿನ್ನ ಮಾತ್ಯಲ್ಲಿ ಹಗಲೊತ್ತಿನವು ಕಂಡ್ಯ. ಸಂಧ್ಯಾಯ... ಅಂದ್ರೆ ವರಸೆ ಬದ್ಲು ಮಾಡ್ತಿ, ದುಡ್ಡು ಕಾಸು ಇರೋ..." ಒಂಥರಾ ಮಾತಾಡುಸ್ತಿ, ಇಲ್ಲೊದ್ದರನ್ನ ಒಂಥರಾ ಅಂತಿ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ನಾನು ಕಂಡುಲವೆ ನಿನ್ನ."

"ಅಕ್ಕಾ ಕಂಡೆಂ ಮಾಡಬ್ಯಾಡ. ನಾನು ಯಣ್ಣೆ ಯೇಟಿಗೆ ಅಂಗೆ ಮಾತಾಡಬಹುದು. ಆದ್ರೆ ವತ್ತಾರೆ ತಿರಗ ಮದ್ದಿದಂಗೆ ಆಯ್ತೀನಿ. ಅದೇತರ ಮಾತಾಡ್ತಿನಿ. ಯಾವ ಪಾರ್ಟಿಯವರೂ ನನ್ನ ಕೊಂಡಕಳಕ್ಕಾಗಿಲ್ಲ, ಅಷ್ಟೇ ಅಲ್ಲ ಯಾವ ದುಡ್ಡಿರೋನು ನನ್ನ ಕೊಳ್ಳಕ್ಕಾಗಿಲ್ಲ."

"ಹಿಡಕಂಡು ಬಂದ ನಾಯಿ ಮಲ ಹಿಡದತೇನ್ಲಾ, ನಿನ್ನಂಥೊನ್ನ ತಗಂಡೋಗಿ ಅದ್ಯಾವನು ಕಟ್ಟಾಯ್ಕಂಡನೂ" ಎಂದ ಕಾಳಮಾವ.

"ನಾನೇಳದು ಅದೇ ದೊಡ್ಡಪ್ಪ, ಯಾರೂ ನಮ್ಮನ್ನ ಕಟ್ಟಾಯ್ಕಳಂಗೆ ಇರಬಾರ್ದು. ಅದರಲ್ಲೂ ಜಗತ್ತಿಗೇ ನೀತಿ ಹೇಳೊ ಜನ ಕೇರಾಗಿರಬೇಕು. ಜನ ನಮ್ಮನ್ನ ಗಮನಸ್ತಾ ಅವುರೆ ಅನ್ನದನ್ನ ಯೋಚನೆ ಮಾಡಬೇಕು. ಲಂಕೇಶ್ ಬದುಕಿರೊವರಿಗೂ ವಿರೋಧಪಕ್ಷದ ಕೆಲಸ ಮಾಡಿದ್ರು. ಟೀಕೆ ಮಾಡೊ ಹಕ್ಕನ್ನು ಸಾಯೋವರಿಗೂ ಉಳಿಸಿಗಂಡಿದ್ರು. ಅದ್ಕೆ ಅಲವೆ ಜನ ಇವತ್ತಿಗೂ ಏನೇ ಆಗ್ಲಿ ಅವುನಿದ್ದಿದ್ರೆ ಏನು ಮಾಡೋನಪ್ಪ ಅಂತರೆ. ಯಾಕೇಳು?"

"ಕಾಳಮಾವನೂ ಅಂಗೆ ಅಲವೇನೂ ಬದುಕಿದ್ದು."

"ಇರಬವುದು. ಒಂದು ಸಣ್ಣ ಐಬೇನಪ್ಪ ಅಂದ್ರೆ, ದ್ಯಾವೇಗೌಡ್ರು ತಪ್ಪು ಕೆಲಸ ನಾವು ಮಾತಾಡುವಾಗ ಸೈಲೆಂಟಾಗಿರತನೆ ನಮ್ಮ ದೊಡಪ್ಪ"

"ಅದೇನಂತ ಇದಲ್ಲ ಬುಡೊ. ಯಂಥಾ ಮನುಸನಲ್ಲು ಒಂದೈಬು ಇದ್ದೇ ಇರತದೆ. ಆದ್ರೆ ಎಡೂರಪ್ಪನಂಗಿರೋನು ಅವುನೊಬ್ಬನೆಯ."

"ಅದ್ಯಾಕ್ಲ ಅಂಗಂತಿ?"

"ದಾರಿತಪ್ಪಿದ ಮಸ್ನ ದಡ ಸೇರದಿಲ್ಲ ಕಣೆ."

"ರಾಮುಲುನು ಅಂಗೆ ಅಲವೆ."

"ಅಂಗರವುನತ್ರಕೋದವು ಓದಿಬತ್ತವೆ."

"ದೆಪನೆಟ್ಲಿ, ಸೂರರ್ಲಿ, ಸರ್ಟನ್ಲಿ!!!"

ಹೆಸರಲ್ಲಿ ಏನಿದೆ?



ಮಕ್ಕಳಿಗಿಡುವ ಹೆಸರುಗಳನ್ನು ನೋಡಿ. ವಿನಿತ, ...ವಿನಿತ, ಪಿಂಕಿ, ಎಂಕಿ, ನಿಟಿ, ಗಿಟಿ ಏನೇನೋ ...ಸರುಗಳು.... ಕೇಳಿದರೆ ಹೆತ್ತವರಿಗೇ ಅರ್ಥ ...ತ್ತಿರುವುದಿಲ್ಲ. ಹೀಗಾಗಿ ಪಾರ್ವತಿ, ಸರಸ್ವತಿ, ಗೌರಿ, ...ಗೆ, ಸೀತೆ, ರೋಹಿಣಿ, ಅಶ್ವಿನಿ, ವನಜ ಮುಂತಾದ ...ಸುಗಳೆಲ್ಲ ಮರೆವು ಸೇರಿರುತ್ತವೆ. ಶ್ರೀನಿವಾಸ, ಪರಮೇಶ, ...ಶ್ವರ, ರಾಮು, ಕೃಷ್ಣ ಪರಶುರಾಮ, ಗಂಗಾಧರ ಮುಂತಾದ ...ರೆಲ್ಲ ಹೇಳಹೆಸರಿಲ್ಲದಂತೆ ಆಗಿರುತ್ತವೆ. ಹೆತ್ತವರಿಗೆ ...ವಷ್ಟೂ ಅರ್ಥಪೂರ್ಣ ಹೆಸರು ಇಡುವ ಆಶೆ. ...ರ್ಣಚಂದ್ರ, ತೇಜಸ್ವಿ, ಕೋಕಿಲೋದಯ ಚೈತ್ರ, ...ಲೋಕೋತ್ತರ ಶರ್ಮ, ವಿಜಯ ರಾಮಕೃಷ್ಣ ಲಕ್ಷ್ಮೀಪಾರ್ವತಿ ಸರಸ್ವತಿ ವಗೈರೆ ಹೆಸರುಗಳೆಲ್ಲ ...ದದ್ದು ಹಾಗೆ. ಆದರೆ ಇದ್ದಕ್ಕಿದ್ದಂತೆ ಒಂದು ಹೆಸರು ಎಲ್ಲೆಲ್ಲೂ ಜನರ ಕಿವಿಗೆ ಬೀಳುತ್ತದೆ. ಆ ...ರನ್ನು ಅನೇಕರು ಮಕ್ಕಳಿಗೆ ಇಡುತ್ತಾರೆ. 'ಪಲ್ಲವಿ'ಗೆ ಆದದ್ದು ಹಾಗೆ. ನಾನು ಅಕಸ್ಮಾತ್ ...ದೊಂದು ಚಿತ್ರಕ್ಕೆ 'ಪಲ್ಲವಿ' ಎಂದು ಹೆಸರಿಟ್ಟೆ. ಅದನ್ನಿಟ್ಟ ಕೆಲವು ತಿಂಗಳಲ್ಲೇ ಬೆಂಗಳೂರಿನ ...ದು ಥಿಯೇಟರ್‌ಗೆ, ಹತ್ತಾರು ಮನೆಗಳಿಗೆ, ನೂರಾರು ಹೆಣ್ಣುಮಕ್ಕಳಿಗೆ ಈ ಹೆಸರು ಬಂತು. ...ಲತಾ ತೀರಿಕೊಂಡ ಕೆಲವು ದಿನಗಳಲ್ಲೇ ಅನೇಕ ಹೆಣ್ಣುಮಕ್ಕಳು ಸ್ನೇಹಾ ಆದರು. ಅದು ...ಯ ಹೆಸರು. ನನ್ನ ಫೇವರಿಟ್ ಹೆಸರುಗಳು ಗಂಗಾ, ರೋಹಿಣಿ ಮತ್ತು ವನಿತಾ. ಆದರೆ ...ಗೆ ಒಂದು ಪದ ತುಂಬ ಸುಂದರ ಅನ್ನಿಸಿ ಅದನ್ನು ಹೆಚ್ಚು ಬಳಸಿದರೆ ಸವೆದುಹೋಗುತ್ತದೆ ...ದು ಚಿಕ್ಕಣ ಚಿನ್ನದ ನಾಣ್ಯಗಳನ್ನು ಶೇಖರಿಸುವಂತೆ ಅದನ್ನು ಸುಮ್ಮನೇ ಇಟ್ಟುಕೊಂಡೆ. ...ತಿ, ಆಶ್ಚರ್ಯ, ಆನಂದ, ರೋಮಾಂಚನ, ಚಕಿತ ಎಂದು ಬಳಸುವಾಗಲೆಲ್ಲ ಇದನ್ನು ಬಳಸಬಹುದು. ...ನ ನಾನು ಮತ್ತೆಮತ್ತೆ ಅದನ್ನು ಬಳಸುವುದೇ ಇಲ್ಲ, ಇದನ್ನು ನೋಡಿಕೊಂಡು ನನಗೆ ಈ ...ದ ಬಗ್ಗೆ ವಿಶೇಷ ಆಸಕ್ತಿ ಮೂಡುತ್ತದೆ.

'ವಿಸ್ಮಯ' ಹೆಣ್ಣುಮಕ್ಕಳಿಗೆ ಒಳ್ಳೆಯ ಹೆಸರು ಅಲ್ಲವೆ?

ಕನಸಿನ ಮಾಧ್ಯಮ



ಸಿನಿಮಾ ಎಂಬುದು ಮಾಯಾಲೋಕ. ಒಂದು ಮಟ್ಟದಲ್ಲಿ ಇದು ದಾಖಲೆ. ಇನ್ನೊಂದು ಮಟ್ಟದಲ್ಲಿ ಭ್ರಾಮಕ. ಮನುಷ್ಯನ

ಮನಸ್ಸನ್ನು ಪೂರ್ತಿ ಆವರಿಸಿಬಿಡಬಲ್ಲ ಈ ಸಿನಿಮಾ ಬಗ್ಗೆ ಇನ್ನೊಮ್ಮೆ ಯೋಚಿಸಿ. ನೀವು ಒಂದು ಮನೆಯ ಫೋಟೋ ತೆಗೆದರೆ ಅದು ಫೋಟೋ: ಮನೆಯಲ್ಲ, ಆ ಚಿತ್ರ ತನ್ನ ವಿವಿಧ ಆಯಾಮಗಳಿಂದ ನಿಮ್ಮನ್ನು ಮುತ್ತುತ್ತದೆ. ಮನೆಯ ಬಗ್ಗೆ ಸಿನಿಮಾದಲ್ಲಿ ಕತೆ ಹೇಳಿದರೆ ಅದು ಇನ್ನೂ ಆಳಕ್ಕೆ ಇಳಿದು ನಿಮ್ಮನ್ನು ಸೇರುತ್ತದೆ. ಈಚೆಗೆ ಟಿಬೆಟ್‌ನ ಧರ್ಮಗುರು ದಾಲೈ ಲಾಮಾ ಹಾಲಿವುಡ್ ಸಿನಿಮಾದವರ ಮೂಲಕ ಟಿಬೆಟ್‌ನ ದುರಂತವನ್ನು ಜಗತ್ತಿನ ಎದುರು ಮಂಡಿಸುತ್ತಿದ್ದಾರೆ.

ಇವತ್ತು ಹಾಲಿವುಡ್‌ನಲ್ಲಿ ಯಾರನ್ನು ಕೇಳಿದರೂ ಟಿಬೆಟ್ ವಾತಾವರಣದ ಸಿನಿಮಾ ತೆಗೆಯುವುದಾಗಿ ಹೇಳುತ್ತಿದ್ದಾರೆ. ಚೈನಾ ಟಿಬೆಟ್ಟನ್ನು ಆಕ್ರಮಿಸಿಕೊಂಡ ಮೇಲೆ ಟಿಬೆಟ್‌ಗೆ ಅದದ್ದು ಅಮೆರಿಕಾ ಟಿಬೆಟ್‌ನ ನೆರವಿಗೆ ಬಂದದ್ದು, ಟಿಬೆಟ್‌ನ ಮಹಾ ಸಾಧುಸ್ವಭಾವದ ಜನ. ಅವರನ್ನು ಹಿಂಸಿಸಿದ ರಾಕ್ಷಸರು.

ಇದೆಲ್ಲದಕ್ಕಿಂತ ನನಗೆ ಕುತೂಹಲಕರವಾಗಿ ಕಂಡದ್ದು ಈ ಸಿನಿಮಾ ದಾಲೈ ಲಾಮಾರ ಮೇಲೆ ಬೀರಬಹುದಾದ ಪ್ರಭಾವ. ಅದೆಷ್ಟೇ ಸೂಕ್ಷ್ಮವಾಗಿ ತೆಗೆದರೂ, ಕಠೋರ ದೃಶ್ಯಗಳನ್ನು ಅಳವಡಿಸಿಕೊಂಡರೂ ಈ ಸಿನಿಮಾ ಮಹಾ ಕನಸುಗಳ ಪ್ರಪಂಚ. ಅಪ್ಸರೆಯಂಥ ಕನ್ಯೆ ಅಪ್ಸರೆಯಾಗಿಯೇ ಸಿನಿಮಾದಲ್ಲಿ ಬಂಧಿತಳಾಗುವುದು, ಸಿನಿಮಾದ ಹೊರಗೆ ಅವಳು ದುರಂತಮಯವಾಗಿ ವೃದ್ಧೆಯಾಗುವುದು. ಬದುಕಿನಲ್ಲಿನ ಪರಿವರ್ತನೆ, ಬದುಕಿನ ಕ್ಷಣಿಕತೆ ಮತ್ತು ರೋಮಾಂಚನ... ಎಲ್ಲವನ್ನೂ ತೋರುವ ಸಿನಿಮಾ ಪ್ರಯೋಗಶಾಲೆಯ ವಸ್ತು, ಸೆಕೆಂಡ್‌ಗೆ ಇಪ್ಪತ್ನಾಲ್ಕು ಫ್ರೇಮ್‌ಗಳಲ್ಲಿ ಓಡಿ ಜೀವನದ ಚಲನೆಯನ್ನು ಸೃಷ್ಟಿಸುವ ಇದು ವಿಚಿತ್ರವಾದದ್ದು.



ಸಿನಿಮಾ ಮೂಲಕ ಟಿಬೆಟ್‌ಗೆ ಇಡೀ ಜಗತ್ತಿನ ಕಾಳಜಿ ದೊರಕಿಸಿಕೊಳ್ಳಬೇಕೆನ್ನುವ ದಾಲೈ ಲಾಮಾ ಇದೆಲ್ಲದರ ಅಂತ್ಯದಲ್ಲಿ ಏನಾಗುತ್ತಾರೋ ಎಂದು ಆತಂಕವಾಗುತ್ತದೆ.

ಯಾಕೆಂದರೆ ನಾವು ನೋಡುವ ಮನುಷ್ಯ ಭೌತಿಕ, ರಕ್ತಮಾಂಸದ ಜೀವಿ. ಆದರೆ ನಾವು ನೋಡದಿರುವ ಆತನ ನೆನಪು, ಕಾತರ, ಕನಸು ಮುಂತಾದವು ಅವನನ್ನು ದಂಗುಬಡಿಸಬಲ್ಲವು.

ಕನವರಿಕೆಯನ್ನೇ ತೆಗೆದುಕೊಳ್ಳಿ. ನಾವು ಗೊರಕೆ ಹೊಡೆಯುವುದೇ ನಮಗೆ ಗೊತ್ತಿರುವುದಿಲ್ಲ, ಇನ್ನು ಕನವರಿಕೆ ಹೇಗೆ ನಮ್ಮ ಹತೋಟಿಯಲ್ಲಿರಬೇಕು? ದಾಲೈ ಲಾಮಾ ಇದ್ದಕ್ಕಿದ್ದಂತೆ ಹ್ರಾಗಗಳನ್ನು ನೆನೆದು ಕನವರಿಸತೊಡಗಿದರೆ...

ಅವರ ಶಿಷ್ಯರು ಸುತ್ತ ನಿಂತು ಮೌನ ತಾಳುವುದನ್ನು ಕಲ್ಪಿಸಿಕೊಳ್ಳಬಲ್ಲೆ.

ಮೇ 28, 1997

ಸ್ವಾಮಿಗಳು ಬ್ಲೂಫಿಲಂ ನೋಡ್ತಾರಾ ಸಾ



ಎಚ್. ಎಲ್. ಕೇಶವಮೂರ್ತಿ

ಅಣಕ

ಇದು ಯುಗಧರ್ಮವೇ ಇರಬಹುದು. ಹಿಂದೂ ದೇವರುಗಳ, ಅವರ ಸಂಪ್ರದಾಯಗಳ ಅವಹೇಳನ ನಿರಂತರವಾಗಿ ನಡೆಯುತ್ತಲೇ ಇದೆ. ಇಂತಹ ಧರ್ಮವಿನಾಶದ ಪಿತೂರಿಯತ್ತ ಆಸ್ತಿಕ ಮಹಾಶಯರು ಗಮನಹರಿಸದೇ ಇರುವುದು, ಪ್ರತಿಭಟನೆಗೆ ಮುಂದಾಗದೇ ಇರುವುದು ನೋವಿನ, ದುಃಖದ ಸಂಗತಿ ಆಗಿದೆ. ಇದರ ಬಗ್ಗೆ ಎಚ್ಚರಿಸಲು ಕೆಲವು ವಾಹಿನಿಗಳಾದರೂ ಶ್ರಮಿಸುತ್ತಿರುವುದು ಆಶಾದಾಯಕವಾಗಿದೆ. ಇತ್ತೀಚೆಗೆ ಒಂದು ಟಿ.ವಿ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಒಂದು panel discussion ಏರ್ಪಡಿಸಿತ್ತು. ತಮ್ಮ ಮನೋಧರ್ಮ ಬಿಂಬಿಸಲು ಇಂತಹವುಗಳನ್ನು ಏರ್ಪಡಿಸ ಲಾಗುತ್ತದೆ ಎಂದು ಲಘುವಾಗಿ ಮಾತನಾಡುವವರೂ ಇದ್ದಾರೆ. ಅಂತಹವರ ಮಾತನ್ನು ಬದಿಗೊತ್ತಿ ಅಲ್ಲಿ ಹೊರಬಂದ ವಿಷಯಗಳನ್ನು ನನ್ನದೇ ಆದ ರೀತಿಯಲ್ಲಿ ವಿವರಿಸುವ ಪ್ರಯತ್ನ ಮಾಡುತ್ತೇನೆ.

ಒಂದು ಊರು. ಅಲ್ಲೊಂದು ಮನೆ. ಅದಕ್ಕೆ ಕಾಂಪೌಂಡು ಗೋಡೆ ಇತ್ತು. ಈ 'ಅವಸರ' ಅನ್ನೋದು ಯಾವಾಗ ಯಾರಿಗೆ ಎಲ್ಲಿ ಆಗುತ್ತೆ ಎಂದು ಹೇಳಲು ಬರುವುದಿಲ್ಲ. ಮೂತ್ರಾಲಯಗಳಿಗೆ ಹೋಗೋಣ ಅಂದರೂ ಎಲ್ಲ ಕಡೆಯೂ ಇರುವುದಿಲ್ಲ. ಇದ್ದರೂ ಒಳಕ್ಕೆ ಹೋಗಲು ಸಾಧ್ಯವೇ ಆಗದ ಹಾಗೆ ಅದರ ನಿರ್ವಹಣೆ ಇರುತ್ತೆ ಎನ್ನುವುದು ಎಲ್ಲರ ಅನುಭವ. ಆ ಮನೆಯ ಮುಂದೆ ಹೋಗುವವರಿಗೆ ಕೆಲವೊಮ್ಮೆ 'ಅವಸರ' ಆಗೋದು. ಅವರು ಗೋಡೆ ಕಡೆ ಮುಖ ಮಾಡಿ 'ಅವಸರ' ನೀಗಿಸಿ ಕೊಳ್ಳುತ್ತಿದ್ದರು. ಈ 'ಅವಸರ' ಅನ್ನೋದು ಅಂಟು ಜಾಡ್ಯ. ಒಬ್ಬರಿಗೆ ಆದರೆ ಎಲ್ಲರಿಗೂ ಆಗುವುದು ಸಾಮಾನ್ಯ. ಹೀಗಾಗಿ ಆ ಮನೆಯ ಕಾಂಪೌಂಡು ಗೋಡೆಗೆ ಪ್ರೋಕ್ಷಿಸಿದ ತೀರ್ಥದಿಂದ ಮನೆಯವರಿಗೆ ಎರಡು ರೀತಿಯ ತೊಂದರೆ ಆಯಿತು. ಒಂದು ಅಸಹನೀಯ ಗಬ್ಬು ವಾಸನೆಯದ್ದು. ಇನ್ನೊಂದು ಬೆಳಗ್ಗೆ ಆದರೆ ಗೋಡೆಗೆ 'ಅವಸರ' ತೀರಿಸಲು ನಿಂತಿರುವವರ ದರ್ಶನ ಭಾಗ್ಯ! ಹೇಳಿ ನೋಡಿದರು. ಕೇಳಲಿಲ್ಲ. 'ಇಲ್ಲಿ ಮೂತ್ರ ವಿಸರ್ಜನೆ ಮಾಡಬಾರದು' ಎಂದು ಬರೆಸಿದರು. ಓದಲು ಬಾರದವರಿಗೆ ಮನೆಯವರು ನಿಷೇಧ ಹೇರಿದ್ದಾರೆ ಎಂಬುದು ಅರಿವಿಗೇ ಬರಲಿಲ್ಲ. ಇನ್ನು ವಿದ್ಯಾವಂತ ಮಹಾಶಯರದ್ದು ಮತ್ತೊಂದು ರೀತಿ. ಅದನ್ನು ಓದಿ ಏನನ್ನೋ ಮರೆತವರಂತೆ ತಕ್ಷಣ 'ಅವಸರ' ಕ್ರಿಯೆಗೆ ಮುಂದಾಗುತ್ತಿದ್ದರು!

ಮನೆಯವರಿಗೆ, ಮನೆಯೇ ನರಕ ಆಯಿತು. ಮನೆ ಬದಲಾಯಿಸುವ ಹಾಗಿಲ್ಲ. ಸ್ವಂತ ಮನೆ. ಸಂಕಟದಲ್ಲಿರುವವರಿಗೆ ವೆಂಕಟರಮಣ ಬಂದ. ಕಾಂಪೌಂಡು ಗೋಡೆಯ ಮೇಲೆ ದೇವರ ಚಿತ್ರವನ್ನ ಸೊಗಸಾಗಿ ಬಿಡಿಸಿದ. ಸೂಚನಾವಾಕ್ಯ ಮಾಡಲಾಗದ್ದನ್ನು ದೇವರು ಮಾಡಿದ್ದ! ದೇವರ ಮುಖಕ್ಕೆ ಮೂತ್ರ ವಿಸರ್ಜನೆಯೆ? ಎಂತಹ ನಾಸ್ತಿಕನ ಮನಸ್ಸೂ ಒಪ್ಪದ ಸಂಗತಿ ಅಲ್ಲವಾ. ಮಹಾಶಯರುಗಳ ತೀರ್ಥ ಪ್ರೋಕ್ಷಣಾ ಕಾರ್ಯ ಬಂದ್ ಆಯಿತು. ನಿರಾಳವಾಯಿತು ಮನೆಯವರ ಮನಸ್ಸು.

ಮುಗಿಯಿತೆ ಅವರ ಸಂಕಟ? ನಿರಾಳವಾಯಿತೆ ಅವರ ಮನಸ್ಸು?

ಅಯ್ಯೋ ರಾಮನೇ ಏನೆಂದು ಹೇಳಲಿ?



ಸಿಡಿದೆದ್ದರು ಭಜರಂಗಿಗಳು!

ಮಕ್ಕಳ ತಡೆಯಲು ನಿರೋಧ್ ಬಳಸಿದಂತೆ ಉಚ್ಚೆ ಉಯ್ಯುವುದ ತಡೆಯಲು ದೇವರು ಬಳಸುತ್ತಿದ್ದಾರಲ್ಲಾ, ಆ ಸರ್ವಾಂತರ್ಯಾಮಿ ಇವರಿಗೆ ನಿರೋಧ್ ರೀತಿ ಬಳಕೆ ಆದನಲ್ಲ, ಅವನನ್ನು ಹಾಗೆ ಬಳಸಿಕೊಂಡಿದ್ದಾರಲ್ಲಾ ಎಂಬುದು ಅವರ ಆಕ್ರೋಶ. ಮನೆಯವರ ತಂತ್ರಕ್ಕೆ ರೂಪಿತವಾಯಿತು ಭಜರಂಗಿಗಳ ಪ್ರತಿತಂತ್ರ! ಹೇಗೋ ಮನೆಯವರ ಭಾವಚಿತ್ರ ಸಂಪಾದಿಸಿದರು. ಅವನ್ನ ಅದೇ ಕಾಂಪೌಂಡು ಗೋಡೆಯ ಮೇಲೆ ಚಿತ್ರಿಸಿದರು!

ಈಗ ಏನಾಯಿತು ನೋಡಿ. ಅವತ್ತಿನಿಂದ ಮನೆಯವರ ಮುಖದ ಮೇಲೇ 'ಅವಸರ'ದ ತೀರ್ಥ ಪ್ರೋಕ್ಷಣೆ! ಈ ದೃಶ್ಯ ಮನೆಯವರಿಗೆ ಅಸದಳ ನೋವುಂಟು ಮಾಡಿತು. ಗಾಬರಿ ಬಿದ್ದ ಅವರು ತಮ್ಮ 'ಮುಖ' ಉಳಿಸಿಕೊಳ್ಳಲು ಕಾಂಪೌಂಡು ಗೋಡೆಗೆ ಬಣ್ಣ ಹೊಡೆಸಬೇಕಾಯಿತು!

ಅದು ಸರಿ. ಆದರೆ ಮನೆಯವರಿಗೆ ಹೊಡೆಯುತ್ತಿದ್ದ ಕಟುವಾಸನೆ; ಅಸಹನೀಯ ಬದುಕು ಸರಿಹೋಯಿತೆ?

ಆದರ ಪ್ರಶ್ನೆ ಬೇಡ. ದೇವರಿಗೆ ಆಗುವ ಅವಮಾನ ನಿಂತಿತಲ್ಲ ಅದು ಸಾಕು!

ಇದು ಭಜರಂಗಿ ನ್ಯಾಯ!

****

ಮತ್ತೊಂದು ಚರ್ಚೆಯ ವಿಷಯ–ಮಾತಾ ಬಿಯರ್!

ವಿದೇಶೀ ಕಂಪನಿಯ ಬಿಯರ್ ಬ್ರಾಂಡ್ ಅಂತೆ ಅದು!

ಇದರಿಂದ ಏನು ತೊಂದರೆ ಅಂದರೆ–ಕಾಳಿಮಾತಾಗೆ ಅವಮಾನ ಆಗಿದೆ!

ಸ್ವಾರಸ್ಯಕರ ಆಗಿದೆ. 'ರಾಘವೇಂದ್ರ ವೈನ್‌ಸ್ಟೋರ್' ಅಂದರೆ ರಾಘವೇಂದ್ರನಿಗೆ ಅವಮಾನವೆ?' 'ವೆಂಕಟೇಶ್ವರ ಹಂದಿಮಾಂಸದ ಅಂಗಡಿ' ಎಂದರೆ ಏಳು ಬೆಟ್ಟದ ಮೇಲೆ ಕುಳಿತಿರೋ ತಿಮ್ಮಪ್ಪನಿಗೆ ಮಾಡಿದ ಅವಮಾನವೆ?

ಹೌದು ಅನ್ನುವವರೂ ಇರಬಹುದು. ಇಲ್ಲ ಎನ್ನುವವರೂ ಇರಬಹುದು.

ಯಾಕೆ ಇಲ್ಲ?

ಮೊಕದ್ದಮೆ ದಾಖಲಿಸಿದಿರಿ ಅನ್ನಿ. ಆರೋಪಿ 'ಆ ದೇವರ ಕೃಪೆಯಿಂದಲೇ ನನ್ನ ವ್ಯಾಪಾರ ವೃದ್ಧಿಸಿದೆ' ಎನ್ನಬಹುದು! ನ್ಯಾಯಾಲಯ ಅದನ್ನು ಪುರಸ್ಕರಿಸಲೂಬಹುದು. ಅಲ್ಲಿಗೆ ಏನಾಯಿತು. ಲಾಭ ಬರುವಂತಿದ್ದರೆ ದೇವರು ಅವಮಾನ ಸಹಿಸಿಕೊಳ್ಳುತ್ತಾನೆ ಅಂದ ಹಾಗಾಯಿತು! ಅಥವಾ ನ್ಯಾಯಾಲಯವೇ ಯಾರಿಗೆ ಅಪಮಾನ ಆಗಿದೆಯೋ ಅವರೇ ಮೊಕದ್ದಮೆ ಹೂಡಲಿ ಎನ್ನಬಹುದು. ಆಗ ಎಲ್ಲಿಂದ ಕರೆದು ತರುವುದು ದೇವರನ್ನ? ಇವರೇನು ಭಕ್ತ ಪ್ರಹ್ಲಾದರೆ!?

****

ಇನ್ನು ಶ್ರೀರಾಮಚಂದ್ರ.

ಏನು ಮಹಿಮೆ ಆತನದ್ದು!

ದುರುಳ ರಾವಣ ಸೀತಾಮಾತೆಯನ್ನು ಕದ್ದು ಹೊಯ್ದ ಆ ಮಾತೆಯನ್ನು ಕರೆತರಲು ಲಂಕೆಗೆ ಹೋಗಬೇಕಿತ ಸಮುದ್ರ ಅಡ್ಡ ಇತ್ತು, ರಾಮಚಂದ್ರ ಸೇತುವೆ ನಿರ್ಮಿಸಿದ ಶ್ರೀರಾಮನ ಪಾದ ಸ್ಪರ್ಶಿಸಿದ ಆ ರಾಮಸೇತುವೇ ಪವಿ ಹಿಂದೂಗಳ ಯಾತ್ರಾಸ್ಥಳ. ಇದೆಲ್ಲದರ ಅರಿವಿದ ಕರುಣಾನಿಧಿ ಎಂಬ ಪಾಷಂಡಿ 'ರಾಮನೇ ಹುಟ್ಟಿರಲಿ ಹಾಗಾದಾಗ ರಾಮಸೇತು ಎಲ್ಲಿ ಬಂತು' ಎಂದು ಕೇಳು ಉದ್ಧಟತನ ತೋರಿದ್ದಾನೆ. 'ರಾಮ ಯಾವ ಇಂಜಿನಿಯರು ಅವನು ಯಾವ ಕಾಲೇಜಿನಲ್ಲಿ ಡಿಗ್ರಿ ತಗಂಡ' ಎಂ ಪ್ರಶ್ನಿಸುತ್ತಿದ್ದಾನೆ. ಆ ಶತಮೂರ್ಖನಿಗೆ ತ್ರೇತಾಯುಗದ ಕಾಲೇಜುಗಳು ಇರಲಿಲ್ಲ ಎಂಬ ಅರಿವೂ ಇ ಬಹುಸಂಖ್ಯಾತ ಹಿಂದೂಗಳ ಮನಸ್ಸಿಗೆ ನೋವಾಗು ಮಾತನಾಡುತ್ತಿದ್ದಾನೆ.

ಕರುಣಾನಿಧಿಯ ಮಾತು ಅಕ್ಷಮ್ಯ ಅಪರಾಧ. ನಮ್ಮ ಪ್ರಜಾಪ್ರಭುತ್ವ. ನಿರಂಕುಶ ಪ್ರಭುತ್ವ ಅಲ್ಲ. ಬಹುಜನ ಮಾತಿಗೇ ಇಲ್ಲಿ ಬೆಲೆ ಸಿಗಬೇಕು. ಇದಕ್ಕಾಗಿ ಓ 'ಸ್ವಾಭಿಮಾನಿ' ನ್ಯಾಯಮೂರ್ತಿಗಳು ನ್ಯಾಯಾಲಯ ಮೆಟ್ಟಿಲು ಏರಿದ್ದಾರಂತೆ. ಆದರೆ ಏನು ಮಾಡುವುದ ನ್ಯಾಯಾಲಯದ್ದು ಯಾವಾಗಲೂ ಆಮೆಯ ನಡಿ ಧಾರ್ಮಿಕಹೀನ ಪ್ರಚೋದನೆಗಳಿಗೆ ಕಾರಣವಾದ ಇಂತ ವಿಷಯಗಳನ್ನು ತುರ್ತಾಗಿ ಪರಿಗಣಿಸಬೇಕು. ಆದ್ಯತೆ ಮೇ ತೀರ್ಪು ನೀಡಬೇಕು. ಆದರೇನು ಮಾಡೋಣ. ಈ ಹಿಂದ ನ್ಯಾಯಮೂರ್ತಿಗಳಿಗೆ ಇರುವ 'ಸ್ವಾಭಿಮಾನ' ನ್ಯಾಯಾಧೀಶರ ಇಲ್ಲವಲ್ಲಾ ಎಂಬುದು ಅವರ ಕೊರಗು. ಹೀಗಾಗಿ ಮೊಕದ್ದಮೆ ನ್ಯಾಯಾಲಯದಲ್ಲಿಯೇ ಕೊಳೆಯುತ ಬಿದ್ದಿದೆಯಂತೆ!

ಎಂತಹ ವಿಪರ್ಯಾಸ!

****


ಇವನ್ನೇ ಮೆಲುಕು ಹಾಕುತ್ತಾ ಇದ್ದೆ. ಕ್ಯಾತೇಗ ಒಕ್ಕರಿಸಿದ. ಅವನ ಮುಖ ನೋಡಿದೆ. ಖಂಡುಗ ಪ್ರಶ್ನೆ ದರ್ಶನ ಮಾಡಿದ ಹಾಗಾಯಿತು.

'ಸ್ವಾಮಿಗೋಳು ಸಿನಿಮಾ ನೋಡಬಹುದಾ ಸಾ' ಅ ಕೇಳಿದ.

'ಯಾವ ಸ್ವಾಮಿಗೋಳು?'

ಕರ್ತವ್ಯ ಮರೆತ ಕನ್ನಡ ಚಿತ್ರೋದ್ಯಮ

ಹಿಂದಿ ಚಿತ್ರನಟ ಆಮಿರ್ ಖಾನ್‌ನ 'ಸತ್ಯಮೇವ ಜಯತೆ' ಟಿ.ವಿ. ಶೋ ಬಗ್ಗೆ ಬರೆಯಲೇಬೇಕಾಗಿದೆ. ಹೆಣ್ಣು ಭ್ರೂಣಹತ್ಯೆ ಮತ್ತು ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ಬಗ್ಗೆ ಆತ ನಡೆಸಿಕೊಟ್ಟ ಕಾರ್ಯಕ್ರಮ ಅತ್ಯಂತ ಉಪಯುಕ್ತವಾಗಿತ್ತು ಮತ್ತು ಪ್ರತಿಯೊಬ್ಬರೂ ನೋಡಲೇಬೇಕಾದ ಕಾರ್ಯಕ್ರಮವಾಗಿತ್ತು. ನಮ್ಮ ಅಕ್ಕಪಕ್ಕದ ಭಾಷೆಯವರು ಈ ಕಾರ್ಯಕ್ರಮವನ್ನು ತಮ್ಮದೇ ಭಾಷೆಯಲ್ಲಿ ನೋಡಿದರೆ ಕನ್ನಡಿಗರಿಗೆ ಆ ಭಾಗ್ಯ ಇರಲಿಲ್ಲ. ಕನ್ನಡದ ಡಬ್ಬಿಂಗ್ ವಿರೋಧಿ ನೀತಿಯಿಂದಾಗಿ ಕನ್ನಡ ಮಾತ್ರ ಅರ್ಥಮಾಡಿಕೊಳ್ಳಬಲ್ಲ ನಮ್ಮ ಶೇಕಡಾ 60 ರಷ್ಟು ಜನತೆ ಉತ್ತಮ ಕಾರ್ಯಕ್ರಮವೊಂದನ್ನು ನೋಡುವ ಅವಕಾಶದಿಂದ ವಂಚಿತವಾಯಿತು ಅಥವಾ ಕಾರ್ಯಕ್ರಮ ನೋಡುವ ಅವರ ಹಕ್ಕನ್ನು ಕಿತ್ತುಕೊಳ್ಳಲಾಯಿತು.



ಪರಭಾಷೆಯಿಂದ ಡಬ್ ಮಾಡಿದರೆ ಕನ್ನಡ ಸಿನಿಮಾಗಳು ಓಡುವುದಿಲ್ಲವೆಂಬುದು ಕನ್ನಡ ಚಿತ್ರರಂಗದವರ ಕೊರಗು. ಹಾಗಾಗಿ ಕನ್ನಡದಲ್ಲಿ ಡಬ್ಬಿಂಗ್ ನಿಷೇಧ! ಬೇರೆ ಭಾಷೆಯ ಚಿತ್ರಗಳನ್ನು, ಕಾರ್ಯಕ್ರಮಗಳನ್ನು ಕನ್ನಡಕ್ಕೆ ತರಲು ನಿಷೇಧಿಸಿದ ಮೇಲೆ ಪರಭಾಷೆಯ ಚಿತ್ರಗಳ–ಕಾರ್ಯಕ್ರಮಗಳ ಗುಣಮಟ್ಟಕ್ಕೆ ಸಮನಾಗಿ ಕನ್ನಡ ಚಿತ್ರಗಳನ್ನು ಮತ್ತು ಕಾರ್ಯಕ್ರಮಗಳನ್ನು ಮಾಡಬೇಕಾಗಿದ್ದುದು ಉದ್ಯಮದವರ ಕರ್ತವ್ಯವಾಗಿತ್ತು. ಆದರೆ ಕನ್ನಡದಲ್ಲಿ ಅದಾಗಲೇ ಇಲ್ಲ. ಡಬ್ಬಿಂಗ್ ವಿರೋಧಿಸಿದವರೇ ರೀಮೇಕ್ ಮೂಲಕ ಕನ್ನಡ ಸೊಗಡನ್ನು ಕೆಡಿಸುತ್ತಾ ಬಂದರು. ಮಾತೆತ್ತಿದರೆ ಕನ್ನಡಾಭಿಮಾನದ ಹೆಸರಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾ ಬಂದರು. ಉತ್ತಮ ಚಿತ್ರಗಳನ್ನು, ಕಾರ್ಯಕ್ರಮಗಳನ್ನು ಮಾಡಿದರೆ ಕನ್ನಡಿಗರು ನೋಡೇ ನೋಡುತ್ತಾರೆಂಬ ಸತ್ಯವನ್ನು ಚಿತ್ರೋದ್ಯಮದವರು ಅರ್ಥಮಾಡಿಕೊಳ್ಳಬೇಕು. ಯಾವಾಗಲೂ ಸೀಮಿತ ಮಾರುಕಟ್ಟೆಯ ಬ ಮಾತನಾಡುವ ಇವರು ಮಾರುಕಟ್ಟೆ ವಿಸ್ತರಣೆಗೆ ಎದೆಗಾರಿಕೆ ತೋರಬೇಕಾಗಿ ಕನಿಷ್ಠ ಸಾಮಾಜಿಕ ಕಾಳಜಿಯನ್ನುಳ್ಳ ಚಿತ್ರಗಳನ್ನು ಮತ್ತು ಕಾರ್ಯಕ್ರಮಗಳನ್ನಾದರ ಕನ್ನಡಕ್ಕೆ ಡಬ್ಬಿಂಗ್ ಮಾಡುವ ಅವಕಾಶವಿರಬೇಕು. ಇಲ್ಲದಿದ್ದಲ್ಲಿ ನಮ್ಮಲ್ಲಿರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ಮಹಾನ್ ನಟರುಗಳು–ನಿರ್ದೇಶಕರು ಆಮೀರ್ ಖಾನ್ ರೀತಿಯಲ್ಲಿ ಸಾಮಾ ಹೊಣೆಗಾರಿಕೆ ನಿಭಾಯಿಸುವಂತಹ ಕಾರ್ಯಕ್ರಮಗಳನ್ನು ಮಾಡುವತ್ತ ಪ್ರಯ ನಡೆಸಬೇಕು. ಇಲ್ಲದಿದ್ದರೆ ಕನ್ನಡಿಗರು ಬೇರೆ ಭಾಷೆಗಳತ್ತ ಸಂಪೂರ್ಣವ ವಾಲುತ್ತಾರೆ. ಇನ್ನಾದರೂ ಕನ್ನಡದ ನಟ–ನಿರ್ದೇಶಕರು, ಸಾಹಿತಿಗ ಬುದ್ಧಿಜೀವಿಗಳು, ಉದ್ಯಮದವರೆಲ್ಲರೂ ಸಾಮಾಜಿಕ ಬದ್ಧತೆಯನ್ನ ಗಂಭೀರವಾದ ಚಿತ್ರಗಳನ್ನು, ಕಾರ್ಯಕ್ರಮಗಳನ್ನು ಮಾಡುವತ್ತ ಗಮನಹರಿಸ

- ಕು.ಸ. ಮಧುಸೂದನ್, ಚಿಕ್ಕಮಗಳೂ

ತಪ್ಪು ಸರಿಮಾಡಿಕೊಳ್ಳಿ



ತಮ್ಮ 'ಪತ್ರಿಕೆ' ಪ್ರಾರಂಭವಾದಾಗಿನಿಂದ ತಪ್ಪದೇ ಓದುತ್ತಾ ಬಂದಿದ್ದೇನೆ. ಪತ್ರಿಕೆ ತುಂಬಾ ಸ್ವಾರಸ್ಯಕರವಾಗಿರುತ್ತದೆ.

ಪತ್ರಿಕೆಯ ಮೇ 9, 2012ರ ಸಂಚಿಕೆಯಲ್ಲಿ, ಪುಟ–15 ರಲ್ಲಿ '1955ರಲ್ಲಿ ನಡೆದ ಮೈಸೂರು ಆಕಾಶವಾಣಿ ಸಮಾರಂಭದಲ್ಲಿ ಈ ಅಪರೂಪದ ದೃಶ್ಯವನ್ನು ಕ್ಲಿಕ್ಕಿಸಿದವರು ಬಿ.ಎಸ್.ನಾಗರಾಜನ್' ಎಂದು ತಿಳಿಸುತ್ತಾ ಏಳು ಮಹನೀಯರ ಫೋಟೊಗಳನ್ನು ತೋರಿಸಿದ್ದೀರಿ. ಎಲ್ಲಾ ಸರಿಯಾಗಿದೆ. ಆದರೆ ಆ ಫೋಟೋದಲ್ಲಿರುವ ನಾಲ್ಕನೆಯವರು 'ವೀ. ಸೀತಾರಾಮಯ್ಯ'ನವರು. ಆದರೆ ನೀವು 'ಎಂ.ವೀ.ಸೀತಾರಾಮಯ್ಯ'ನವರು ಎಂದು ಪ್ರಿಂಟ್ ಮಾಡಿದ್ದಿರಿ. ವಿಸೀ ಬೇರೆ, ಎಂ.ವಿ.ಸೀ ಬೇರೆ.

ದಯವಿಟ್ಟು ಮುಂದಿನ ಸಂಚಿಕೆಯಲ್ಲಿ ಇದನ್ನು ಸರಿಪಡಿಸಿ ಪ್ರಕಟಿಸಿ.

- ಎ. ಗೋಪಾಲಸ್ವಾಮಿ, ಬೆಂಗಳೂರು

ಎದೆ ಝಲ್ ಎನಿಸುವ ಮಾಂಟೊ

ಒಂದೇ ಗುಕ್ಕಿಗೆ ಆತ್ಮಬಂಧು ಮಾಂಟೋನನ್ನು ಓದಿಕೊಂಡೆ. ಕೋವ ದಳ್ಳುರಿಗಳು ತುಂಬಿತುಳುಕುತ್ತಿದ್ದ ಮತ್ತು ದೇಶ ವಿಭಜನೆಯ ಕಾಲದ ತೀವ್ರ ಯಾತನೆಯೊಂದಿಗೆ ಬರೆದ ಆತ ತನ್ನ ಕಥೆಗಳ ಮೂಲಕ ಚಿರಸ್ಥಾ ಆಗಿದ್ದಾನೆ. ಸಾದತ್ ಹಸನ್ ಮಾಂಟೋನ ಹಲವು ಕಥೆಗಳು ಓದಿದ ಎದೆ ಝಲ್ ಅನ್ನುತ್ತದೆ. ಆತನ ನಾಟಕಗಳು ಕಾಡದೇ ಇರವು.

...ಅದೇ ಸಾ ಕಾವಿ ಬಟ್ಟೆ ಹಾಕಿರೋರು.'
...ಯಾಕೆ ಅವರು ಮನುಷ್ಯರಲ್ವಾ?'
...ಮನುಷ್ರೇ ಸರಿ ಸಾ. ಆದ್ರೆ ಅವರು ಯಲ್ಲಾನೂ ...ರಲ್ವ ಸಾ?'
...ಹಲ್ಕಾ ಸಹವಾಸ. ಅವನ ಮಾತೆಲ್ಲ ಹೀಗೆ. ಹಿಂದೆ ... ದಿವಸ ಬಂದಿದ್ದ. ಬಂದವನೇ 'ಯತಿಗಳು ಅಂದ್ರೆ ... ಸಾ' ಅಂತ ಕೇಳಿದ್ದ. 'ಸರ್ವಸಂಗ ಪರಿತ್ಯಾಗಿಗಳು. ...ನ್ನೂ ತ್ಯಜಿಸಿದವರು' ಅಂದಿದ್ದೆ. ಅದ್ಕೆ ಅವನು 'ಮಾನ ...ರ್ಯಾದೆನೂವ ಸಾ' ಅಂತ ಕೇಳಿದ್ದ. ಈಗ ಹೀಗೇ ...ತ್ತಿದ್ದಾನೆ. ಬೇಸರ ಆಯಿತು. ಅದನ್ನು ತೋರಿಸಿಕೊಂಡೆ. ...ತಪ್ಪು ತಿಳೀಬ್ಯಾಡಿ ಸಾ. ಸ್ವಾಮಿಗೋಳು ಅಂದ್ರೆ ನಮ್ಗಿಂತ ...ರೋರು ಅಲ್ವಾ. ಅದ್ಕೆ ಅಂಗಂದೆ ಸಾ. ಅಷ್ಟೇಯ. ... ಸಿನಿಮಾ ನೋಡಬೋದ ಸಾ?'
...ನೋಡ್ಲಿ ಬುಡು. ನಿಮ್ಮಪ್ಪನ ಗಂಟೇನೋಯ್ತದೆ?'
...ಹಂಗಲ್ಲ ಸಾ. ದೇವರ ಬಯ್ದಿರೋ ಸಿನಿಮಾ ಸಾ.'
...ಅಂತೋವ ಕಡ್ಡಾಯ ನೋಡ್ಲೇಬೇಕು. ಯಾಕೇಂತೀಯಾ ...ಕೆಂಗೆ ಯಾವಾಗ್ ದೇವರ ಹೀಯಾಳಿಸಿದಾರೆ ಅನ್ನೊದ ...ತು ಭಕ್ತರಿಗೆ ಇಂತಿಂತ ಕಡೆ ಹಿಂಗಿಂಗೆ ದೇವರಿಗೆ ...ಮಾನ ಮಾಡವ್ರೆ. ನಾವು ಅದನ್ನ ನೋಡಿದ್ದೀವಿ. ನೀವು ...ತಬ್ಯಾಡಿ. ಬ್ಯಾರೆಯವರು ನೋಡೋಕೂ ಬುಡಬ್ಯಾಡಿ ...ಲ್ಲ ತಿಳಿಸಬೇಕಲ್ಲ ಅದ್ಕೆ.'
...ನೋಡಬಾರದ ಸೀನ, ಸಿನಿಮಾವ ತಡೆಯಾಕೆ ಸೆನ್ಸಾರೇ ...ಲ್ಲ ಸಾ.'
...ಅವೆ ನಿಜ ಕಣೊ ಕ್ಯಾತ. ಸೆನ್ಸಾರ್ ಬೋರ್ಡಲಿ ...ನ ಯಾವ ಜಾತಿಯೋವ್ರೋ ಕುಂತಿರ್ತವೆ. ಅವ್ಕೆ ಹಿಂದಿಲ್ಲ ...ದಿಲ್ಲ ಎಂತೆಂತವ್ರೋ ಓಕೆ ಅನ್ತವೆ. ಅದ್ಕೇ ತಿಳಿವಳಿಕೆ ...ೇ ಜನಬೇಕು. ಆ ಕೆಲ್ಸಾವ ಇವರು ಮಾಡ್ತಾ ಅವ್ರೆ.'
...ಹಂಗಾರೆ ಇದೊಂತರ ನೈತಿಕ ಸೆನ್ಸಾರು ಅನ್ನಿ ಸಾ.'
...ಹಂಗೆ ಅನ್ನೊ.'
...ಸರಿ ಸಾ' ಎಂದವನೇ ಏನೋ ಹೊಳೆದವನಂತೆ ...- 'ಹಂಗಾರೆ ಅಶ್ಲೀಲ ಸಿನಿಮಾನೂ ನೋಡಬೇಕಲ್ಲಾ

...ನೋಡಬೇಕು. ಯಾವುದು ಶೀಲ ಯಾವುದು ಅಶ್ಲೀಲ ...ದ ಅರ್ಥೈಸಬೇಕಲ್ಲಾ.'
...ಹಂಗಾರೆ.... ಹಂಗಾರೆ....'
...ಅದೇನು ಹೇಳಲಾ?'
...ಹಂಗಾರೆ ಸ್ವಾಮಿಗೋಳು ಬ್ಲೂ ಫಿಲಂನೂ ನೋಡ್ತಾರಾ

...ಶೂ ಹಲ್ಕಾ ಸಹವಾಸ. ಸೆನ್ಸಾರ್ ಆಗಿರೋ ಸಿನಿಮಾ ...ತ್ತಾರೆ ಅಂದ್ರೆ ಸೆನ್ಸಾರ್ ಆಗದಿರೋ ಸಿನಿಮಾನೂ ...ತ್ತಾರಾ ಅಂತ ಹೇಳಿದ್ರೆ.... ಇದೇನು ಅವನ ಕುಚೋದ್ಯ ...ಣವೊ ಅಥವಾ ದಡ್ಡತನ ಅನ್ನೋಣವೇ ಅನ್ನೋದೆ ...ಲ್ಲಾಗದಲ್ಲಾ...







'ಅವ್ವ' ಚಿತ್ರದಲ್ಲಿ 'ದುನಿಯಾ' ವಿಜಿಯೊಂದಿಗೆ ಮೂತಿಗೆ ಮೂತಿ ಕೊಟ್ಟು ಮುತ್ತಿಡಿಸಿಕೊಂಡಿದ್ದೇ ಬಂತು, ನಾಯಕಿ ಸ್ಮಿತಾಳಿಗೆ ಆನಂತರ ಬಂದಿದ್ದು ಸರಿಸುಮಾರು ಇಪ್ಪತ್ತೈದು ಆಫರ್‌ಗಳು! ಎಲ್ಲವೂ ಇಂಥ ಮುತ್ತು-ಗಮ್ಮತ್ತಿನ ಪಾತ್ರಗಳೇ. ಏನಾದರೂ ಮಾಡಿ ಇಮೇಜು ಬದಲಿಸಿಕೊಳ್ಳಬೇಕು ಎಂದು ತೀರ್ಮಾನಿಸಿದ ಸ್ಮಿತಾ ತನ್ನ ಹೆಸರನ್ನು ನಿವೇದಿತಾ ಎಂದು ಬದಲಿಸಿಕೊಂಡಳು. ನಂತರ 'ಪರಿ' ಚಿತ್ರದಲ್ಲಿ ಕಾಣಿಸಿಕೊಂಡಳು. ಈಗ ಇಮೇಜು ಮೊದಲಿಗಿಂತಲೂ ಹೆಚ್ಚು ಬದಲಾಗಿದೆ! ಯಾಕೆಂದರೆ, 'ಅವ್ವ'ದಲ್ಲಿ ಬರೀ ಚುಂಬಿಸುವ ದೃಶ್ಯಗಳಷ್ಟೇ ಇತ್ತು, 'ಪರಿ'ಯಲ್ಲಿ ಯರ್ರಾಬಿರ್ರಿ ಮಲಗಿ ಏಳುವ ದೃಶ್ಯಗಳೇ ಹೆಚ್ಚು! ಈಗ ಸ್ಮಿತಾ ಮತ್ತೊಮ್ಮೆ ಹೆಸರು ಬದಲಿಸಿಕೊಳ್ಳುತ್ತಾಳಾ ಅನ್ನೋದು ಪ್ರಶ್ನೆ!!

* * * *

ಸದ್ಯ ರಾಜ್ಯಸಭೆ ಸದಸ್ಯನಾಗಿ ಪ್ರಮಾಣವಚನ ಸ್ವೀಕರಿಸಿರುವ ಸಚಿನ್ ತೆಂಡೂಲ್ಕರ್‌ಗೆ ಈಗ ಸಿನಿಮಾ ಹುಚ್ಚೂ ಹೊಕ್ಕಿದಂತಿದೆ! ಸದ್ಯದಲ್ಲೇ ಬಿಡುಗಡೆಯಾಗಲಿರುವ ವಿಧು ವಿನೋದ್ ಚೋಪ್ರಾರವರ 'ಫೆರಾರಿ ಕಿ ಸವಾರಿ' ಎಂಬ ಚಿತ್ರದಲ್ಲಿ ಸಚಿನ್‌ಗೂ ಒಂದು ಪಾತ್ರವಿದೆಯಂತೆ. ಕ್ರಿಕೆಟ್ಟು, ಜಾಹಿರಾತು, ಪಾಲಿಟಿಕ್ಸು, ಈಗ ಪಿಚ್ಚರ್ರು... ಎತ್ತೆತ್ತಲೋ ಸಾಗುತ್ತಿದೆ ಸಚಿನ್ ಸವಾರಿ.



* * * *



ಅಪ್ಪ-ಮಗಳು ಇಬ್ಬರೂ ಸಖತ್ ಬ್ಯುಸಿಯಾಗಿದ್ದಾರೆ. ಒಬ್ಬರು ಹಿರಿತೆರೆಯಲ್ಲಿ, ಇನ್ನೊಬ್ಬರು ಕಿರುತೆರೆಯಲ್ಲಿ! ಯಾರು ಅಂತೀರಾ? ನಿರ್ದೇಶಕ ಓಂ ಪ್ರಕಾಶ್ ರಾವ್ ಮತ್ತು ಅವರ ಮಗಳು ರಿಷಿ.

ರವಿ ಗರಣಿ ನಿರ್ದೇಶಿಸುತ್ತಿರುವ ಯಶಸ್ವಿ ಧಾರಾವಾಹಿ 'ಕೃಷ್ಣ ರುಕ್ಮಿಣಿ' ಸೇರಿದಂತೆ ರಿಷಿ ಅನೇಕ ಧಾರಾವಾಹಿಗಳಲ್ಲಿ ನಟಿಸುತ್ತಿದ್ದಾಳೆ. ಹಾಗೆಯೇ ಓಂ ಪ್ರಕಾಶ್ ಕೂಡಾ ವರ್ಷಕ್ಕೆ ಮೂರ್ನಾಲ್ಕು ಕಮರ್ಷಿಯಲ್ ಸಿನಿಮಾಗಳನ್ನು ನಿರ್ದೇಶಿಸುತ್ತಾ ಮೈತುಂಬ ಕೆಲಸ ಮೆತ್ತಿಕೊಂಡಿದ್ದಾರೆ. ತನ್ನ ತಾಯಿ ರೇಖಾದಾಸ್‌ರೊಂದಿಗೆ ವಾಸಿಸುತ್ತಿರುವ ರಿಷಿ ಎಲ್ಲೂ ತನ್ನ ಅಪ್ಪನ ಹೆಸರನ್ನು ಬಳಸಿಕೊಳ್ಳದೇ, ಅಮ್ಮನ ಸಹಾಯ ಪಡೆಯದೇ ಅವಕಾಶ ಪಡೆಯುತ್ತಿದ್ದಾಳೆ ಅನ್ನೋದೇ ವಿಶೇಷ.

* * * *



ಬಾಲಿವುಡ್‌ನಲ್ಲಿ ಯಾವುದು ದೀರ್ಘ ಸಮಯದ ಸಿನಿಮಾ? ಅದು ಜೆ.ಪಿ. ದತ್ತಾ ನಿರ್ದೇಶಿಸಿದ್ದ 'ಎಲ್‌ಓಸಿ' ಸಿನಿಮಾವಂತೆ. ಬಾಲಿವುಡ್‌ನ ಅಜಯ್ ದೇವಗನ್, ಸಂಜಯ್ ದತ್, ಸೈಫ್ ಅಲಿ ಖಾನ್, ಅಭಿಷೇಕ್ ಬಚ್ಚನ್, ರಾಣಿ ಮುಖರ್ಜಿ, ಕರೀನಾ ಕಪೂರ್ ಅಲ್ಲದೆ ತೆಲುಗಿನ ಅಕ್ಕಿನೇನಿ ನಾಗಾರ್ಜುನ ಕೂಡ ನಟಿಸಿ 2003ರಲ್ಲಿ ಬಿಡುಗಡೆಗೊಂಡಿದ್ದ ಈ ಸಿನಿಮಾದ ಅವಧಿ ಬರೋಬ್ಬರಿ 4 ಗಂಟೆ 4 ನಿಮಿಷ. ಆ ಕಾರಣಕ್ಕೇ ಇರಬೇಕು ಈ ಸುದೀರ್ಘ ಸಿನಿಮಾ ನೋಡುವುದು ಬಲು ತ್ರಾಸದಾಯಕ ಎಂದು ಅದು ಬಹಳ ದಿನಗಳ ಕಾಲ ಥಿಯೇಟರುಗಳಲ್ಲಿ ಉಳಿಯಲಿಲ್ಲ!



* * * *

ಕನ್ನಡದ ಕಿಚ್ಚ ಸುದೀಪ್ ನಟಿಸಿರುವ, ತೆಲುಗಿನ ಸ್ಟಾರ್ ಡೈರೆಕ್ಟರ್ ರಾಜಮೌಳಿ ನಿರ್ದೇಶಿಸಿರುವ ಬಹುನಿರೀಕ್ಷೆಯ ಬಹುಭಾಷಾ ಚಿತ್ರ 'ಈಗ' ಮೇ 30ಕ್ಕೆ ರಿಲೀಸಾಗುತ್ತಿಲ್ಲ, ಯಾಕೆಂದರೆ ಈ ಚಿತ್ರದ ಗ್ರಾಫಿಕ್ಸ್ ಕೆಲಸ ಇನ್ನೂ ಮುಗಿದಿಲ್ಲ, ಕಡೇ ಪಕ್ಷ ಬಾಕಿ ಕೆಲಸ ಮುಗಿದು ಈ ಚಿತ್ರ ಬಿಡುಗಡೆಯಾಗಬೇಕಾದರೆ ಇನ್ನೂ ಒಂದು ತಿಂಗಳು ಬೇಕಾಗಬಹುದು.


'ಈಗ' ಬಿಡುಗಡೆ ಮುಂದಕ್ಕೆ ಹೋಗುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆ ಒಂದೆರಡು ಬಾರಿ ಇದರ ಬಿಡುಗಡೆಯ ದಿನಾಂಕವನ್ನು ಘೋಷಿಸಲಾಗಿತ್ತು, ಆದರೆ ಆಗ ಆದದ್ದೇ ಈಗಲೂ ಆಗಿದೆ ಅಷ್ಟೇ!



* * * *

ಪೇಜ್ 3 ಫೋಟೋಗಳು, ವಿಜಯ ಮಲ್ಯನ್ ಕಿಂಗ್‌ಫಿಶರ್ ಜಾಹೀರಾತಿನ ಅರೆಬೆತ್ತಲೆ ಬೆಡಗಿಯರ ಕ್ಯಾಲೆಂಡರುಗಳ ಮೂಲಕ ಜನಪ್ರಿಯನಾಗಿರುವ ಫ್ಯಾಷನ್ ಫೋಟೋಗ್ರಾಫರ್ ಅತುಲ್ ಕಸ್ಬೇಕರ್ ಈಗ ತನ್ನದೇ ಒಂದು ಫೋಟೋ ಕಂಪೆನಿ ತೆರೆದಿದ್ದಾನಂತೆ. ಬಹುಶಃ ಈತನ ಹೊಸ ಕಚೇರಿಯ ಗೋಡೆಗಳ ತುಂಬಾ ಈತನೇ ತೆಗೆದ ಅರೆಬೆತ್ತಲೆ ಬೆಡಗಿಯರ ಮಾದಕ ಫೋಟೋಗಳೇ ತುಂಬಿರಬಹುದು!

...ಮಡಿವಂತಿಕೆಯವರ ಸೋಗನ್ನು ...ಖಂಡಿತವಾಗಿ ಖಂಡಿಸಿದ ...ಟೋ, ಧರ್ಮದ ನಶೆ ...ಕೊಂಡು ಮತಿಗೆಟ್ಟ ಜಗತ್ತಿಗೆ ...ಕತೆ, ನಾಟಕಗಳ ಮೂಲಕವೇ ...ಏಟು ಕೊಟ್ಟ. ಅದಕ್ಕಾಗಿ ...ಲ್ಲಿ ಸಂಕಷ್ಟಗಳನ್ನು ...ರಿಸಬೇಕಾಯಿತು.



...ಜಾತಿಧರ್ಮಗಳ ಆಚೆ ನಿಂತು ಮಾನವೀಯ ...ರುಲ್ಲಿ ಹೊಸತನ್ನು ಕೊಟ್ಟ ಜೀವಪರ ಕಾಳಜಿಯ ...ಟೋನ ಇಡೀ ಜೀವನದ ಬಗ್ಗೆ ಮೆಲುಕು ಹಾಕಿ ... ಮತ್ತೆ ಓದಲು ಪ್ರೇರೇಪಿಸುವಂತೆ ಮಾಡಿರುವ ...ೀದರ ಇಸ್ಮತ್ ಘಜೇರ್ ಅವರಿಗೆ ...ವಾದಗಳು.

- ಬಸವರಾಜ ಹಳ್ಳಿ ಹಸಮಕಲ್ (ಸಿಂಧನೂರು)

...ಾಂಗ್ರೆಸ್ ಪಕ್ಷದ ಪಂಚರಂಗಿ ಆಟ

...2012ರ ಮೇ 23 ರ ಸಂಚಿಕೆ ತುಂಬಾ ಚೆನ್ನಾಗಿ ...ಿದೆ.

...ಕುರುಬರ ಕಹಳೆ ಸಿದ್ದು ಮೇಲುಗೈ' ...ವನ್ನು ಓದಿದೆ. ಕಳೆದ ನಲವತ್ತು ...ಗಳಿಂದ ಕಾಂಗ್ರೆಸ್ ರಾಜಕೀಯವನ್ನು ...ದ್ದೇನೆ. ಅಲ್ಲಿ ಹೈಕಮಾಂಡಿನಿಂದ ...ರು ಸೀದಲು ಸಣ್ಣ ಬ್ರೀಫ್‌ಕೇಸಿನಲ್ಲಿ ...ರು ಚೀಟಿಗಳು ಇರುತ್ತವೆ. ಮೂರು ...ಗಳಲ್ಲಿ ಒಬ್ಬರ ಹೆಸರೇ. ಉದಾ... ...ಗೆ ಅನಿಸುವವರು ಬ್ರೀಫ್‌ಕೇಸು ... ಹೊಂದುವವರನ್ನು ಆಯ್ಕೆ ಮಾಡಿ ...ಸಿದರು ಚೀಟಿಗಳಲ್ಲಿ ಹೊಂದುವವರ ...ಇಷ್ಟು ಇದು ಕಾಂಗ್ರೆಸ್‌ನ ಪಂಚರಂಗಿ ಆಟ. ಒಂದು ವೇಳೆ ಕಾಂಗ್ರೆಸ್ ಮೆಜಾರಿಟಿಗೆ ಬಂದರೆ ಸಿದ್ದು ಮುಖ್ಯಮಂತ್ರಿ ಆಗುವುದು ಹಗಲುಕನಸು. ಈ ಸಾರಿ ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ಗ್ಯಾರಂಟಿ. ಗಣಿ ಹಾಗೂ ಲಂಚದ ಬಗ್ಗೆ ತಲೆಕೆಡಿಸಿಕೊಂಡಿರುವವರು ಪತ್ರಿಕೆ ಓದುವವರು ಮಾತ್ರ.


- ತೋರಗಲ್ ಉಮೇಶ್, ರಾಮದುರ್ಗ

ಪತ್ರಿಕೆಯ ಮೇ 32, 2012ರ ಸಂಚಿಕೆ ತುಂಬಾ ಚೆನ್ನಾಗಿ ಮೂಡಿಬಂದಿದೆ. ಸಿದ್ದರಾಮಯ್ಯನವರ ಸಾಮಾಜಿಕ ಬದ್ಧತೆ, ಸಾಮಾಜಿಕ ನ್ಯಾಯದ ಕಳಕಳಿಯನ್ನು ಪ್ರತಿಬಿಂಬಿಸಿದ್ದೀರಿ. ಧನ್ಯವಾದಗಳು.

- ಸಂಗಮೇಶ್ ಎಲ್.ಕೆ. ಬಿಜಾಪುರ

ಜನಪ್ರಿಯ ಕಲಾವಿದರು ಎಷ್ಟೇ ಲಿಬರಲ್‌ಗಳಾದರೂ ಮನಸ್ಸಿನೊಳಗೆ ಜಾತಿ ಸಮರ್ಥನೆಯ ವಿಷಮ ಬುದ್ಧಿ ಜಾಗೃತವಾಗಿರುತ್ತದೆ. ಇದಕ್ಕೆ ಮಾಸ್ಟರ್ ಹಿರಣ್ಣಯ್ಯನವರೂ ಹೊರತಲ್ಲ.

- ಪ್ರಕಾಶ್, ಕಡೂರು



ತಾವು ಅಡ್ಡಡ್ಡ ಮಲಗಿಸಲು ತೀವ್ರವಾಗಿ ಪ್ರಯತ್ನಿಸಿದ 'ಅಣ್ಣಾ ಬಾಂಡ್' ಬಾಕ್ಸ್ ಆಫೀಸಿನಲ್ಲಿ ಎದೆ ಉಬ್ಬಿಸಿ ನಿಂತಿದೆ. ಅದೇರೀತಿ ಎತ್ತಿ ನಿಲ್ಲಿಸಲು ತಾವು ತೀವ್ರವಾಗಿ ಪ್ರಯತ್ನಪಟ್ಟ 'ಕಠಾರಿವೀರ' ಬಾಕ್ಸ್ ಆಫೀಸಿನಲ್ಲಿ ಅಡ್ಡಡ್ಡ ಮಲಗಿ ಮಣ್ಣು ಮುಕ್ಕಿದ್ದಾನೆ.

ಪ್ಲೀಸ್, ಈ ಬಗ್ಗೆ ನಿಮ್ಮ ಕಾಮೆಂಟ್ಸ್???

- ಶ್ರೀಧರ್, ಚಿತ್ರದುರ್ಗ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 13-06-2012 RNI No. KARKAN200



ಅಂಬಿ ಸಂಭ್ರಮದಲ್ಲಿ ಉಪ್ಪಿಗೆ ಅವಮಾನ!

ಮೊನ್ನೆ 'ಅಂಬಿ ಸಂಭ್ರಮ' ಕಾರ್ಯಕ್ರಮದಲ್ಲಿ ನಟ ಉಪೇಂದ್ರ ಮತ್ತು ಅವರ ಪತ್ನಿ ಪ್ರಿಯಾಂಕಾಗೆ ಅಂಬಿಯಿಂದ ಭಾರೀ ಅವಮಾನವಾಯಿತು.

ಅಂದಿನ ಕಾರ್ಯಕ್ರಮ ಕೊನೇ ಹಂತದಲ್ಲಿದ್ದಾಗ ತೆಲುಗಿನ ಹಿಟ್ ನಟ ಚಿರಂಜೀವಿ ಮತ್ತು ತಮಿಳಿನ ಸೂಪರ್‌ಸ್ಟಾರ್ ರಜನಿಕಾಂತ್‌ರನ್ನು ವೇದಿಕೆಗೆ ಕರೆಯಲಾಯಿತು. ಆಗ ರಜನಿಯನ್ನು ಹಿಂಬಾಲಿಸಿ ಉಪ್ಪಿ ಮತ್ತು ಪ್ರಿಯಾಂಕಾ ಕೂಡಾ ವೇದಿಕೆಗೆ ಬಂದರು. ಅವರಿಬ್ಬರ ಹಿಂದೆ ನಿರ್ಮಾಪಕ ಮುನಿರತ್ನ ಕೂಡ ಇಣುಕಾಡುತ್ತಿದ್ದರು. ಇದನ್ನು ಕಂಡ ಅಂಬಿ ಕೂಡಲೇ 'ಹೇ... ನೀವೆಲ್ಲಾ ಯಾಕೆ ಇಲ್ಲಿದ್ದೀರಾ? ನೀವ್ಯಾರೂ ಇಲ್ಲಿರಬಾರ್ದು... ನೀವು ಫೋಟೋ ತೆಗೆಸಿಕೋಬೇಕಿದ್ರೆ ತೆಗೆಸ್ಕೊಂಡೋಗಿ' ಎಂದುಬಿಟ್ಟರು. ಇಂಥವೆಲ್ಲಾ ಮುನಿರತ್ನರಂಥವರಿಗೆ ಮಾಮೂಲಿರಬಹುದು. ಆದರೆ ಏಕ್‌ದಂ ಅಂಬಿ ಹಾಗೆ ಮಾತಾಡಿದ್ದರಿಂದ ಉಪ್ಪಿ ದಂಪತಿಗಳು ಮಾತ್ರ ಭಾರೀ ಮುಖಭಂಗ ಅನುಭವಿಸಬೇಕಾಯಿತು. ಒಂದು ಕ್ಷಣ ತಬ್ಬಿಬ್ಬಾದ ಉಪ್ಪಿ ತಕ್ಷಣ ಪ್ರಿಯಾಂಕಾರನ್ನು ಕರೆದುಕೊಂಡು ವೇದಿಕೆಯಿಂದ ಇಳಿದುಬಿಟ್ಟರು. ಮುನಿ ಅಲ್ಲೇ ಸೈಡಿಗೆ ಮರೆಯಾದರು.



ಎಲ್ಲಾ ಸೂಪರ್‌ಸ್ಟಾರ್‌ಗಳ ಮಾತು ಮುಗಿದನಂತರ ಮತ್ತೆ ಅಂಬಿ 'ಬನ್ರಪ್ಪಾ, ನನ್ನ ಅಣ್ಣ ತಮ್ಮಂದಿರೆಲ್ಲಾ ಬನ್ನಿ... ಫೋಟೋ ತೆಗೆಸಿಕೊಳ್ಳಿ' ಎಂದು ಅನೌನ್ಸ್ ಮಾಡಿದರು. ಆಗ ಕನ್ನಡದ ಹಿಡಿ-ಪುಡಿ ಹೀರೋಗಳೆಲ್ಲಾ ವೇದಿಕೆ ಏರಿ ನಿಂತರು. ಆದರೆ ಉಪ್ಪಿ ಮಾತ್ರ ಮತ್ತೆ ವೇದಿಕೆ ಏರುವ ಮನಸ್ಸು ಮಾಡದೇ ಸ್ಟೇಜಿನ ಮುಂದೆ ಕುಳಿತಲ್ಲೇ ಕೂತಿದ್ದರು. ಉಪ್ಪಿ ಮನಸ್ಸಿಗೆ ಘಾಸಿಯಾಗಿದ್ದು ಸ್ಪಷ್ಟವಾಗಿ ಎದ್ದುಕಾಣುತ್ತಿತ್ತು...

ಅಂಬಿ ಎಷ್ಟೇ ನೇರವಂತರಾದರೂ ಪಕ್ಕದೂರಿನ ಸ್ಟಾರ್‌ಗಳ ಮುಂದೆ ನಮ್ಮವರನ್ನು ಕಡೆಗಣಿಸಿ ಅವಮಾನಿಸಿದ್ದು ತಪ್ಪಲ್ಲವೇ?



ಹರಿಪ್ರಿಯಾ ಮೇಲ್ಯಾಕೆ ಹೊಟ್ಟೆಕಿಚ್ಚು?

ಅದ್ಯಾಕೋ ಗೊತ್ತಿಲ್ಲ! ಹರಿಪ್ರಿಯಾ ವಿಚಾರದಲ್ಲಿ ಉರುವಲು, ಇಂಧನ, ಬೆಂಕಿ ಯಾವುದೂ ಇಲ್ಲದಿದ್ದರೂ ಹೊಗೆ ಮಾತ್ರ ಧಿಮಿಕಿಟ ಧಿಮಿಕಿಟ ಡ್ಯಾನ್ಸು ಮಾಡುತ್ತಿರುತ್ತದೆ.

ಒಂದೆರಡು ವಾರಗಳ ಹಿಂದೆ ಯಡ್ಡಿ ಮನೆಯ ಮೇಲೆ ಸಿಬಿಐ ರೇಡು ಬಿದ್ದಾಗ ಕೆಲವು ಟೀವಿ ವಾಹಿನಿಗಳು 'ಯಡಿಯೂರಪ್ಪನ ಮಗ ವಿಜಯೇಂದ್ರನ ಪರಮಾಪ್ತೆ ಹರಿಪ್ರಿಯಾ ಮನೆ ಮೇಲೆ ಸಿಬಿಐ ದಾಳಿ' ಎಂದು ಬ್ರೇಕಿಂಗ್ ನ್ಯೂಸ್‌ಅನ್ನು ಬಿತ್ತರಿಸಿದ್ದವು! ನಂತರ ಹರಿಪ್ರಿಯಾ "ಹಾಗೆಲ್ಲಾ ಏನೂ ಆಗಿಲ್ಲ" ಎಂದು ಎಲ್ಲ ಚಾನೆಲ್ಲುಗಳಿಗೂ ಮನವರಿಕೆ ಮಾಡಿಕೊಡಬೇಕಿತ್ತು.

ಸದ್ಯ ದಕ್ಷಿಣ ಭಾರತದ ನಾಲ್ಕು ಭಾಷೆಗಳ ಚಿತ್ರಗಳಲ್ಲಿ ಸಿಕ್ಕಾಪಟ್ಟೆ ಬ್ಯುಸಿಯಾಗಿರುವ ಹರಿಪ್ರಿಯಾ ಈಗ ಎಲ್ಲೇ ಹೋದರೂ ಈ ಕುರಿತೇ ಜನರು ಪ್ರಶ್ನಿಸುತ್ತಿದ್ದಾರಂತೆ. 'ತಿರುವಾಂಬಡಿ ತಂಬನ್' ಎಂಬ ಮಲಯಾಳಂ ಚಿತ್ರದ ಪ್ರಚಾರಕ್ಕೆಂದು ಮೊನ್ನೆ ಹರಿಪ್ರಿಯಾ ಕೇರಳಕ್ಕೆ ಹೋಗಿದ್ದಾಗಲೂ ವಿಜಯೇಂದ್ರನ ವೈಭವದ ಕುರಿತೇ ಸಾಕಷ್ಟು ಪ್ರಶ್ನೆಗಳು ಬಂದು ಮೈಮೇಲೆ ಬಿದ್ದವಂತೆ. ಆಗ ಭಯಂಕರ ಕೋಪಕ್ಕೊಳಗಾದ ಹರಿಪ್ರಿಯಾ "ಕರ್ನಾಟಕದಲ್ಲಿ ನನ್ನನ್ನು ಕಂಡರೆ ತುಂಬಾ ಜನಕ್ಕೆ ಹೊಟ್ಟೆ ಉರಿ. ಅದಕ್ಕೆ ನನ್ನ ಬಗ್ಗೆ ಸುಮ್ಮನೇ ಸುಳ್ಳು ಸುದ್ದಿ ಮಾಡುತ್ತಾರೆ" ಎಂದು ಎಗರಾಡಿದಳಂತೆ.

ಪಾಪ ಚಿಕ್ಕ... ಹರಿಪ್ರಿಯಾ ಇಲ್ಲಿಯತನಕ ನಟಿಸಿರುವ ಒಂದೇ ಒಂದು ಚಿತ್ರವೂ ಹಂಡ್ರೆಡ್ ಡೇಸ್ ಓಡಿಲ್ಲ; ಕಡೇಪಕ್ಷ ಒಂದೆರಡು ವಾರ ಕೂಡಾ ಥಿಯೇಟರಿನಲ್ಲುಳಿದಿಲ್ಲ. ನೋಡಲು ಒಂಚೂರು ಸೊಗಸಾಗಿದ್ದಾಳೆ ಅನ್ನೋದನ್ನು ಬಿಟ್ಟರೆ ಈ ಹುಡುಗಿ ನಟನೆಯಲ್ಲಿ ಶ್ಯಾನೆ ವೀಕು. ಆದರೂ ಯಾಕೆ ಈಕೆಯನ್ನು ಕಂಡರೆ ನಮ್ಮವರಿಗೆ "ಹೊಟ್ಟೆ ಉರಿ" ಅನ್ನೋದೇ ಸು...



ಬೇಕಿತ್ತಾ ಬಾಂಡ್ ಸಹವಾಸ?

ಬಾಲಿವುಡ್‌ನ 'ಅಜಬ್ ಗಜಬ್ ಲವ್' ಮತ್ತು 'ಓ ಮೈ ಗಾಡ್' ಎಂಬ ಎರಡು ಚಿತ್ರಗಳಲ್ಲಿ ಬ್ಯುಸಿಯಾಗಿರುವ ಕೊಡಗಿನ ಬೆಡಗಿ ನಿಧಿ ಸುಬ್ಬಯ್ಯ ಅಪ್ಸೆಟ್. ಆಗಿದ್ದಾಳಂತೆ.

ಬಾಲಿವುಡ್‌ನಲ್ಲಿ ಈಕೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲವಾ ಎಂದು ಪ್ರಶ್ನಿಸುವ ಅಗತ್ಯವಿಲ್ಲ. ಯಾಕೆಂದರೆ ನಿಧಿ ಅಸಮಾಧಾನಗೊಂಡಿರುವುದು 'ಅಣ್ಣಾ ಬಾಂಡ್' ಕಾರಣಕ್ಕೆ.

'ಅಣ್ಣಾ ಬಾಂಡ್' ನೋಡಿಬಂದ ನಿಧಿಯ ಫ್ರೆಂಡ್ಸೆಲ್ಲರೂ "ಛೆ, ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಿರುವ ಇಂಥಾ ಪಾತ್ರದಲ್ಲಿ ನೀನು ನಟಿಸಬಾರದಿತ್ತು, ಪ್ರಿಯಾಮಣಿ ಮುಂದೆ ನಿನ್ನನ್ನು ಡೆಮ್ಮಿ ಮಾಡಿಬಿಟ್ಟದ್ದಾರೆ. ಒಳ್ಳೆ ಕ್ಯಾರೆಕ್ಟರ್ ರೋಲ್ ಥರಾ ಇದೆ..." ಎಂಬಿತ್ಯಾದಿಯಾಗಿ ಕಮೆಂಟು ಮಾಡಿದರಂತೆ. ಇದರಿಂದ ನೊಂದ ನಿಧಿ "ನಾನು ಪುನೀತ್ ಸಿನಿಮಾ ಅಂದಕೂಡಲೇ ಪಾತ್ರ ಯಾವುದು ಎಂತಲೂ ಕೇಳದೆ ಒಪ್ಪಿಬಿಟ್ಟೆ. ಆಮೇಲಷ್ಟೇ ಗೊತ್ತಾಗಿದ್ದು ನನ್ನ ಪಾತ್ರ ಇಷ್ಟು ಚಿಕ್ಕದು ಅಂತಾ. ನಾನು ಆ ಸಿನಿಮಾದಲ್ಲಿ ಯಾಕಾದರೂ ನಟಿಸಿದೆನೋ. ಅದಕ್ಕೆ ನನಗಿನ್ನೂ ಆ ಸಿನಿಮಾ ನೋಡೋಕೆ ಮನಸಾಗಿಲ್ಲ" ಎಂದು ಆಪ್ತರಲ್ಲಿ ಹೇಳಿಕೊಳ್ಳುತ್ತಿದ್ದಾಳಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com